ಬಗ್ಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅವರು ೨-೩ ದಿವಸಗಳಿಂದಲೂ ಕೂಡ ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರೂ ಕೂಡ ಅವರನ್ನು ಕರೆಸಿ ವಿಚಾರ ಮಾಡುವುದು ಆಗಲಿ, ಚರ್ಚೆ ಮಾಡುವುದು ಆಗಲಿ ಏನೂ ಕೂಡ ಮಾಡಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಹೇಳಬೇಕು ಅಂತ ನಾನು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ತುರ್ತು ಪರಿಸ್ಥಿತಿಯಲ್ಲಿ ಯಾರು ಯಾರನ್ನು ಕೆಲಸದಿಂದ ತೆಗೆದು ಹಾಕಿದ್ದರೋ ಅವರನ್ನು ವಾಪಸ್ಸು ಕರೆಸಿ ಕೆಲಸ ಕೊಡಬೇಕೆಂದು ಆದೇಶ ಬಂದಿದ್ದರೂ ಕೂಡ ರಾಜ್ಯ ಸರ್ಕಾರ ಈ ಬಗ್ಗೆ ಇನ್ನೂ ಕೂಡ ಯಾವ ಕಾರ್ಯಕ್ರಮವನ್ನೂ ಸಹ ತೆಗೆದುಕೊಂಡಿಲ್ಲಾ. ಇಷ್ಟೇ ಅಲ್ಲ ನಮ್ಮ ಕಣ್ಣು ಮುಂದೇನೇ ನಿನ್ನೆ ಅಖಿಲ ಭಾರತಾದ್ಯಂತ ಪತ್ರಿಕೋದ್ಯಮಿಗಳ ಸ್ಟ್ರೈಕ್ ಆಯಿತು. ಈವೊತ್ತು ನಮ್ಮ ರಾಜ್ಯದಲ್ಲಿ ವಿಶಾಲ ಕರ್ನಾಟಕದ ಆಫೀಸಿನ ಬಾಗಿಲು ಇನ್ನೂ ತೆಗೆದೇ ಇಲ್ಲ. ಅಲ್ಲಿರುವ ಕಾರ್ಮಿಕರನ್ನು ಹೊರಗೆ ಹಾಕಿದ್ದಾರೆ. ಆ ಮಾಲೀಕರನ್ನು ಕರೆಸಿ ಅವರನ್ನು ರೀ ಅಪಾಯಿಂಟ್ ಮಾಡುವ ಹಾಗೆ ಇನ್ನೂ ಯಾವ ಕಾರ್ಯಕ್ರಮವನ್ನೂ ಸಹ ತೆಗೆದು ಕೊಂಡಿಲ್ಲಾ. ಅವರದ್ದು ಇನ್ನೂ ಅನೇಕ ಬೇಡಿಕೆಗಳು ಇವೆ. ಇದರ ಬಗ್ಗೆ ಅವರುಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನಿಮಗೆ ಹೇಳಬೇಕಾದರೆ ಮೊದಲು ನಮ್ಮ ರಾಜ್ಯದಲ್ಲಿ ಒಂದು ತ್ರಿಪಕ್ಷ ಸಮಿತಿ ಇತ್ತು. ಎಮರ್ಜೆನ್ಸಿ ಬಂದಮೇಲೆ ಅದನ್ನು ರದ್ದು ಮಾಡಿಬಿಟ್ಟು ಎ.ಐ.ಟಿ.ಎ.ಸಿ. ಅದು ಇದು ಅಂತ ಇಟ್ಟು ಕೊಂಡರು. ಈವೊತ್ತು ಅದೂ ಇಲ್ಲ. ಅವರುಗಳು ಈವೊತ್ತಿನ ದಿವಸ ಯಾರ ಕೂಡ ಚರ್ಚೆ ಮಾಡಬೇಕು ? ಆದುದರಿಂದ ಅವರುಗಳನ್ನು ಕರೆಸಿ ಚರ್ಚೆ ಮಾಡಿ ಅವರುಗಳು ಕೈಗೊಂಡಿರತಕ್ಕಂಥ ಸತ್ಯಾಗ್ರಹವನ್ನು ಕೈಬಿಡಿಸಬೇಕಾ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಈ ವಿಚಾರದಲ್ಲಿ ನಾನೂ ಕೂಡ ಒಂದು ಮಾತು ಹೇಳುತ್ತೇನೆ, ಎ.ಐ.ಟಿ.ಯು.ಸಿ. ಕಾರ್ಮಿಕರು ಇದರ ಬಗ್ಗೆ ಅನ್ಯ ಸತ್ಯಾಗ್ರಹವನ್ನು ೧೩ನೇ ತಾರೀಕಿನಿಂದಲೂ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಒಂದು ಮನವಿಯನ್ನೂ ಕೂಡ ಅರ್ಪಿಸಿದ್ದಾರೆ. ಪ್ರೊಫೆಷನಲ್ ಟ್ಯಾಕ್ಸ್ ಅನ್ನು ರದ್ದು ಮಾಡುವುದು ಇನ್ನು ಇತರ ವಿಷಯಗಳ ಬಗ್ಗೆ ಅವರ ಡಿಮ್ಯಾಂಡ್ಸ್ ಅನ್ನು ಇಟ್ಟಿದ್ದಾರೆ. ಇಷ್ಟೇ ಅಲ್ಲದೆ ಶಂಕರ್ ಟೆಕ್ಸ್‌ಟೈಲ್ ಮಿಲ್ ಈವೊತ್ತಿನ ದಿವಸ ಡೆಡ್ ಲಾಕ್ ಆಗಿದೆ ಅದನ್ನು ತೆಗೆಸಬೇಕು ಎಂದು ಹೇಳುತ್ತೇನೆ. ಅಲ್ಲಿಯ ಕಾರ್ಮಿಕರನ್ನು ಪುನಃ ವಾಪಸ್ಸು ಕೆಲಸಕ್ಕೆ ತೆಗೆದು ಕೊಳ್ಳುವಂತೆ ತಕ್ಕ ಕಾರ್ಯಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† ಶ್ರೀ ಸಿ. ಎನ್. ಪಾಟೀಲ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಂದು ಬೆಳಗ್ಗೆ ಫೋರಂ ಆಫ್ ಟ್ರೇಡ್ ಯೂನಿಯನ್ಸ್‌ನ ಕೆಲವು ಪ್ರತಿನಿಧಿಗಳು ನನ್ನ ಹತ್ತಿರ ಬಂದಿದ್ದರು. ಅವರು ಸಾಯಂಕಾಲ ೪ ಗಂಟೆ ಒಳಗೆ ಒಂದು ಮೆಮೋರ್‍ಯಾಂಡಂ ಅನ್ನು ಬರೆದು ಕೊಡುವುದಕ್ಕೆ ಟೈಂ ತೆಗೆದುಕೊಂಡು ಹೋಗಿದ್ದಾರೆ. ನಾಳೆ ದಿವಸ ಇದಕ್ಕೆ ಸಂಬಂಧಪಟ್ಟಂತೆ ಇರುವ ಲೇಬರ್ ಅಧಿಕಾರಿಗಳನ್ನು ಮತ್ತು ಇಂಡಸ್ಟ್ರೀಸ್ ಅಧಿಕಾರಿಗಳನ್ನು ಮತ್ತು ರಿಜಿಸ್ಟ್ರಾರ್ ಆಫ್ ಕೋ ಅಪರೇಟೀವ್ಸ್ ಅವರನ್ನೂ ಕರೆಸಿ ಈ ಬಗ್ಗೆ ಚರ್ಚೆ ಮಾಡಿ ಡೆಡ್ ಲಾಕ್ ಮಾಡಿರುವ ಈ ಶಂಕರ್ ಟೆಕ್ಸ್‌ಟೈಲ್ ಮಿಲ್ ಬಗ್ಗೆ ಏನಾದರೂ ಒಂದು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ತಮ್ಮ ಮೂಲಕ ಅವರಿಗೆ ಭರವಸೆ ಕೊಡುತ್ತೇನೆ.

ಇನ್ನು ಎಮರ್ಜೆನ್ಸಿ ಸಮಯದಲ್ಲಿ ಕಾರ್ಖಾನೆಗಳಲ್ಲಿ ಯಾರನ್ನು ಡಿಸ್‌ಮಿಸ್ ಮಾಡಿದ್ದರೋ ಅವರನ್ನು ಇನ್ನೂ ರೀ ಅಪಾಯಿಂಟ್ ಮಾಡಿಲ್ಲಾ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುವುದು ಏನೆಂದರೆ ಯಾವ ಕಾರ್ಖಾನೆಗಳಲ್ಲಿ ಅವರನ್ನೂ ಇನ್ನೂ ಕೆಲಸಕ್ಕೆ ವಾಪಸ್ಸು ತೆಗೆದು ಕೊಂಡಿಲ್ಲವೋ ಅದನ್ನು ನನ್ನ ಗಮನಕ್ಕೆ ತ ದರೆ ಆ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅಧ್ಯಕ್ಷರ ಮೂಲಕ ತಮಗೆ ಭರವಸೆ ಕೊಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಬಗ್ಗೆ ಎ.ಐ.ಟಿ.ಯು.ಸಿ. ಅವರನ್ನು ಕರೆಸಿ ಮಾತುಕತೆ ನಡೆಸಿ. ಅವರು ಈ ಬಗ್ಗೆ ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅದರ ಬಗ್ಗೆ ಒಂದು ಮನವಿಯನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಕಾರ್ಮಿಕರ ಕೆಲವು ಸಮಸ್ಯೆಗಳು

ಏನು ಇವೆಯೋ ಅದರ ಬಗ್ಗೆ ಮಾನ್ಯ ಎಂ. ಎಸ್. ಕೃಷ್ಣನ್ ಅವರೂ ಕೂಡ ಈ ದಿನ ಸಾಯಂಕಾಲದಿಂದ ಅನ್ನಸತ್ಯಾಗ್ರಹ ಮಾಡುವವರಾಗಿದ್ದಾರೆ. ಆದುದರಿಂದ ಈ ಬಗ್ಗೆ ಇರತಕ್ಕಂಥಾ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

SRI D. DEVARAJ URS (Chief Minister).—I appeal to the hon'ble. Member Krishnan not to go on hunger strike. As regards Shankara Textiles we are at it. As regards Shama Rao Dress-manufacturing company, there are certain genuine problems. My understanding is that the number of workers is more than what is needed. I think something will have to be done. I want the labour leaders as well as the management to reduce that number. Otherwise it is impossible to revive the dress-manufacturing unit. That is why I have asked the Industries Secrctary and the Labour Secretary to go into this question together and find out a solution and I am confident that a solution will come out.

So far as the Shankara Textiles are concerned, the labour leaders from that area have met the Industries Secretary a few days back and he has been apprised of the situation. I would request Mr. Krishnan as well as other labour leaders who are connected with the Shankara Textile Labour Union to advise the workers not to make galata because we are at it. Merely making galata every day will not solve the problem. Government is doing its best. It is a private mill. If I had the power I would have taken it over but I don't have the powers. That is why I am trying to introuce a Bill which is in the offing. What happens is, we are not in a position to take over these mills directly, There is the Government of India enactment and they come into the picture. Secondly in respect of any mills that is taken over, all the liabilities will be mostly on our heads. Why does a mill become sick ? Because they will not have paid tax and so many other things. The accumulations will sometimes run into crores and anybody taking over these mills will have to inherit all the liabilities. In wheatever manner one runs a sick mill it can never be revived at all; the whole thing earned will have to be spent to clear the arrears and the earnings will not be enough at all. So, the question of saving something does not arise. We want to introduce a legislation to see how best prior charges are to be met, in what manner and in what time. Any way I can say that the Government is not sleeping over the matter. We are actively at it and we will solve the problem to the best of our ability depending on the powers that are available to us.

2-00 P. M.

ಶ್ರೀ ಎಚ್. ಡಿ. ದೇವೇಗೌಡ.—ಅನೇಕ ಡಿಪಾರ್ಟ್‌ಮೆಂಟುಗಳ ಹಂಗಾಮಿ ನೌಕರರಿಗೆ ಸಂಬಂಧ ಪಟ್ಟಂತೆ ಸೂಚನೆ ಕಳಿಸಿಕೊಟ್ಟಿದ್ದೇನೆ. ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಕಾಂಟ್ರಾಕ್ಟ್

ಬೇಸಿಸ್ ಮೇಲೆ ತೆಗೆದುಕೊಂಡಿದ್ದವರನ್ನು ತೆಗೆದುಹಾಕಿದ್ದಾರೆ. ಇದರ ಬಗ್ಗೆ ಕೂಡ ಸೂಚನೆ ಕಳುಹಿಸಿ ಕೊಟ್ಟಿದ್ದೇನೆ. ಹಂಗಾಮಿ ನೌಕರರು ಸ್ಟ್ರೈಕ್ ಮಾಡುತ್ತಿದ್ದಾರೆ. ದಯವಿಟ್ಟು ಇವೆರಡರ ಬಗ್ಗೆ ಸಾಧ್ಯವಾದರೆ ನಾಳೆ ಉತ್ತರ ಕೊಡಿಸಬೇಕು.

SRI D. DEVARAJ URS.—I will look into it and reply.

ಅಧ್ಯಕ್ಷರು.—ಉತ್ತರ ಬಂದ ತಕ್ಷಣ ಹಾಕುತ್ತೇನೆ.

Discussion under Rule 59

re: decision of Government to take up the Varuna Canal Scheme

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ವರುಣಾನಾಲೆ ಯೋಜನೆ ಬಗ್ಗೆ ಎರಡೂವರೆ ಗಂಟೆ ಕಾಲ ಚರ್ಚೆ ಮಾಡಬೇಕು ಎಂದು ನಾವು ಕೇಳಿದ್ದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ನಾನು ಬಹಳ ಹೆಚ್ಚು ವಿವರಣೆಗಳನ್ನು ಹಾಗೂ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅದಕ್ಕೆ ಕಾರಣವಿಷ್ಟೆ. ಕೃಷ್ಣರಾಜ ಸಾಗರದಿಂದ ೧೦ ಟಿ.ಎಂ.ಸಿ. ನೀರನ್ನು ಮೈಸೂರು ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶಗಳೇನಿವೆ ಅವುಗಳಿಗೆ ಒದಗಿಸಬೇಕು ಎಂದು ನಿರ್ಣಯ ಮಾಡಿದ್ದಾರೆ. ಈ ನಿರ್ಣಯದ ಬಗ್ಗೆ ಸಾಕಷ್ಟು ವಾದ ವಿವಾದ ನಡೆದಿದೆ. ಇದರ ಬಗ್ಗೆ ರಾಜಕೀಯವಾಗಿ ಪ್ರಸ್ತಾಪವಾಗಿದೆ. ಈ ವಾದವಿವಾದ ಆದಮೇಲೆ ಮೊನ್ನೆ ತಾನೇ ಸರ್ಕಾರ ಒಂದು ತಾಂತ್ರಿಕ ಸಮಿತಿಯನ್ನು ಕೂಡ ನೇಮಕಮಾಡಿ ಅಭಿಪ್ರಾಯ ಸಂಗ್ರಹಣೆ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದಾರೆ; ಅದು ಪತ್ರಿಕೆಯಲ್ಲಿ ಬಂದಿದೆ. ಇವತ್ತು ಯಾವುದೇ ಭಾಗದಲ್ಲಿ ನೀರನ್ನು ಉಪಯೋಗ ಮಾಡುವುದರಲ್ಲಿ ಈ ಒಂದು ನೀರಿನ ಉಪಯೋಗಕ್ಕೆ ಸಂಬಂಧಪಟ್ಟಂತೆ ರಾಜಕೀಯ ಬಣ್ಣ ಹಚ್ಚುವುದು ಯೋಗ್ಯವಲ್ಲ. ಜೊತೆಗೆ ಪ್ರದೇಶ ಪ್ರದೇಶಗಳ ತಿಕ್ಕಾಟಕೂಡ ಯೋಗ್ಯವಲ್ಲ. ಅದು ಮಂಡ್ಯಜಿಲ್ಲೆಯಾಗಲೀ ಅಥವಾ ಮೈಸೂರು ಜಿಲ್ಲೆಯಾಗಲೀ, ಒಂದು ಕಡೆ ಅನುಕೂಲ ಪಡೆಯುವುದು, ಮತ್ತೊಂದು ಕಡೆ ಸತ್ಯಾಗ್ರಹ ಮಾಡುವುದು ಆಗಬಾರದು ಇದಕ್ಕೆ ಯಾವುದೇ ರಾಜಕೀಯ ಬಣ್ಣವನ್ನು ಹಚ್ಚುವುದಕ್ಕೆ ನನ್ನ ಸಮ್ಮತಿ ಇಲ್ಲ. ನೀರಿನ ಒಟ್ಟು ಪ್ರಮಾಣವೆಷ್ಟು ಮತ್ತು ಅದನ್ನು ಹೇಗೆ ಬಳಸಬೇಕು, ಯಾವ ಭಾಗದಲ್ಲಿ ಬಳಸಬೇಕು ಎಂದು ನಿರ್ಣಯತೆಗೆದುಕೊಳ್ಳುವಾಗ ಯಾವ ಆದ್ಯತೆ ಮೇಲೆ ನಿರ್ಣಯ ತೆಗೆದುಕೊಳ್ಳಬೇಕು ಎನ್ನುವುದನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಂಡು ನಿರ್ಣಯಮಾಡಬೇಕು ಎನ್ನುವುದನ್ನು ನಾನು ಸೂಚ್ಯವಾಗಿ ತಿಳಿಸ ಬಯಸುತ್ತೇನೆ. ೧೯೭೦ರಲ್ಲಿ ಈ ವರುಣಾನಾಲೆ ಮಂಜೂರಾತಿಯಾಗಿ ಅಂದಿನ ಸರ್ಕಾರದವರು ಬಹುಶಃ ೧೯೭೧ರಲ್ಲಿ ಇದಕ್ಕೆ ಅಸ್ತಿಭಾರ ಹಾಕಲಿಕ್ಕೆ ಹೋದರು. ಆಮೇಲೆ ರಾಜಕೀಯವಾದ ಪ್ರಾರಂಭವಾಯಿತು, ಅದನ್ನು ಅಲ್ಲಿಗೇ ಕೈಬಿಟ್ಟರು. ಆದಾದಮೇಲೆ ನಮ್ಮ ಈಗಿನ ಸರ್ಕಾರ ೧೯೭೭ರಲ್ಲಿ ಈ ನಿರ್ಣಯ ಮಾಡಿದ್ದಾರೆ. ೧೯೭೦ರಲ್ಲಿ ಒಂದು ಸಾರಿ ಅಂದಿನ ಸರ್ಕಾರ ನಿರ್ಣಯ ಮಾಡಿತ್ತು ನಂತರ ಜನತೆಯ ಒತ್ತಡಕ್ಕೆ ಮಣಿದು ಅದು ಬೇಡ ಎಂದು ಸ್ವಲ್ಪ ಮುಂದೂಡಿದರು ಎಂದು ಹೇಳಬಹುದು. I do not know whether it has been further referred to the technical committee for examination because I have not gone through the connected papers. ಅದು ನನಗೆ ಗೊತ್ತಿಲ್ಲ. ಅದರೆ ೧೯೭೭ನೇ ಇಸವಿ ಜೂನ್ ೬ನೇ ತಾರೀಖು ಇದರ ಬಗ್ಗೆ ಪುನಃ ಸಚಿವಸಂಪುಟದಲ್ಲಿ ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನ ಮಾಡಿದ ಮೇಲೆ ಅಂದರೆ ಹಿಂದಿನ ಆರ್ಡರ್ ರದ್ದಾಗಿತ್ತೇನೋ ಎನ್ನುವ ಸಂಶಯ ಬರುತ್ತದೆ. ಅದನ್ನು ದಯಮಾಡಿ ಮುಖ್ಯ ಮಂತ್ರಿಗಳು ತಿಳಿಸಬೇಕು. ಸಚಿವ ಸಂಪುಟದ ಸದಸ್ಯರೂಕೂಡ ಇದಕ್ಕೆ ನಾನು ಭಾಗಿಯಲ್ಲ ಎಂದು ಹೇಳಿದ್ದಾರೆ. ಇದಕ್ಕೆ ನಾನು ರಾಜಕೀಯ ಬಣ್ಣವನ್ನು ಹಚ್ಚಲು ಹೋಗಲಿಕ್ಕೆ ತಯಾರಾಗಿಲ್ಲ. ನಾನು ಈ ಒಂದು ಸಂದರ್ಭದಲ್ಲಿ ಸರ್ಕಾರಕ್ಕೆ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಏನೆಂದರೆ, ಇಂತಹ ಜಟಿಲವಾದ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಕಾಲದಲ್ಲಿ ನಮ್ಮ ಸರ್ಕಾರ ವಿರೋಧಿಪಕ್ಷ ಮತ್ತು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯ ಮಾಡತಕ್ಕ ಒಂದು ಒಳ್ಳೆಯ ಸತ್ಸಂಪ್ರದಾಯವನ್ನು ಹಾಕಬೇಕಾಗಿತ್ತು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿಕೊಡಬೇಕಾಗಿಲ್ಲ. ಬಹಶಃ ಕಳೆದ ೪ ವರ್ಷಗಳಿಂದೀಚೆಗೆ ಈ ನೀರಿನ ಬಳಕೆ ವಿಷಯದಲ್ಲಿ ಇರತಕ್ಕಂಥ ಜಟಿಲ ಸಮಸ್ಯೆ ಬಗೆ ನಿರ್ಣಯ

ಮಾಡುವಾಗ ನಮ್ಮನ್ನೂ ಕೂಡ ವಿಶ್ವಾಸಕ್ಕೆ ಇಟ್ಟುಕೊಂಡು ನಿರ್ಣಯ ಮಾಡಿದ್ದರೆ ನಾವೂ ಕೂಡ ಸಮಭಾಗಿಗಳಾಗಿರುತ್ತಿದ್ದೆವು. ರಾಜ್ಯದ ಹಿತಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕು ಎಂದು ನಿಮಗೆ ಎಷ್ಟು ತೀವ್ರತೆ ಇದೆಯೋ ಅಷ್ಟೇ ತೀವ್ರತೆ ನಮಗೂ ಕೂಡ ಇದೆ. ಈ ವಿಷಯದಲ್ಲಿ ನೀವು ಈ ಸದನ ಮತ್ತು ವಿರೋಧಿ ಪಕ್ಷವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾಗಿತ್ತು. ಕೆಲವು ವಿಷಯಗಳನ್ನು ಬಹಿರಂಗವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂದಲ್ಲ. ಚರ್ಚೆ ಮಾಡುವುದರಿಂದ ಕೆಲವು ತೊಡರು ಇದೆ. ಕಾವೇರಿ ಬೇಸಿನ್ ನೀರನ್ನು ಉಪಯೋಗ ಮಾಡುವಾಗ ೧೯೬೪ರಲ್ಲಿ ಈ ಸದನದಲ್ಲಿ ಒಂದು ಖಾಸಗೀ ನಿರ್ಣಯ ತರುವುದರ ಮುಖೇನ ಅಂದಿನ ಸರ್ಕಾರ ಕಣ್ಣು ತೆರೆಸಿದ್ದು ಜ್ಞಾಪಕವಿರಬಹುದು. A non-official resolution was moved and it was unanimously passed in this House—the resolution on the utilisation of Cauvery Waters. That was in 1964. ಆದುದರಿಂದ ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ಅಂದೇ ಸಂಗ್ರಹಣೆ ಮಾಡಿದ್ದೆ. ಎಲ್ಲಾ ವಿಷಯಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಹೊರಗಡೆ ಬಂದರೆ ಸ್ವಲ್ಪ ಮಾತನಾಡೋಣ ಎಂದು ಸೂಚನೆ ಕೊಟ್ಟೆ. ನನಗೆ ರಾಜಕೀಯವಾಗಿ ಅವರ ಮೇಲೆ ಟೀಕೆ ಮಾಡುವುದಕ್ಕೆ ಇಷ್ಟವಿಲ್ಲ. ಏಕೆಂದರೆ, ಇದು ರಾಜ್ಯದ ಸಮಸ್ಯೆ ಇದೆ. ಇದು ನಮ್ಮ ರಾಜ್ಯದ ಸಮಸ್ಯೆಯಾಗಿರುವುದರಿಂದ ಬಹಳ ಎಚ್ಚರಿಕೆಯಿಂದ ಇದರ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ನಮ್ಮ ಹಿಂದಿನ ಮಾಜಿ ಪಿ.ಡಬ್ಲ್ಯು.ಡಿ ಮಂತ್ರಿಯವರು ಈ ಬಗ್ಗೆ ಭಾಷಣ ಮಾಡಿದ್ದಾರೆ. ಇದು ಒಂದೊಂದು ಸಾರಿ ಅವರ ಕುತ್ತಿಗೆಗೆ ಬರುತ್ತದೆ. ಭಾಷಣ ಮಾಡುವುದು ಅಷ್ಟು ಸುಲಭವಲ್ಲ. ಅವರು ನಾವು ಈ ಹೇಮಾವತಿ ಪ್ರಾಜೆಕ್ಟ್‌ನಿಂದ ೧೦ ಟಿ.ಎಂ.ಸಿ.ಎಫ್.ಟಿಯಷ್ಟು ನೀರನ್ನು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ ಎಂದು ಹೇಳಿ ಯಾವಾಗ ಭಾಷಣ ಮಾಡಿದರೋ ಅದು ಪೇಪರ್‌ನಲ್ಲಿ ದೊಡ್ಡದಾಗಿ ಬಂದು ತಮಿಳುನಾಡು ಸರ್ಕಾರದವರು ನಮ್ಮ ಮುಂದೆ ಪ್ರಯೋಗ ಮಾಡಿದ್ದಾರೆ. ಈ ಬಗ್ಗೆ ನೆಗೋಸಿಯೇಷನ್ ಟೇಬಲ್ ಮುಂದೆ ಕೂತು ಆಗಿನ ಮಾಜಿ ಪಿ.ಡಬ್ಲ್ಯು.ಡಿ ಮಂತ್ರಿಯವರ ಮೇಲೆ ಅಟ್ಯಾಕ್ ಮಾಡಿದರು, ಆದ್ದರಿಂದ ಈ ರೀತಿ ಆಗಬಾರದು. ಇವತ್ತು ಅಂತಿಮವಾಗಿ ಕಾವೇರಿ ಬೇಸಿನ್‌ನಲ್ಲಿ ನಮ್ಮ ಭಾಗಾಂಶ ಎಷ್ಟು ಎಂಬತಕ್ಕಂಥಾದ್ದು ಇನ್ನೂ ನಿರ್ಣಯವಾಗಿಲ್ಲ. ಆ ಒಂದು ಕಮಿಟಿಯವರು ಎಷ್ಟು ನೀರು ಬೇಕಾಗುತ್ತದೆ ಅದರ ಬಗ್ಗೆ ಅತಿ ಶೀಘ್ರದಲ್ಲಿಯೇ ರಿಪೋರ್ಟನ್ನು ಕೊಡುತ್ತೇವೆಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಅದನ್ನು ನಾನೂ ನೋಡಿದ್ದೇನೆ. ಆದ್ದರಿಂದ ಅಂತಿಮವಾಗಿ ಈ ಕಾವೇರಿ ಬೇಸಿನ್‌ನಿಂದ ನಮಗೆ ಎಷ್ಟು ನೀರು ಸಿಕ್ಕುತ್ತದೆ ಎಂಬುದರ ಬಗ್ಗೆ ತೀರ್ಮಾನವಾಗತಕ್ಕಂಥದ್ದು ಅದಮೇಲೆ ಇನ್ನೂ ಅನೇಕ ಯೋಜನೆಗಳನ್ನು ತ್ವರಿತ ರೀತಿಯಲ್ಲಿ ನಮ್ಮ ಸರ್ಕಾರದವರು ಮಾಡುತ್ತಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವು ಅಡ್ವಾನ್ಸ್ ಸ್ಟೇಜ್‌ನಲ್ಲಿವೆ. ಈಗಾಗಲೇ ಹೇಮಾವತಿ, ಹಾರಂಗಿ, ಕಬಿನಿ ಪ್ರಾಜೆಕ್ಟ್‌ಗಳು ಮುಗಿದಿವೆ. ಇನ್ನು ಕೆಲವು ಪ್ರಾಜೆಕ್ಟ್‌ಗಳು ಬೇಸಿನ್‌ನಲ್ಲಿ ಆಗತಕ್ಕಂಥ ಕಾಲದಲ್ಲಿ ನಮಗೆ ಬರತಕ್ಕಂಥ ಒಟ್ಟು ನೀರು ಎಷ್ಟು? ಅದನ್ನು ಯಾವ ಯಾವ ಭಾಗಕ್ಕೆ, ಯಾವ ಯಾವ ಪ್ರಾಜೆಕ್ಟ್‌ನಲ್ಲಿ ಎಷ್ಟೆಷ್ಟು ನೀರನ್ನು ಯುಟಿಲೈಸ್ ಮಾಡಬೇಕಾಗುತ್ತದೆ ಎಂಬುದನ್ನು ನಿರ್ಣಯ ಮಾಡಬೇಕು. ಏಕೆಂದರೆ ಆ ಪ್ರಾಜೆಕ್ಟ್‌ಗಳನ್ನು ಮಾಡಬೇಕೆಂಬ ತೀವ್ರತೆ ಒಂದು ಕಡೆ ಇದ್ದು ಅವುಗಳಿಂದ ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲಾ ರೀತಿಯ ತ್ವರಿತವಾದ ಕ್ರಮಗಳನ್ನು ತೆಗೆದುಕೊಳ್ಳತಕ್ಕಂಥ ದಿಶೆಯಲ್ಲಿ ಇದ್ದರೂ ಕೂಡ ಎಷ್ಟು ನೀರು ನಮಗೆ ಸಿಕ್ಕುತ್ತದೆ, ಆ ನೀರನ್ನು ಎಲ್ಲೆಲ್ಲಿ ಯಾವ ಯಾವ ಭಾಗದಲ್ಲಿ ಹೇಗೆ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ತೀರ್ಮಾನ ಮಾಡತಕ್ಕಂಥಾದ್ದು ಅಷ್ಟೇ ಪ್ರಾಮುಖ್ಯವಾದುದಾಗಿದೆ. ಎಲ್ಲಾ ಕಡೆಗಳಲ್ಲೂ ಕಾಲುವೆಗಳನ್ನು ತೆಗೆದರೆ ನೀರು ಬರುತ್ತದೆ ಎಂದು ಒಪ್ಪಿಕೊಳ್ಳುವುದಕ್ಕೆ ನಾವು ತಯಾರು ಇಲ್ಲ. ವಾಣಿವಿಲಾಸ ಸಾಗರದಿಂದ ಇಷ್ಟು ಎಕರೆ ಭೂಮಿಯನ್ನು ನೀರಾವರಿಯನ್ನಾಗಿ ಮಾಡುತ್ತೇವೆಂದು ಹೊರಟರೂ ಅದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಂತರ ಹೇಮಾವತಿಯಿಂದ ೮ ಲಕ್ಷ ಎಕರೆ ಜಮೀನನ್ನು ನೀರಾವರಿ ಭೂಮಿಯನ್ನಾಗಿ ಮಾಡುತ್ತೇವೆಂದು ಉದ್ದಕ್ಕೂ ಕಾಲುವೆಯನ್ನು ತೆಗೆದರೂ ಸಹ ಅದೂ ಆಗಲಿಲ್ಲ ಆದುದರಿಂದ ಈ ವಿಷಯ ಅಂತಿಮವಾಗಿ ನಿರ್ಣಯವಾಗುವುದಕ್ಕಿಂತ ಮುಂಚಿತವಾಗಿ ತಾವು ತಮ್ಮ ಚೇಂಬರ್‌ಗೆ ಎಲ್ಲರನ್ನೂ ಕರೆದು, ಎಲ್ಲರೂ ಕೂತು ಈ ಬಗ್ಗೆ ಚರ್ಚೆ ಮಾಡೋಣ. ತಾವು ಇದನ್ನು ಸರ್ಕಾರಿ ವಿಷಯವೆಂದು ಹೇಳಿದರೂ ಸಹ ಇದಕ್ಕೆ ವಿರೋದಪಕ್ಷದವರ ವಿಶ್ವಾಸವನ್ನು ತೆಗೆದುಕೊಂಡರೆ ಇದು ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವರುಣಾ ನಾಲೆಯ ಬಗ್ಗೆ ಕೂಡ ನಮ್ಮ ಮನಸ್ಸಿನ

ತೀವ್ರತೆ ಏನಿದೆ ಎಂಬುದನ್ನು ನಾವು ನೀವು ಒಂದುಕಡೆ ಸೇರಿದ್ದಾಗ ಮಾತನಾಡಿದ್ದೇವೆ. ಇನ್ನು ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟ್‌ಗಳಿಂದ ನೀರನ್ನು ಶೇಖರಣೆ ಮಾಡುವುದಕ್ಕೆ ಅವಕಾಶ ಇದೆ ಮತ್ತು ಹಾಗೆ ಶೇಖರಣೆ ಮಾಡಿದಂತ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಅಲ್ಲಿ ಚಾನಲ್ ಕೆಲಸ ಆಗಿಲ್ಲ. ಅಲ್ಲಿ ಚಾನಲ್ ತೆಗೆಯಬೇಕೆಂದು ೧೮ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೂ ಈ ನೀರನ್ನು ತಕ್ಷಣದಲ್ಲಿ ಉಪಯೋಗಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಸರ್ಕಾರದವರು ೩ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಪಂಪಿಂಗ್ ಮಾಡುತ್ತೇವೆ ಎಂದರೂ ೯–೧೦ ವರ್ಷವಾದರೂ ಬೇಕಾಗುತ್ತದೆ. ಈ ಬಗ್ಗೆ ವರ್ಷಕ್ಕೆ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ೯ ವರ್ಷ ಬೇಕು. ಮುಖ್ಯವಾಗಿ ಈ ವರುಣಾ ನಾಲೆಯಿಂದಲೂ ಈ ಕೆಲಸವನ್ನು ಮಾಡುತ್ತೇವೆಂದರೂ ಇದು ಸಾಧ್ಯವಿಲ್ಲ. ತಾವು ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ದಿಶೆಯಲ್ಲಿ ಎಷ್ಟು ಕೋಟಿ ರೂಪಾಯಿಗಳು ಖರ್ಚಾದರೂ ನಾವು ಶಂಕಿಸುವುದಿಲ್ಲ. ಆದರೆ ಅವುಗಳನ್ನು ಮಾಡಿದ್ದಕ್ಕೆ ತಕ್ಕಂಥ ಫಲ ದೊರೆಯಬೇಕು. ವ್ಯಥಾ ಎಕ್ಸ್‌ಪೆಂಡಿಚರ್ ಆಗಬಾರದು. ಇನ್ನು ನಮ್ಮಲ್ಲಿ ಚಾಕೇನಹಳ್ಳಿ ಪ್ರಾಜೆಕ್ಟ್ ಇದೆ. ಅದರ ಬಗ್ಗೆ ಪ್ರಾಸಂಗಿಕವಾಗಿ ಹೇಳಿದ್ದಾರೆ. ೩೦ ಸಾವಿರ ಎಕರೆ ನೀರಾವರಿಯನ್ನಾಗಿ ಮಾಡುತ್ತೇವೆಂದು ೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ೫೦೦ ಎಕರೆಯೂ ನೀರಾವರಿ ಆಗಿಲ್ಲ. ೧೨ ವರ್ಷವಾಯಿತು. ಈಗ ಫೈನಲ್ ರಿಪೋರ್ಟ್ ಆಗಿದೆ. ಇದು ಸ್ಟೇಟ್ ಇಷ್ಯೂ. ರಾಜ್ಯದ ಪ್ರಶ್ನೆ ಬಂದಾಗ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ಕೆಲಸವನ್ನು ಮಾಡುವಾಗ ಎಚ್ಚರಿಕೆಯನ್ನು ವಹಿಸಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ನಾನು ತಾಂತ್ರಿಕ ಅಂಕಿ ಅಂಶಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಯಾವ ವಿಷಯವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ತಾವು ರಾಜಕೀಯವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಡಿ. ದೇವರಾಜ ಅರಸ್.—ನಾವು ಆ ರೀತಿ ತೆಗೆದುಕೊಂಡಿಲ್ಲವಲ್ಲ ; I have never taken it as a political issue. There may be some people who want to make it a political issue. So far as the Government is concerned I want to make it very very clear that we are not taking it as a political issue.

ಶ್ರೀ ಎಚ್. ಡಿ. ದೇವೇಗೌಡ.—ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ದಯಮಾಡಿ ತಾವು ಅಂಗೀಕರಿಸುವುದಾದರೆ ನಾನು ನನ್ನ ಭಾಷಣವನ್ನು ಹೆಚ್ಚು ದೂರ ಮುಂದುವರಿಸುವುದಕ್ಕೆ ಹೋಗುವುದಿಲ್ಲ. ಈ ವರುಣಾ ನಾಲೆಯ ವಿಷಯವಾಗಿ ಏನೊಂದು ತಾಂತ್ರಿಕ ಸಮಿತಿಯನ್ನು ನೇಮಕ ಮಾಡಿದ್ದೀರಿ, ಆ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಕೊಟ್ಟಮೇಲೆ ವಿರೋಧಪಕ್ಷಕ್ಕೆ ಸಂಬಂಧಪಟ್ಟವರು ಮತ್ತು ಆಡಳಿತಪಕ್ಷಕ್ಕೆ ಸಂಬಂಧಪಟ್ಟವರು ಯಾರ್‍ಯಾರು ಶಾಸಕರು ಇದ್ದಾರೆ ಅವರನ್ನೆಲ್ಲಾ ಕರೆಸಿ, ಅವರ ಜೊತೆಯಲ್ಲ ಚರ್ಚೆ ಮಾಡಿ ಅದರ ಆಗುಹೋಗುಗಳ ಬಗ್ಗೆ ಸಮಾಧಾನ ತರತಕ್ಕಂಥ ರೀತಿಯಲ್ಲಿ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕು ಎಂದು ನನ್ನ ಸಲಹೆಯನ್ನು ಕೊಡುತ್ತಿದ್ದೇನೆ. ಆ ಬೇಸಿನ್‌ನಿಂದ ಬಂದಂತಹ ಎಲ್ಲಾ ಶಾಸಕರು ಏನಿದ್ದಾರೆ ಅವರನ್ನೆಲ್ಲಾ ಕರೆಸಿ ಅವರೊಡನೆ ಚರ್ಚೆ ಮಾಡಬೇಕು. ಏಕೆಂದರೆ ತಾಂತ್ರಿಕ ಮಾಹಿತಿ ಕೆಲವರಿಗೆ ಕಡಿಮೆ ಇರಬಹುದು, ಇನ್ನು ಕೆಲವರಿಗೆ ತಾಂತ್ರಿಕ ಮಾಹಿತಿ ಹೆಚ್ಚು ಇರಬಹುದು. ಆದ್ದರಿಂದ ಆ ಬೇಸಿನ್‌ನಿಂದ ಬಂದಂತಹ ಎಲ್ಲಾ ಜನರನ್ನು ಕರೆಸಿ ಅದು ಯಾವ ಮೇಜರ್ ಪ್ರಾಜೆಕ್ಟ್ ಇರಲಿ, ಅದರ ಬಗ್ಗೆ ಅವರೊಡನೆ ಚರ್ಚೆ ಮಾಡಿ, ಸಮನ್ವಯವಾಗ ತಕ್ಕಂಥ ರೀತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ ಈ ವರುಣಾನಾಲೆಯ ಬಗ್ಗೆ ತಾಂತ್ರಿಕ ಕಮಿಟಿಯವರ ರಿಪೋರ್ಟ್ ಮುಂಗ್ದು ಕಮಿಟಿಯ ರಿಪೋರ್ಟ್ ತರಹ ಆಗಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ನಾನು ಮುಂಗ್ದು ಕಮಿಟಿಯ ರಿಪೋರ್ಟ್ ಮೇಲೆ ಅಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಕೊನೆಯದಾಗಿ ಈ ವರುಣಾನಾಲೆಯ ವಿಚಾರದಲ್ಲಿ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿ, ಅವರನ್ನೆಲ್ಲಾ ಸಮಾಧಾನಪಡಿಸತಕ್ಕಂಥ ರೀತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷಿಣಿಯವರೇ, ನನಗೆ ವರುಣಾ ನಾಲೆಯ ವಿಚಾರದಲ್ಲಿ ಶಾಶ್ವತವಾದ ಶ್ರದ್ಧೆ ಇದೆಯೇ ಹೊರತು ಇದಕ್ಕೆ ವಿರುದ್ಧವಾದ ವಿಚಾರ ನನ್ನ ಮನಸ್ಸಿನಲ್ಲಿ ಇಲ್ಲ. ಮೊದಲನೆಯದಾಗಿ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಕಾಲ ಸರಿಯಾಗಿ ಇರಲಿಲ್ಲ. ಇದು ಸ್ವಲ್ಪ

ತೊಡಕಿನ ಸಮಸ್ಯೆಯಾದ್ದರಿಂದ ಇನ್ನೂ ಸ್ವಲ್ಪ ವಿಚಾರ ಮಾಡಿ, ಸರಿಯಾದ ವಾತಾವರಣದಲ್ಲಿ ಈ ವಿಚಾರವನ್ನು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು ಎಂದು ನನಗನ್ನಿಸುತ್ತಿದೆ. ಎರಡನೆಯದಾಗಿ ತಮಿಳುನಾಡಿನ ಜೊತೆಯವರಲ್ಲಿ ಕಾವೇರಿ ನೀರಿಗೆ ಸಂಬಂಧಪಟ್ಟ ವ್ಯವಹಾರ ಇನ್ನೂ ಚರ್ಚೆಯಲ್ಲಿಯೇ ಇದ್ದು ತೀರ್ಮಾನವಾಗದೇ ಇರುವುದರಿಂದ ಈಗ ಇಂತಹ ವಿವಾದಾಸ್ಪದವಾದ ಒಂದು ಕೆಲಸಕ್ಕೆ ಏಕೆ ಕೈ ಹಾಕಿದ್ದು ಎನ್ನುವುದರ ಬಗ್ಗೆ ನನಗೆ ಸ್ವಲ್ಪ ವ್ಯಥೆಯಾಗುತ್ತಿದೆ. ಆದರೂ ಕೂಡ ಇಲ್ಲಿ ಮುಖ್ಯ ಮಂತ್ರಿಗಳು ಇದರ ಬಗ್ಗೆ ನಿರ್ಣಯ ಕೊಡುವಾಗ ಕೃಷ್ಣರಾಜಸಾಗರದಲ್ಲಿ ಆಗಾಗ್ಗೆ ನೀರಿನ ಏರಿಳಿತವಾಗುವಾಗ ಕೃಷ್ಣರಾಜಸಾಗರದ ನೀರನ್ನು ಯಾವ ರೀತಿ ವಿನಿಯೋಗಿಸಬೇಕು ಎನ್ನುವುದರ ಬಗ್ಗೆ ಏನಾದರೂ ಆ ಕಾಲದಲ್ಲಿಯೇ ಇದು ತೀರ್ಮಾನವಾಗಿದೆ ಎಂಬುದಾಗಿ ಹೇಳಿದ್ದರೆ ಬಹಳ ಚೆನ್ನಾಗಿತ್ತೆಂದು ಕಾಣುತ್ತದೆ.

SRI D. DEVARAJ URS.—The Hon. member wants to know whethar this Varuna Canal was there in the beginning. I may inform the hon. member that this Varuna Canal was part of the KRS which was then called Kannambadi.

ಶ್ರೀ ಟಿ. ಆರ್. ಶಾಮಣ್ಣ.—ಈಗ ಮುಖ್ಯವಾಗಿ ನಮ್ಮ ಮುಂದಿರತಕ್ಕ ಪ್ರಶ್ನೆ ಕಾವೇರಿಯಲ್ಲಿ ಶೇಖರಣೆ ಮಾಡತಕ್ಕಂಥ ನೀರು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿ ಉಪಯೋಗಿಸ ಬೇಕೆನ್ನುವುದಾಗಿದೆ, ಈಗ ಇದರ ಬಗ್ಗೆ ಒಂದು ನಿಲುವು, ತೀರ್ಮಾನ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ನನಗೆ ತಿಳಿದ ಹಾಗೆ ಇದಕ್ಕೆ ತಾಂತ್ರಿಕ ಕಮಿಟಿ ಎಂಬುದಾಗಿ ಪ್ರತ್ಯೇಕವಾಗಿ ಏರ್ಪಾಡು ಮಾಡಿದೆ. ಇದಕ್ಕೂ ಮುಂಚೆ ಮುಗ್ದಮ್ ಕಮಿಟಿ ಇದರ ಬಗ್ಗೆ ಒಂದು ತೀರ್ಮಾನ ಮಾಡಿತ್ತು ಎಂಬುದಾಗಿ ನನಗೆ ನೆನಪಿದೆ. ಆ ತಾಂತ್ರಿಕ ಸಮಿತಿಯವರು ಅಲ್ಲಿಗೆ ಹೋಗದೆ, ಸ್ಥಳ ಪರೀಕ್ಷೆ ಮಾಡದೆ, ಅಲ್ಲಿರತಕ್ಕಂಥ ವ್ಯವಸ್ಥೆಯನ್ನೂ ಸಹ ಸರಿಯಾದಂತಹ ರೀತಿಯಲ್ಲಿ ಅಜಮಾಯಿಷಿ ಮಾಡದೆ ಕೇವಲ ಬೆಂಗಳೂರಿನಲ್ಲಿಯೇ ಕುಳಿತುಕೊಂಡು ವರದಿ ತಯಾರು ಮಾಡಿದರೆನ್ನುವ ದೂರು ಇದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಅನುಭವಸ್ಥರು, ಈ ವಿಷಯ ಪೂರ್ತಿ ಅರ್ಥವಾಗದಿದ್ದರೆ I would request the hon. member not to pass such remarks. That is all my appeal to him. ಆದರೆ ಬೆಂಗಳೂರಿನಲ್ಲಿಯೇ ಆ ಕಮಿಟಿ ಯವರು ಕುಳಿತುಕೊಂಡು ವರದಿಯನ್ನು ತಯಾರು ಮಾಡಿದ್ದಾರೆನ್ನುವುದು ಸರಿಯಲ್ಲ. ನೀವು ಹೇಳು ವುದಕ್ಕೆ ನಾನು ಅಡ್ಡಿ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಬೆಂಗಳೂರಿನಲ್ಲಿ ಕೂತಿದ್ದರು, ಇಲ್ಲಿ ಕೂತಿದ್ದರು ಎಂದು ಹೇಳಿದರೆ ಅದು ಒಂದಕ್ಕೊಂದು ಸರಿಯಿಲ್ಲ. We have gone into all these things.

ಶ್ರೀ ಟಿ. ಆರ್. ಶಾಮಣ್ಣ.—ನಾನು ಇದರ ಬಗ್ಗೆ ಹೇಳತಕ್ಕಂಥಾದ್ದು ಇಷ್ಟೆ. ಈಗ ತಾಂತ್ರಿಕ ಸಮಿತಿ ಎಂದೇನು ರಚನೆ ಮಾಡಿದ್ದೀರೋ ಅವರಿಗೆ ಸರಿಯಾದಂಥ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟು ನೀರು ಎಲ್ಲಿ, ಎಷ್ಟು ಶೇಖರಣೆಯಾಗುತ್ತದೆ, ಅಲ್ಲಿ ಈಗ ಇರತಕ್ಕಂಥ ಅಚ್ಚುಕಟ್ಟಿನಲ್ಲಿ ಈ ನೀರು ಬಳಕೆ ಯಾಗುವುದಕ್ಕೆ ಹೆಚ್ಚಿನ ನೀರು ಅಲ್ಲಿ ಸಿಗುತ್ತಿದೆಯೇ, ಅಥವಾ ಈಗ ಇರತಕ್ಕಂಥ ಅಚ್ಚುಕಟ್ಟಿಗೆ ನೀರು ಸಾಕಷ್ಟು ಸಿಗುತ್ತಿಲ್ಲವೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಒಂದು ಸಮಯ ಈ ವರುಣಾ ನಾಲೆಯನ್ನು ತೆಗೆಯದೇ ಹೋದರೆ, ಯಾವ ಪ್ರದೇಶಕ್ಕೆ ನೀರು ಒದಗಿಸಬೇಕೆಂದು ಯೋಚನೆ ಮಾಡಿ ದೆಯೋ ಆ ಪ್ರದೇಶಗಳಿಗೆ ಬೇರೆ ರೀತಿಯಲ್ಲೇನಾದರೂ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಸರ್ಕಾರ ಹೇಳಬೇಕು. ಆದ್ದರಿಂದ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸರಿಯಾದ ಮಾಹಿತಿ ಯನ್ನು ಅವರಿಗೆ ಈಗ ಕೊಡತಕ್ಕಂಥಾದ್ದು ಅವಶ್ಯಕವೆಂದು ಕಾಣುತ್ತದೆ.

SRI D. DEVARAJ URS.—I remember the statement of Dr. Ambed kar who had come to Bangalore just two years before his expiry. He had made a suggestion why not we blast the western ghats so that the rain-bearing cluds can easily pass over this side and cause rain. Similarly we have to think of blasting something to bring water.

ಶ್ರೀ ಕೋಣಂದೂರು ಲಿಂಗಪ್ಪ.—ಈಗಾಗಲೇ ಮುಳುಗಿಸಿದ್ದೀರಿ, ಇನ್ನೂ ಲಾಸ್ ಮಾಡಿ ಅಷ್ಟೇ.

ಶ್ರೀ ಟಿ. ಆರ್. ಶಾಮಣ್ಣ.—ಈಗ ನನಗೆ ತಿಳಿದಿರುವ ಹಾಗೆ ಈ ಪ್ರಶ್ನೆ ನಿಜವಾಗಿಯೂ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಅನ್ವಯವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಇದರಿಂದ ಮಂಡ್ಯದ ಹಾಗೂ ಮೈಸೂರಿನ ಅನೇಕ ಭಾಗಗಳಿಗೆ ಇದರ ನೀರಿನ ಸರಬರಾಜು ಆಗುತ್ತದೆಂದು ಹೇಳುವುದಕ್ಕಾಗು ವುದಿಲ್ಲ. ಈ ಸಮಸ್ಯೆಯಿಂದ ಅನೇಕ ತೊಡಕುಗಳು, ತೊಂದರೆಗಳು ಆಗುತ್ತಾ ಇರುವುದರಿಂದ ಹಿಂದೆ ಒಂದು ಸಾರಿ ತೀರ್ಮಾನವಾದದು ಮತ್ತೆ ಅದು ಮುಂದಕ್ಕೆ ಹೋಯಿತು. ಆದ್ದರಿಂದ ಅದಕ್ಕೆ ಬದಲಾಗಿ ಈಗ ಹೊಸದಾಗಿ ತಾಂತ್ರಿಕ ಸಮಿತಿಯನ್ನು ಏರ್ಪಾಡು ಮಾಡಿರುವುದರಿಂದ ಸರ್ಕಾರದವರು ಈಗ ಎಲ್ಲಾ ವಿಧವಾದ ಅಂಕಿ ಅಂಶಗಳನ್ನು ತಯಾರು ಮಾಡಿ ಇದಕ್ಕೆ ಸಂಬಂಧಪಟ್ಟವರೊಡನೆ ಚರ್ಚೆ ಮಾಡಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ. ಆದರೆ ನನಗೆ ತಿಳಿದ ಹಾಗೆ ಈಗ ಯಾವ ಯಾವ ಪ್ರದೇಶಗಳಿಗೆ ವಿಶ್ವೇಶ್ವರಯ್ಯ ಕೆನಾಲ್–ಕೃಷ್ಣರಾಜಸಾಗ ರದ ಕಾಲುವೆಗಳ ಮೂಲಕ ನೀರನ್ನು ಒದಗಿಸುತ್ತಿದ್ದೀರೋ ಅಂತಹ ಪ್ರದೇಶಗಳಿಗೆ ಯಾವ ರೀತಿಯಲ್ಲಿ ಯೂ ತೊಂದರೆಯಾಗದ ಹಾಗೆ ಯೋಚನೆ ಮಾಡಬೇಕು. ಏಕೆಂದರೆ ಹಿಂದೆ ಯಾರು ಯಾರು ಈಗಾಗಲೇ ಆ ಪ್ರದೇಶಗಳಲ್ಲಿ ಇದರ ಸೌಲಭ್ಯಗಳನ್ನು ಪಡೆಯುತ್ತಿದ್ದರೋ ಅವರಿಗೆ ಅವನ್ನು ಖೋತ ಮಾಡತಕ್ಕು ಥಾದ್ದು ಅಷ್ಟು ಸಾಧುವಾದುದೆಂದು ನನಗೆ ತೋಚುವುದಿಲ್ಲ. ಈಗ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ಕುಡಿಯುವುದಕ್ಕಾಗಿ ಒದಗಿಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಆಗಸ್ತ್ಯ ಮಹರ್ಷಿಗಳು ಪುನ: ಅವತಾರ ಎತ್ತಿ ಬಂದಹಾಗೆ ನೀವು ಇಲ್ಲಿ ಹೇಳುತ್ತಿದ್ದೀರಲ್ಲಾ.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಬಗ್ಗೆ ಯಾವ ತೊಂದರೆಯೂ ಇಲ್ಲ, ಅದರ ಬಗ್ಗೆ ಏನೂ ಸಮಸ್ಯೆ ಇಲ್ಲವೆಂದು ಹೇಳಿದರೆ ನನಗೆ ಬಹಳ ಸಂತೋಷ ವಾಗುತ್ತದೆ.

SRI D. DEVARAJ URS.—Here and now I can assure that there is no such problem for water.

ಶ್ರೀ ಟಿ. ಆರ್. ಶಾಮಣ್ಣ.—ಈ ಪ್ರಶ್ನೆಯಲ್ಲಿ ವಾಸ್ತವಾಂಶಕ್ಕೆ ಬದಲಾಗಿ ಒಂದು ರಾಜಕೀಯ ವಾತಾವರಣ ಬಂತೆಂದು ಅನೇಕರು ವ್ಯಥೆಪಡುತ್ತಿದ್ದಾರೆ. ಇಂತಹ ವಿವಾದಾಸ್ಪದವಾದ ಪರಿಸ್ಥಿತಿ ಮುಂದೆ ಬಂದಹಾಗೆ ಇದನ್ನು ಸರ್ಕಾರ ಕೂಡಲೇ ತೀರ್ಮಾನ ಮಾಡಿದರೆ ಬಹಳ ಒಳ್ಳೆಯದೆಂದು ನಾನು ಹೇಳು ತ್ತೇನೆ. ಆದರೆ ಮುಂಗ್ದು ಕಮಿಟಿಯವರು ಯಾವ ರೀತಿ ಮಾಡಿದರೋ ಆ ರೀತಿ ಮಾಡದೆ ಈಗಿನ ತಾಂತ್ರಿಕ ಸಮಿತಿಯವರು ಆಯಾ ಪ್ರದೇಶಗಳಿಗೆ ಹೋಗಿ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಬಂದು ಸರಿಯಾದಂತಹ ರೀತಿಯಲ್ಲಿ ಒಂದು ವರದಿಯನ್ನು ತಯಾರು ಮಾಡಿಕೊಡುವುದಕ್ಕೆ ಏನೇನು ಮಾಹಿತಿ ಬೇಕೋ ಅವೆಲ್ಲವನ್ನೂ ಅವರ ಮುಂದಿಡುವುದು ಅತ್ಯಾವಶ್ಯಕವಾಗಿದೆ. ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಹೆಚ್ಚಿನ ಅರ್ಹತೆ ಕಡಿಮೆ ಎಂದು ನಾನು ತಿಳಿದಿದ್ದೇನೆ. ಈಗ ಮುಖ್ಯವಾಗಿ ಯಾವ ಯಾವ ಏರಿಯಾಗಳು ಈ ಅಚ್ಚುಕಟ್ಟನಲ್ಲಿ ಬರುತ್ತವೋ ಆ ಅಚ್ಚುಕಟ್ಟಿಗೆ ಸಂಬಂಧಪಟ್ಟ ನೀರು ಯಾವ ವಿಧದಲ್ಲಿಯೂ ಖೋತಾ ಆಗದೇ ಇರುವ ಹಾಗೆ ಮಾಡಬೇಕು. ಈ ಪ್ರಾಜೆಕ್ಟಿಗೆ ಈಗಾಗಲೇ ೧೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದರಿಂದ ಈ ನಾಲೆಯಿಂದ ಈಗ ಹೊಸದಾಗಿ ಯಾವ ಯಾವ ಪ್ರದೇಶಗಳಿಗೆ ಸಾಕಷ್ಟು ನೀರು ಒದಗಿಸಬೇಕೋ ಅವಕ್ಕೆಲ್ಲಾ ಕೂಡಲೇ ಒದಗಿಸುವುದು ಮುಖ್ಯ. ಈ ಯೋಜನೆ ಈಗ ತೆಗೆದುಕೊಳ್ಳುವುದಕ್ಕೆ ಮುಂಚೆ ಎಲ್ಲಾ ವಿಚಾರಗಳನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿ ಮುಂದೆ ಅದರ ಬಗ್ಗೆ ಯಾವ ತಕರಾರು ಇಲ್ಲದ ಹಾಗೆ ಏರ್ಪಾಡು ಮಾಡಬೇಕು. ಮಾನ್ಯ ಶ್ರೀ ದೇವೇಗೌಡರು ಹೇಳಿದಹಾಗೆ ಈಗ ಇದರ ಬಗ್ಗೆ ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಇದಕ್ಕೆ ಸಂಬಂಧಪಟ್ಟ ಮೈಸೂರಿನ ಹಾಗೂ ಮಂಡ್ಯ ಜಿಲ್ಲೆಯ ಶಾಸಕರನ್ನೂ ಹಾಗೂ ವಿರೋಧ ಪಕ್ಷದ ಸದಸ್ಯರನ್ನೂ ಕರೆಸಿ ಎಲ್ಲಾ ಅಂಶಗಳನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಏಕೆಂದರೆ ಇದು ಒಂದು ವಿವಾದಾಸ್ಪದವಾದ ಹಾಗೂ ಚಳುವಳಿಗೆ ಸಂಬಂಧಪಟ್ಟ ವ್ಯವಹಾರ ಆಗಬಾರದು. ಇದರಿಂದ ನಮ್ಮ ರಾಜ್ಯಕ್ಕೆ ಹೆಚ್ಚಿಗೆ ಅನುಕೂಲವಾಗುವುದಕ್ಕೆ ಏನೇನು ಮಾಡಬೇಕೊ ಅದನ್ನು ಯೋಚನೆ ಮಾಡಿ ಅದರ ಬಗ್ಗೆ ಒಂದು ಅಂತಿಮ ತೀರ್ಮಾನ ತೆಗೆದು ಕೊಳ್ಳಬೇಕಾಗುತ್ತದೆ. ಈಗ ಇರತಕ್ಕಂಥ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನನಗೆ ಈ ವಿಚಾರದಲ್ಲಿ ನೋಟೀಸ್ ಕೊಟ್ಟಿರುವ ಪ್ರಕಾರ ಶ್ರೀ ಎಚ್. ಡಿ. ದೇವೇಗೌಡ, ಹಾಗೂ ಶ್ರೀ ಟಿ. ಆರ್. ಶಾಮಣ್ಣ ಅವರಿಬ್ಬರಿಗೂ ರೂಲ್ಸ್ ಪ್ರಕಾರ ಮಾತನಾಡಲು ಅವಕಾಶ ಇದೆ. ಆದ್ದರಿಂದ ಬೇರೆಯವರಿಗೆ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಇರುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಈ ಸಮಸ್ಯೆ ಈಗ ಬಂದಿದೆ. ಇಂತಹ ಸಮಸ್ಯೆಗಳು ಬಂದಾಗ ನಾವು ಪುನಃ ತಮಗೆ ನೋಟೀಸ್ ಕೊಟ್ಟು ನಾಳೆ ಪುನಃ ಚರ್ಚೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತೇ ನಮಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ತಾವು ಮೊದಲೇ ನೋಟೀಸ್ ಕೊಟ್ಟಿದ್ದರೆ ನಿಮಗೂ ಅವಕಾಶ ಕೊಡಬಹುದಾಗಿತ್ತು. ನಾನು ಆ ವಿಚಾರವನ್ನು ಮೊದಲೇ ಹೇಳಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸೆಕ್ಷನ್ ೫೯ರ ಪ್ರಕಾರ ಇಂತಹ ವಿಷಯಗಳಿಗೆ ಎರಡೂವರೆ ಘಂಟೆಗಳ ಕಾಲ ಚರ್ಚೆಗೆ ಅವಕಾಶವಿದೆ.

ಅಧ್ಯಕ್ಷರು.—ಇದಕ್ಕೆ ಮ್ಯಾಗ್ಸಿಮಂ ಟೈಂ ೨½ ಘಂಟೆಗಳು. ಅದಕ್ಕೆ ಮುಂಚೆ ಈ ಚರ್ಚೆ ಮುಗಿಯಿತು ಎಂದು ಹೇಳಿದರೆ ಅದರಿಂದೇನೂ ಬಾಧಕವಿಲ್ಲ. ನೋಟೀಸ್ ಕೊಟ್ಟವರೇ ಮಾತನಾಡಬೇಕೆಂದು ರೂಲ್ಸ್ ಇದೆ. ಬೇರೆಯವರು ಮಾತನಾಡಬೇಕೆಂದರೆ ಅಂತಹವರು ಮೊದಲೇ ನೋಟೀಸ್ ಕೊಡಬೇಕು. The rule says that the member who has given notice may make a short statement and the Minister shall reply shortly.

SRI K. PUTTASWAMY.—That rule is for calling attention notice.

ಶ್ರೀ ಎಚ್. ಎನ್. ನಂಜೇಗೌಡ.—ಸಭಾಧ್ಯಕ್ಷರು ಅವಶ್ಯಕ ಬಿದ್ದರೆ ಅಂತಹ ರೂಲ್ಸ್‌ನ್ನು ಸಸ್‌ಪೆಂಡ್ ಮಾಡಬಹುದು.

2-30 P. M.

† ಶ್ರೀ ಜಿ. ಮಾದೇಗೌಡ (ಕಿರ್ಗಾವಲ).—ಅಧ್ಯಕ್ಷರೇ, ವರುಣಾನಾಲೆಯ ಪ್ರಶ್ನೆ, ಸುಮಾರು ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗಿನಿಂದಲೂ ಇದೆ. ಈ ಬಗ್ಗೆ ಒಂದು ತಾಂತ್ರಿಕ ಸದಸ್ಯರ ಸಮಿತಿಯನ್ನು ನೇಮಕಮಾಡಿರುವ ವಿಷಯದಲ್ಲಿ ಶ್ರೀಮಾನ್ ಶಾಮಣ್ಣನವರು ಒಂದು ಮಾತನ್ನು ಹೇಳಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳಬಾರದು ಎಂದು ಎಚ್ಚರಿಕೆ ಕೊಟ್ಟರು. ಶ್ರೀಮಾನ್ ಮುಗದಮ್ ಸಮಿತಿಯವರಿಗೆ ಹಿಂದೆ ಸಾಕಷ್ಟು ಜನರು ಅದಕ್ಕೆ ಸಂಬಂಧಪಟ್ಟ ರೈತರ ಪ್ರತಿನಿಧಿಗಳು ಏನು ಅವರ ಅಹವಾಲುಗಳನ್ನು ಹೇಳಿದ್ದಾರೆ, ಮತ್ತು ಮೆಮೋರ್ಯಾಂಡಮ್‌ನ್ನು ಕೊಟ್ಟಿರುತ್ತಾರೆ ಅದಕ್ಕೆ ಉತ್ತರ ಏನೇಂಬುದನ್ನು ಹೇಳಬೇಕು. ಬಹುಶಃ ಸಂಬಂಧಪಟ್ಟ ರೈತರ ಪ್ರತಿನಿಧಿಗಳನ್ನು ಶ್ರೀಮಾನ್ ಮುಗುದಮ್ ಸಮಿತಿಯವರು ನೋಡುವಷ್ಟು ಮನಸ್ಸು ಮಾಡಲಿಲ್ಲ. ಸರ್ಕಾರದವರು ಆ ಸಮಿತಿಯವರು ಕೊಟ್ಟ ವರದಿ ಏನಿತ್ತೋ ಅದನ್ನು ನೋಡಿ ನಿಜವಾಗಿಯೂ ಕೂಡ ಇದು ಸತ್ಯಕ್ಕೆ ದೂರವಾದ ಅಂಶವೆಂದು ಅವರು ಒಪ್ಪಿ ವರುಣಾನಾಲೆಯನ್ನು ಕೈಬಿಟ್ಟರು. ಸರ್ ಎಂ. ವಿಶ್ವೇಶ್ವರಯ್ಯನವರು ಈ ಕನ್ನಂಬಾಡಿಯಿಂದ ೧ ಲಕ್ಷದ ೨೦ ಸಾವಿರ ಎಕರೆ ಭೂಮಿಗೆ ನೀರು ಕೊಡಬೇಕೆಂದು ಹೇಳಿದ್ದರು ....

SRI D. DEVARAJ URS.—It is better not to talk all these things. It is not good either in your interest or State's interest. I appeal to the Hon'ble Member not to talk about those things. If he goes on talking all those things, it will lead to some other things. It is not good either to the Member of this side or that side. Government is one with the Members so far as the safeguarding the interest of the achkat and its development. Beyond that if you go on raking it up, it will lead to something else which will not to be good in the interest of the State. Still, beyond that if you talk I cannot tell anything.

ಶ್ರೀ ಜಿ. ಮಾದೇಗೌಡ.—ಒಂದು ಲಕ್ಷದ ೨೦ ಸಾವಿರ ಎಕರೆಗೆ ನೀರು ಒದಗಿಸುವ ಡಿಸೈನ್ ಮಾಡಿದ್ದು ಇವತ್ತು ಕನ್ನಾಂಬಾಡಿ ನೀರನ್ನು ೨ ಲಕ್ಷ ಎಕರೆಗೆ ನೀರು ಒದಗಿಸಲಾಗುತ್ತಿದೆ. ಆದ್ದರಿಂದ ಉಳಿದ ಜಮೀನುಗಳಿಗೆ ನೀರು ಸಾಲುವುದಿಲ್ಲವೆಂದು ರೆಮಿಷನ್ ಕೊಡುತ್ತಾ ಇದ್ದಾರೆ. ಇದರ ಬಗ್ಗೆ ತಜ್ಞರು ಒಪ್ಪಿಕೊಂಡ ಮೇಲೆ ವರುಣಾ ನಾಲೆ ನೀರು ಒದಗಿಸುವ ಪ್ರಶ್ನೆ ಇನ್ನು ಎಲ್ಲಿ ಬರುತ್ತದೆ, ಕನ್ನಾಂಬಾಡಿ ನೀರನ್ನು ಮಂಡ್ಯ ಸಕ್ಕರೆ ಕಂಪನಿಯುವರು ನೀರೀಕ್ಷಣೆ ಮಾಡಿರಲಿಲ್ಲ. ಈಗ ಒಂದು ಸಕ್ಕರೆ ಕಂಪನಿ ಹೋಗಿ ಮೂರು ಸಕ್ಕರೆ ಕಾರ್ಖಾನೆಗಳು ಕೆ. ಆರ್. ಎಸ್. ಅಚ್ಚುಕಟ್ಟಿನಲ್ಲಿ ಪ್ರಾರಂಭವಾಗಿವೆ. ಜೊತೆಗೆ ಕೆಲಸಮಾಡುತ್ತಿವೆ. ಮಂಡ್ಯ ಮತ್ತು ಚಾಮುಂಡಿ ಕಾರ್ಖಾನೆಗಳು ಕಬ್ಬು ಸಾಲುವುದಿಲ್ಲ ವೆಂದು ನೀರಿನ ಅಭಾವವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗ ಸುಮಾರು ೧ ಲಕ್ಷದ ೮೦ ಸಾವಿರ ಎಕರೆ ಡೆವಲಪ್ ಆಗಿದೆಯೆಂದು ನಿಮ್ಮ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ವಂದಿಸುತ್ತೇನೆ. ಇದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿಸಿ ಸಮಗ್ರವಾದ ಒಂದು ವರದಿಯನ್ನು ಕೊಡುವಂತೆ ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಸರಿಯಾದ ರೀತಿಯಲ್ಲಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಇದು ಯಾರೊಬ್ಬರ ಪ್ರಶ್ನೆಯಲ್ಲ. ಇಡೀ ರಾಜ್ಯದ ಪ್ರಶ್ನೆ. ಅದಕ್ಕೋಸ್ಕರವಾಗಿ ಒಂದು ತಾಂತ್ರಿಕ ಸಮಿತಿಯನ್ನು ನೇಮಿಸಲಾಗಿದೆ. They are given full authority to go into any aspects of the question. If I read the G. O. it would be clear to you. It says like this :

> "It was therefore decided by the Government that the High Power Committee consisting of the following shall be examined into all aspects regarding the taking up of the construction of Varuna Canal and furnish a report to the Government."

This is what is states.

ಶ್ರೀ ಜಿ. ಮಾದೇಗೌಡ.—ತಾವು ಈ ತಾಂತ್ರಿಕ ಸಮಿತಿಯನ್ನು ನೇಮಿಸಿರುವುದಕ್ಕೆ ತಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಇಂಥಾದ್ದು, ಅಂಥಾದ್ದು ಬಿಡಬೇಕೆಂದು ಏನೂ ಇಲ್ಲ. ಕಮಿಟಿಯು ವರು ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಸರಿಯಾದ ಒಂದು ವರದಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಬಹಳ ಗಹನವಾದ ಸಮಸ್ಯೆ. ಮಾನ್ಯ ದೇವರಾಜ್ ಅರಸ್‌ರವರ ಮಂತ್ರಿ ಮಂಡಲದಿಂದ ಮಾನ್ಯ ಕೃಷ್ಣರವರು ವರುಣಾನಾಲೆಯ ವಿಚಾರದಲ್ಲಿ ಪತ್ರಿಭಟನೆ ಮಾಡುವುದಕ್ಕೋಸ್ಕರವಾಗಿಯೇ ರಾಜೀನಾಮೆಯನ್ನು ಕೊಟ್ಟರೆಂದು ಕೇಳಿದ್ದೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಅವರು ಒಂದು ಚಕಾರವನ್ನು ಎತ್ತಿರಲಿಲ್ಲವೆಂದು ಹೇಳಿದ್ದನ್ನು ನಾವು ಕೇಳಿದ್ದೇವೆ. ಅದೇನೇ ಇರಲಿ ಆ ವಿಷಯಕ್ಕೆ ನಾನು ಹೋಗುವುದಿಲ್ಲ. ಜನತೆ ಇದನ್ನು ಪ್ರತಿಭಟಿಸಬೇಕೆಂದು ನಮ್ಮ ಜಿಲ್ಲೆಯ ಎಲ್ಲಾ ಶಾಸಕರ ಮೇಲೆ ಒತ್ತಾಯ ತರುತ್ತಿದ್ದಾರೆ. ಜೊತೆಗೆ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಕೂಡ ನಮ್ಮ ಜಿಲ್ಲೆಗೆ ಸಂಬಂಧಪಟ್ಟವರು ಮೌನವಾಗಿರುವುದನ್ನು ನೋಡಿ ಅವರನ್ನೂ ಕೂಡ ಜನರು ಪ್ರತಿಭಟನೆ ಯನ್ನು ಸೂಚಿಸಬೇಕೆಂದು ಒತ್ತಾಯ ತರುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಕನ್ನಾಂಬಾಡಿ ಕೆಳಗಡೆ ಇರುವ ಟೇಲ್ ಎಂಡ್ಸ್‌ಗಳಿಗೆ ತೊಂದರೆ ಯಾಗಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ ?

ಶ್ರೀ ಜಿ. ಮಾದೇಗೌಡ.—ನಾನು ತಮಗೆ ಹೇಳುವುದು ಏನು ಎಂದರೆ ಕನ್ನಾಂಬಾಡಿ ಕೆಳಭಾಗದ ಜನರು ಕಾಳಮ್ಮನ ದೊಡ್ಡಿಯವರೆಗೆ ನೀರಿನ ಅಭಾವ ಇದೆ ಎಂದು ಹೇಳುವುದು ಅದು ತಮಗೂ ಗೊತ್ತಿದೆ. ಕನ್ನಾಂಬಾಡಿಗೆ ಲಕ್ಷಾಂತರ ರೂಪಾಯಿ ಖರ್ಚಾಗಿದ್ದರೂ ಆದರಿಂದ ಕೆಲವೇ ಭಾಗದವರಿಗೆ ಅನುಕೂಲವಾಗಿ ಇನ್ನು ಕೆಲವರು ನೀರನ್ನೇ ಕಂಡಿಲ್ಲ.

೧೫ ವರ್ಷಗಳಿಂದ ಕನ್ನಂಬಾಡಿಯಿಂದ ನೀರು ಸಿಗದೆ ಅನೇಕ ಜನ ಬೆಳೆ ಇಟ್ಟಿರತಕ್ಕಂಥದ್ದೂ ಕೂಡ ಕೈಗೆ ಸಿಕ್ಕದೆ ಅನೇಕ ವಿಧವಾದ ತೊಂದರೆಗಳಿಗೆ ಈಡಾಗಿದ್ದಾರೆ. ಆದುದರಿಂದ ಇವತ್ತು ಈ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕಾಗಿ ಏನೊಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೀರಿ, ಅವರಿಂದ ಆ ಜನಕ್ಕೆಲ್ಲಾ ನ್ಯಾಯ ದೊರಕುತ್ತದೆ ಎನ್ನುವ ಆಶಾಭಾವನೆಯನ್ನು ಇಟ್ಟುಕೊಂಡಿರುವುದರಿಂದ ಆದಷ್ಟು ಆ ಜನತೆಗೆ ನ್ಯಾಯ ಒದಗಿಸಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಆ ಕಮಿಟಿ ರಿಪೋರ್ಟ್ ಬರುವುದರೊಳಗೆ ಮಾನ್ಯ ದೇವೇಗೌಡರವರು ಹೇಳಿದ ರೀತಿಯಲ್ಲಿ ನಾವೆಲ್ಲರೂ ಕಲೆತು ಈ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರತಕ್ಕಂಥದ್ದು ಒಳ್ಳೆಯದು ಎನ್ನುವ ಮಾತನ್ನು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣಿಯವರಿಗೆ ಸಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷಣೀಯವರೇ, ಈ ಸಮಸ್ಯೆಯ ಬಗ್ಗೆ ಮಾತನಾಡಲೇ ಬೇಕು ಎನ್ನುವ ಚಪಲ ನನಗೆ ಇಲ್ಲ. ಇದರಲ್ಲಿ ನನಗೆ ಕೆಲವು ಅನುಮಾನಗಳು ನನ್ನಂಥವನಿಗೇ ಉಂಟಾಗಿದೆ. ನನ್ನಂಥವನು ಎಂದರೆ ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇನೆ ಎನ್ನುವ ಅರ್ಥದಲ್ಲಿ ಹೇಳಿದ್ದು. ಮಾನ್ಯ ಸ್ನೇಹಿತರಾದ ಶ್ರೀ ಮಾದೇಗೌಡರು ಹೇಳಿದ ಹಾಗೆ ಇದು ಬಹಳ ಪ್ರಾಮುಖ್ಯವಾದ ಸಮಸ್ಯೆ. ಇದಕ್ಕೆ ಸಂಬಂಧಪಟ್ಟಂತೆ ಶಾಸಕರ ನಂಬಿಕೆಯನ್ನು ತೆಗೆದುಕೊಂಡು ಅವರಿಗೂ ವಿಷಯ ತಿಳಿಯುವ ಹಾಗೆ ಹೇಳಿದ್ದರೆ ಬಹುಶಃ ನಾನಾ ಅನುಮಾನಗಳಿಗೆ ಆಸ್ಪದ ವಿರುತ್ತಿರಲಿಲ್ಲ. ಇವತ್ತು ನಾವು ವರುಣಾ ಕೆ ಆರ್. ಎಸ್. ಈ ಎರಡನ್ನೇ ತೆಗೆದುಕೊಂಡು ಅಲಾಯಿದ ಚರ್ಚೆ ಮಾಡತಕ್ಕಂಥದ್ದು ಅಲ್ಲ, ಏನಿದೆ ಕಾವೇರಿ ವ್ಯಾಲಿ ಕಾವೇರಿ ನೀರಿನಿಂದ ಉತ್ಪನ್ನವೇನಿದೆ, ಅದರಿಂದ ಎಷ್ಟು ಮಟ್ಟಿನ ಡೆವಲಪ್‌ಮೆಂಟ್ ಆಗಿದೆ ಎನ್ನುವ ಬಗ್ಗೆ ಈ ಎಲ್ಲಾ ಸಮಷ್ಟೀ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗಿದೆ. ಈ ವರುಣಾ ನಾಲೆಯ ಸಮಸ್ಯೆ ಬರೀ ಮಂಡ್ಯಾ ಜಿಲ್ಲೆಯವರಿಗೆ ಸಂಬಂಧಪಟ್ಟದ್ದು ಅಲ್ಲ. ಈ ಸಮಸ್ಯೆ ಇಡೀ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟದ್ದು. ಆದುದರಿಂದ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಇಲ್ಲಿ ಅನುಮಾನ ವ್ಯಕ್ತ ಪಡಿಸಿದಕ್ಕೆಲ್ಲಾ ಮುಖ್ಯಮಂತ್ರಿಗಳವರು ಉತ್ತರ ಕೊಡಬೇಕೆಂದು ಇಲ್ಲ. ನಮಗೆ ಏನು ಅನುಮಾನ ಉಂಟಾಗಿದೆ ಅದನ್ನು ಇಲ್ಲಿ ವ್ಯಕ್ತ ಪಡಿಸಬಯಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅನುಮಾನಗಳಿಗೆಲ್ಲಾ ನಾನು ಉತ್ತರ ಕೊಡದೇ ಸುಮ್ಮನೇ ಕುಳಿತುಕೊಳ್ಳಬೇಕು ಎಂದರೆ ಆಗುವುದಿಲ್ಲ. ನಾವು ಅವರು ಕೇಳಿದ, ವ್ಯಕ್ತಪಡಿಸಿದ ಅನುಮಾನಕ್ಕೆಲ್ಲಾ ಇಲ್ಲಿ ಉತ್ತರ ಹೇಳಬೇಕಾಗುತ್ತದೆ. The point is this. I would only request the Hon'ble Member to come to me. We will discuss. Supposing he goes on raising issues, I will have to answer them. ಆದುದರಿಂದ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅನುಮಾನಕ್ಕೆಲ್ಲಾ ಉತ್ತರ ಕೊಡದೆ ಬಾಯಿ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಉತ್ತರ ಹೇಳುವ ಹಾಗಿದ್ದರೆ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಒಂದೆರಡು ಅನುಮಾನ ಉಂಟಾಗಿದೆ ಎಂದು ಹೇಳುತ್ತಾ ೧ ರಿಂದ ೪೦ ಪಾಯಿಂಟ್ಸ್ ಹಾಕಿಕೊಂಡು ಹೇಳುತ್ತಾ ಹೋದರೆ ಅದಕ್ಕೆ ನಾವು ಉತ್ತರ ಹೇಳಬೇಕಾಗುತ್ತದೆ ಇಲ್ಲದಿದ್ದರೆ ಹೇಗೆ ?

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಹಾಗಿದ್ದರೆ ನಾನು ಒಂದೆರಡು ಬಹಳ ಮುಖ್ಯವಾದ ಅನುಮಾನಗಳನ್ನು ಮಾತ್ರ ಹೇಳಿ ಬಿಡುತ್ತೇನೆ. ೧೯೭೪ ನೇ ಇಸ್ವಿ ನವೆಂಬರ್‌ನಲ್ಲಿ ಕಾವೇರಿ ಬಗ್ಗೆ ಈ ಸಭೆಯಲ್ಲೂ ಚರ್ಚೆಯಾಯಿತು, ಪಕ್ಷದೊಳಗೂ ಚರ್ಚೆಯಾಯಿತು, ಹೊರಗಡೆಯೂ ಚರ್ಚೆಯಾಯಿತು. ಹಾಗೂ ಮುಖ್ಯಮಂತ್ರಿಗಳವರು ಹುಬ್ಬಳ್ಳಿಯಲ್ಲಿ ಭಾಷಣ ಮಾಡುತ್ತಾ ಅಲ್ಲೂ ಭರವಸೆ ಕೊಟ್ಟರು. ಆ ಮೇಲೆ ೧೯೭೫ ರಲ್ಲಿಯೂ ಕೂಡ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳವರು ಭರವಸೆ ಕೊಟ್ಟರು. ಕಾವೇರಿ ವ್ಯಾಲಿ ಅಥಾರಿಟಿಯಲ್ಲಿ ಏನೇನೋ ಮಾತು ಕತೆ ನಡೆಯಿತು, ಆಗಸ್ಟ್‌ನಲ್ಲಿ ಮಾತು ಕತೆ ನಡೆಯಿತು ಪುನಃ ಅಕ್ಟೋಬರ್ ತಿಂಗಳಲ್ಲಿ ಮಾತುಕತೆ ನಡೆಯಿತು. ಫ್ಯಾಕ್ಟ್ ಫೈಂಡಿಗ್ ಕಮಿಟಿಯವರು ನಮ್ಮ ಕರ್ನಾಟಕ ರಾಜ್ಯಕ್ಕೆ ಕನಿಷ್ಟ ಪಕ್ಷ ೩೮ ಟಿ. ಎಂ. ಸಿ. ಎಫ್. ಟಿ. ವಾಟರ್ ಬೇಕು ಎಂದು ಹೇಳಿದ್ದಾರೆ. ಇವತ್ತು ವರುಣಾ ನಾಲೆ ಮಾಡಿದರೆ ಕನ್ನಂಬಾಡಿಯಲ್ಲಿ ನೀರು ಇಲ್ಲವೆಂದು ಅಲ್ಲ, ೧೧೨ ಟಿ. ಎಂ. ಸಿ. ಎಫ್. ಟಿ. ಯಷ್ಟು ನೀರಿನ ಉತ್ಪನ್ನವಿದೆ. ಬಹುಶಃ ಮಾನ್ಯ ಮಾದೇಗೌಡರವರಿಗೆ ಏನು

ಬೇಕಾಗಿದೆ ಅದರ ಳಿ ರಷ್ಟು ಬೇಕಾದರು ಇರಿಗೇಟ್ ಮಾಡಿದರೆ ನೀರು ದೊರೆಯುತ್ತದೆ. ನೀರು ಇಲ್ಲ ವೆಂದು ಅಲ್ಲ. ಆದರೆ ಇವತು ನಮಗೆ ಅನುಮಾನ ಬರುವುದಕ್ಕೆ ಕಾರಣವೇನೆಂದರೆ, ನಮ್ಮ ಚೀಫ ಸೆಕ್ರೆಟರಿಯವರು ತಾಂತ್ರಿಕ ತಜ್ಞರಿಗೆ ಮತ್ತು ಚೀಫ್ ಇಂಜಿನಿಯರ್ಸ್‌ಗೆ ೮೫ ಟಿ. ಎಂ. ಸಿ. ಎಫ್ ಟಿ. ವಾಟರ್‌ನ್ನು ಮಾತ್ರ ಅಂಡರ್ ಕನ್‌ಸ್ಟ್ರಕ್ಷನ್‌ನಲ್ಲಿರುವುದು ಮತ್ತು ಎಲ್ಲಾ ಪ್ರಾಜೆಕ್ಟ್‌ಗಳಿಂದಲೂ ಉಪಯೋಗಿಸಿಕೊಳ್ಳಿ, ಆದಕ್ಕಿಂತ ಜಾಸ್ತಿ ಉಪಯೋಗಿಸ ಕೂಡದೆಂದು ಹೇಳಿದ್ದಾರೆಂದು ತಿಳಿದು ಬರುತ್ತಿದೆ. ಅದುದರಿಂದ ಇದರೊಳಗೆ ಏನು ನಡೆದಿದೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಕೇಂದ್ರ ಸರ್ಕಾರ ದವರಿಗೂ ನಮ್ಮ ರಾಜ್ಯ ಸರ್ಕಾರದವರಿಗೂ ಏನು ವ್ಯವಹಾರ ನಡೆದಿದೆ ಎಂಬುದು ಗೊತ್ತಿಲ್ಲ. ನಮ್ಮ ರಿಕ್ವೈರ್‌ಮೆಂಟ್ ೪೨೮ ಟಿ. ಎಂ. ಸಿ. ಎಫ್. ಟಿ. ಅಂಥಾದರಲ್ಲಿ ೮೦ ಕ್ಕಿಂತ ಜಾಸ್ತಿ ಮಾಡಬೇಡಿ ಎಂದು ಏತಕ್ಕೆ ಹೇಳಿದ್ದಾರೋ ನಮಗೆ ಅರ್ಥವಾಗುತ್ತಿಲ್ಲ. ಇನ್ನು ಹಾರಂಗಿ ಪ್ರಾಜೆಕ್ಟ್‌ನಲ್ಲಿ ಕಟ್ ಮಾಡಿದ್ದಾರೆ ಅದೇ ರೀತಿ ಕಬಿನಿಯಲ್ಲಿ ೩೩ ಟಿ ಎಂ. ಸಿ. ಎಫ್. ಟಿ. ನೀರಿಗೆ ಬದಲಾಗಿ ೧೯ಕ್ಕೆ ಇಳಿಸಿದ್ದಾರೆ ಮತ್ತು ಮಧ್ಯಮಾವಧಿ ನೀರಾವರಿ ಯೋಜನೆಗಳಲ್ಲಿ ಕಟ್ ಮಾಡಿದ್ದಾರೆ. ಇದರ ಜೊತೆಗೆ ಕೇಂದ್ರ ಸರ್ಕಾರ ದವರೊಡನೆ ಚೀಫ್ ಸೆಕ್ರಟರಿಯವರು ಮಾತನಾಡಿ ಎಲ್ಲಾ ಇಂಜಿನಿಯರ್ಸ್‌ಗೂ ಇಷ್ಟಿಷ್ಟು ನೀರನ್ನೇ ಖರ್ಚು ಮಾಡಬೇಕೆಂದು ತಿಳಿಸಿದ್ದಾರೆಂದು ನಮಗೆ ವರ್ತಮಾನ ಬಂದಿದೆ. ಈ ಎಲ್ಲಾ ಅನುಮಾನ ನಮಗೆ ಇರುವುದರಿಂದ ಈ ಜಲಾನಯನ ಪ್ರದೇಶದಲ್ಲಿರತಕ್ಕಂಥ ಶಾಸಕರುಗಳನ್ನು ಇನ್ ಕ್ಯಾಮರಾ ಡಿಸ್ಕಷನ್‌ಗೆ ದಯವಿಟ್ಟು ಕರೆಸಿ ಮಾತನಾಡಬೇಕೆಂದು ನಾನು ಹೇಳಬಯಸುತ್ತೇನೆ. ಇವತ್ತು ನೀರಿನ ಹಂಚಿಕೆಯಾಗದೇನೇ ಕಾವೇರಿ ವ್ಯಾಲಿ ಅಥಾರಿಟಿ ಯಾಗಿದೆ, ಅದೇ ರೀತಿ ಇನ್ನು ಕೆಲವು ಆಗುತ್ತಿವೆ ಆದುದರಿಂದ ಇವತ್ತು ನಮಗೆ ಅನುಮಾನ ಬರುವುದಕ್ಕೆ ಸಾಧ್ಯವಾಗಿದೆ. ಅದುದರಿಂದ ಇದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ದಯವಿಟ್ಟು ಇನ್ ಕ್ಯಾಮರಾ ಮೀಟಿಂಗ್ ಕರೆಯುವುದು ಸೂಕ್ತವೆಂದು ನಮಗೆ ಅನ್ನಿಸುತ್ತದೆ. ಆ ಮೇಲೆ ಫೆಬ್ರುವರಿ ೧೯೭೬ ರಲ್ಲಿ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಈ ಸಭೆಯಲ್ಲಿ ಹೇಳಿದ್ದೀರಿ ಅದಾದ ಮೇಲೆ ಏನು ನಡೆಯಿತು ಎಂಬುದು ಈ ಸಭೆಗೆ ಗೊತ್ತಾಗಲಿಲ್ಲ. ಆದುದರಿಂದ ಇದನ್ನೆಲ್ಲಾ ಚರ್ಚೆ ಮಾಡಲು ಇಲ್ಲಿ ಮಾಡುವುದಕ್ಕಿಂತ ಇನ್ ಕ್ಯಾಮರಾ ಮಿಟಿಂಗ್ ಆದರೆ ಉತ್ತಮ. ಅದುದರಿಂದ ಇನ್‌ಕ್ಯಾಮರಾ ಮಿಟಿಂಗ್ ಕರೆದು ಇಡೀ ಎಲ್ಲಾ ನೀರಿನ ವ್ಯವಹಾರವನ್ನು ಚರ್ಚೆ ಮಾಡಲು ಕರೆದರೆ ಈ ಸಮಸ್ಯೆಯನ್ನು ಪರಿಹಾರ ಮಾಡಲು ಉತ್ತಮವಾಗುತ್ತದೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈಗ ಇಲ್ಲಿ ಚರ್ಚೆ ಮಾಡುತ್ತಿರುವ ವಿಚಾರ ಬಹಳ ಸಕಾಲಿಕವಾಗಿಯೂ ಮತ್ತು ಸೂಕ್ತವಾಗಿಯೂ ಇದೆ ಎಂದು ನಾನು ಭಾವಿಸುತ್ತೇನೆ. ಶ್ರೀಮಾನ್ ನಂಜೇಗೌಡರು ಹೇಳಿದ ಹಾಗೆ, ಕಾವೇರಿ ಜಲಾನಯನದ ಒಟ್ಟಾರೆ ನೀರಿನ ಹಂಚಿಕೆ ವ್ಯವಸ್ಥೆ ಕುರಿತು ಚರ್ಚೆಯಾಗುವ ಅವಶ್ಯಕತೆಯಿದ್ದರೂ, ಸದ್ಯದ ಪರಿಸ್ಥಿತಿ ಯಲ್ಲಿ ವರುಣಾ ನಾಲೆ ವಿಚಾರ ಸಭೆಯ ಮುಂದಿರುವಾಗ, ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಕೃಷ್ಣರಾಜಸಾಗರ ನಿರ್ಮಾಣವಾದುದು ೧೯೩೦ ನೇ ಇಸವಿಯಲ್ಲಿ. ಆಗಿನ ದಿವಾನ ರಾಗಿದ್ದ ಡಾ : ಸರ್. ಎಂ. ವಿಶ್ವೇಶ್ವರಯ್ಯನವರು ಕೃಷ್ಣರಾಜ ಸಾಗರದಿಂದ ಯಾವ ಯಾವ ಪ್ರದೇಶಗಳಿಗೆ ಎಷ್ಟು ನೀರನ್ನು ಕೊಡಬಹುದು ಯಾವ ಯಾವ ಪ್ರದೇಶಗಳಿಗೆ ನೀರನ್ನು ಕೊಡಲೇ ಬೇಕು; ಯಾವ ಯಾವ ಪ್ರದೇಶಗಳಲ್ಲಿ ಕೃಷ್ಣರಾಜ ಸಾಗರ ಅಚ್ಚುಕಟ್ಟಿನಲ್ಲಿ ಅಭಿವೃದ್ಧಿಪಡಿಸ ಬೇಕು ಎನ್ನುವ ಬಗ್ಗೆ ವರದಿಯನ್ನು ಸಲ್ಲಿಸಲು ೭ನೇ ಜೂನ್ ೧೯೨೪ ರಲ್ಲಿ ಒಂದು ಸಮಿತಿ ಯನ್ನು ನೇಮಿಸಿದ್ದರು. ಈ ಸಮಿತಿಯಲ್ಲಿ ಅಂದಿನ ಸರ್ಕಾರದ ಕಾರ್ಯದರ್ಶಿಯವರಾದ ಶ್ರೀ ಕೆ. ಆರ್. ಶೇಷಾಚಾರ್ ಮತ್ತು ಕೃಷ್ಣರಾಜ ಸಾಗರದ ಮುಖ್ಯ ಇಂಜಿನಿಯರ್‌ವರಲ್ಲದೆ ಇನ್ನೂ ಮೂರು ನಾಲ್ಕು ಜನ ಸದಸ್ಯರುಗಳಿದ್ದು, ಅಧಿಕೃತವಾದೊಂದು ವರದಿಯನ್ನು ಸಲ್ಲಿಸಿದ್ದರು. ಆ ವರದಿಯು ಸುಮಾರು ಅರವತ್ನಾಲ್ಕು ಪುಟಗಳಷ್ಟು ಇದೆ. ಆ ವರದಿಯಲ್ಲಿ ಬಲದಂಡೆ ನಾಲೆಯನ್ನು ಕೈಗೊಳ್ಳಬಾರದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಹಾಗೆ ಹೇಳಿದಾಗ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ವಿಭಾಗವಾಗಿರಲಿಲ್ಲ; ಮಂಡ್ಯ ಮತ್ತು ಮೈಸೂರು ಒಂದೇ ಜಿಲ್ಲೆಗೆ ಸೇರಿದ್ದವು. ಒಂದು ವೇಳೆ ಡಾ: ಸರ್. ಎಂ. ವಿಶ್ವೇಶ್ವರಯ್ಯನವರು ಬಲದಂಡೆ ನಾಲೆಗೆ ನೀರನ್ನು ಕೊಡಬೇಕೆಂದು ಬಯಸಿದ್ದರೆ, ಇಷ್ಟು ತಡವಾಗಿ ಅದನ್ನು ಕಾರ್ಯರೂಪಗೊಳಿಸಲು ಅವರು ಬಿಡುತ್ತಿರಲಿಲ್ಲ, ಕೃಷ್ಣರಾಜಸಾಗರವನ್ನು ನಿರ್ಮಿಸಿದ, ಭದ್ರಾವತಿ ಕಾರ್ಖಾನೆಯನ್ನು ಕಟ್ಟಿದ ಮತ್ತು ಅನೇಕ ದೊಡ್ಡ ದೊಡ್ಡ ಮಹತ್ಕಾರ್ಯಗಳನ್ನು

ಸಾಧಿಸಿದ ಡಾ: ಸರ್. ಎಂ. ವಿಶ್ವೇಶ್ವರಯ್ಯನವರಿಗೆ ವರುಣಾ ನಾಲೆಯನ್ನು ಕೈಗೊಳ್ಳುವುದರಲ್ಲಿ ಕಷ್ಟವೇನೂ ಇರಲಿಲ್ಲ. ಅದರೆ, ಅಂದು ಮಂಡ್ಯ ಜಿಲ್ಲೆಯ ಜನ ಬಡತನದ ಗೆರೆಯ ಕೆಳಗೆ ವಾಸ ಮಾಡುತ್ತಿದ್ದರು; ಅನ್ನಕ್ಕಿರಲಿ ಅವರಿಗೆ ಹಿಟ್ಟಿಗೂ ಕೂಡ ಕಷ್ಟವಾಗುತ್ತಿತ್ತು. ಇಂಥಾ ಪ್ರದೇಶದ ಜನರಿಗೆ ಅನ್ಯಾಯವಾಗಬಾರದು ಎನ್ನುವ ಉದ್ದೇಶದಿಂದ ಅವರು ಆ ನಿಲುವನ್ನು ತಾಳಿದ್ದರು. ಆಗ ಮೈಸೂರಿನ ಮಹಾರಾಜರೂ ಇದ್ದರು; ಮೈಸೂರೂ ಸಹ ಪಕ್ಕದಲ್ಲೇ ಇತ್ತು. ಆಗ ಈ ನಾಲೆಯ ಕಾರ್ಯವನ್ನು ಪೂರ್ಣಗೊಳಿಸಬೇಕೆಂಬ ಉದ್ದೇಶವಿದ್ದರೆ ಈ ಎಲ್ಲ ಕಾರಣಗಳಿಂದ ಅದು ಅಂದೇ ಮುಗಿಯುತ್ತಿತ್ತು. ಆದರೆ, ತಾಂತ್ರಿಕ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ, ನ್ಯಾಯದ ದೃಷ್ಟಿಯಿಂದ ಸರ್ವ ರೀತಿಯಲ್ಲೂ ಅಂದು ಇರ್ವಿನ್ ನಾಲೆ ಎಂದು ಕರೆಯುತ್ತಿದ್ದ ವಿಶ್ವೇಶ್ವರಯ್ಯ ನಾಲೆಯ ಅಚ್ಚುಕಟ್ಟನ್ನು ಅಭಿವೃದ್ಧಿ ಪಡಿಸಿ, ಮುಂದೆ ಕೂಡ ಮೂರನೆ ಒಂದು ಭಾಗದಷ್ಟು ಜಮೀನನ್ನು ಅಭಿವೃದ್ಧಿ ಪಡಿಸಬೇಕೆನ್ನುವ ವರದಿಯನ್ನು ಅವರ ಕಾಲದಲ್ಲಿ ಕೊಟ್ಟಿದ್ದಾಗಿತ್ತು. ಈಗ ಇನ್ನೊಂದು ವಿಶೇಷವೇನೆಂದರೆ, ವಿಶ್ವೇಶ್ವರಯ್ಯ ನಾಲೆ ಇರುವಷ್ಟು ಪ್ರದೇಶದಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿವೆ. ಐದು ಖಂಡಸಾರಿ ಸಕ್ಕರೆ ಕಾರ್ಖಾನೆಗಳಿವೆ; ೧೨೦೦-೪೦೦೦ ರಷ್ಟು ಕಬ್ಬಿನ ಗಾಣಗಳಿವೆ; ಸುಮಾರು ೧೨೦-೧೩೦ ಅಕ್ಕಿ ಗಿರಣಿಗಳಿವೆ ಇವೆಲ್ಲಾ ವ್ಯವಸಾಯಾಧಾರಿತ ಕೈಗಾರಿಕೆಗಳು. ರೈತರು ಮತ್ತು ಗ್ರಾಮಾಂತರ ಪ್ರದೇಶದ ಜನರು ಇವುಗಳನ್ನವಲಂಬಿಸಿಕೊಂಡು ಜೀವನ ಮಾಡಬೇಕಾದ ಪರಿಸ್ಥಿತಿಯಿದೆ. ಮಾನ್ಯ ಮುಖ್ಯ ಮಂತ್ರಿಗಳು, ಮೊದಲ ಹಂತದಲ್ಲಿ ನೀರಿನ ತೊಂದರೆಯಿಲ್ಲ, ಕೊನೆಯ ಹಂತದಲ್ಲಿ ಮಾತ್ರ ತೊಂದರೆಯಿದೆಯೆಂಬುದು ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದರು. ಮೊದಲ ಹಂತದಲ್ಲೇ, ಕೃಷ್ಣರಾಜ ಸಾಗರ ಜಲಾಶಯ ಬಿಟ್ಟು ಮೂರು ಮೈಲಿ ದೂರದಲ್ಲಿರುವ ಪ್ರದೇಶಗಳಿಗೂ ನೀರಿನ ತೊಂದರೆಯಿರುವ ಪರಿಸ್ಥಿತಿ ಇದೆ. ಪಾಂಡವಪುರ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಬ್ಬನ್ನು ಕಟಾವ್ ಮಾಡಿ ಪರೀಕ್ಷೆಗೊಳಪಡಿಸಿದಾಗ ಬೆಳೆಯಲ್ಲಿ ಇಳುವರಿ ಯಾಗಿರುವುದು ಕಂಡುಬಂದಿತು. ಒಂದು ಎಕರೆಗೆ ಸುಮಾರು ೧೦-೧೫ ಟನ್ ಕಬ್ಬನ್ನು ಮಾತ್ರ ಬೆಳೆಯುವ ಪರಿಸ್ಥಿತಿ ಬಂದಿದೆ. ಇದರಿಂದಾಗಿ, ಅಲ್ಲಿ ಸಾಲ ವಸೂಲು ಮಾಡುವುದನ್ನು ಮುಂದಕ್ಕೆ ಹಾಕಲಾಗಿದೆ. ಅಲ್ಲದೆ, ವಿಶ್ವೇಶ್ವರಯ್ಯ ನಾಲೆ ತೆಗೆಯುವ ಸಂದರ್ಭದಲ್ಲಿ ಅನೇಕ ಜನ ಬಡವರು, ಹರಿಜನ ಗಿರಿಜನರು ಬಹಳಷ್ಟು ಜಮೀನುಗಳನ್ನು ಕಳೆದುಕೊಂಡಿದ್ದಾರೆ. ದೀನದಲಿತರಿಗೆ ಸೇರಿದ ಜಮೀನಂತೂ ಬಹಳಷ್ಟು ಹೋಗಿದೆ. ಅಂಥ ಕಡೆಗಳಲ್ಲಿ ಜಮೀನನ್ನು ಕಳೆದುಕೊಂಡು ನಲವತ್ತು ವರ್ಷಗಳಾದರೂ ಅವರಿಗೆ ನೀರನ್ನು ಒದಗಿಸುವುದಕ್ಕೆ ಶಕ್ತಿ ಇಲ್ಲವಾಗಿದೆ. ಈ ನಾಲೆಯಿಂದ ಅರೇಳು ತೂಬುಗಳನ್ನು ತೆಗೆದರೆ ಸುಮಾರು ೫೦೦-೬೦೦ ಎಕರೆ ಜಮೀನು ನೀರಾವರಿ ಅಚ್ಚುಕಟ್ಟಿಗೆ ಸಿಗುತ್ತದೆ, ಇದರಿಂದ ಜಮೀನು ಕಳೆದುಕೊಂಡ ಜನರಿಗೆ ಅನುಕೂಲವಾಗುತ್ತದೆಂದು ಇಲಾಖೆಯು ಸಹ ಶಿಫಾರಸನ್ನು ಮಾಡಿತ್ತು. ಅದರೆ, ಅದು ವಿಧಾನ ಸೌಧದ ಹಂತಕ್ಕೆ ಬಂದಾಗ, ಕರ್ನಾಟಕ ಮತ್ತು ತಮಿಳುನಾಡುವಿನ ಜಲವಿವಾದ ಇನ್ನೂ ಪೂರ್ಣವಾಗಿ ಇತ್ಯರ್ಥವಾಗದೇ ಇರುವುದರಿಂದ, ಸದ್ಯದಲ್ಲಿ ಈ ಯೋಜನೆಯಲ್ಲಿ ನಿಲ್ಲಿಸಬೇಕೆಂದು ಹೇಳಲಾಯಿತು. ಅಂದು ಕೇವಲ ೨೦ ಕ್ಯುಸಿಕ್ ನೀರನ್ನು ಕೊಡಬೇಕಾದರೆ, ತಮಿಳುನಾಡು ಮತ್ತು ಕರ್ನಾಟಕದ ಜಲವಿವಾದ ಕಾರಣವಾಗಿತ್ತು. ಅದರೆ, ಇಂದು ಅದೇ ವಿಧಾನ ಸೌಧದ ಜನ ಸುಮಾರು ೧೮ ಕೋಟಿ ರೂಪಾಯಿಗಳ ವೆಚ್ಚ ಯೋಜನೆಯನ್ನು ಈಗಲೇ ಮಾಡಬೇಕೆನ್ನುವುದರ ಔಚಿತ್ಯವೇನು ಎನ್ನುವುದು ನನಗರ್ಥವಾಗುತ್ತಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಅರೆಯುವ ಕಾರ್ಯಗಳಿಂದ ಸರ್ಕಾರಕ್ಕೆ ಸುಮಾರು ಎರಡೂವರೆ ಕೋಟಿ; ಎಕ್ಸೈಸ್ ಡ್ಯೂಟಿ ಸುಮಾರು ಹತ್ತೂವರೆ ಕೋಟಿ ಮತ್ತಿತರ ಚಾರ್ಜುಗಳಿಂದ ಸುಮಾರು ಏಳೂವರೆ ಕೋಟಿ ರೂಪಾಯಿಗಳಷ್ಟು—ಅಂದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತೆರಿಗೆ ರೂಪದಲ್ಲಿ ಮಂಡ್ಯ ಜಿಲ್ಲೆಯಿಂದ ಸರ್ಕಾರಕ್ಕೆ ಪ್ರತಿ ವರ್ಷ ಇಪ್ಪತ್ತು ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ. ಅಷ್ಟೇ ಅಲ್ಲದೆ, ಈಗಾಗಲೇ ಅಲ್ಲಿರುವ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಈಗ ಅವಿರುವ ಎರಡು ಪಟ್ಟು ವಿಸ್ತರಿಸುವುದಕ್ಕೆ ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರು ಪರವಾನಿಗೆಯನ್ನು ಕೊಟ್ಟಿದ್ದಾರೆ. ಈಗಲೇ ಆ ಮೂರು ಕಾರ್ಖಾನೆಗಳಿಗೆ ಕಬ್ಬು ಸಾಕಾಗಿಲ್ಲದಿರುವಾಗ ಇನ್ನು ಅವುಗಳನ್ನು ವಿಸ್ತರಿಸಿದಾಗ ಅವುಗಳಿಗೆ ಕಬ್ಬು ಎಲ್ಲಿ ಸಿಗುತ್ತದೆ ?

ಇನ್ನು ಕೊನೆಯ ಹಂತದಲ್ಲಿ ಅಧಿಕೃತವಾಗಿಯೋ ಅನಧಿಕೃತವಾಗಿಯೋ ರೈತರು ತಮ್ಮ ಜಮೀನನ್ನು ಅಚ್ಚುಕಟ್ಟುಗೊಳಿಸಿದ್ದಾರೆ. ಆದರೆ, ಅವರು ಅಚ್ಚುಕಟ್ಟು ಜಮೀನಿಗೆ ಕೊಡುವ ಕಂದಾಯವನ್ನೇ ಕೊಡುತ್ತಿದ್ದಾರೆ, ಮತಿಗೆಯನ್ನೂ ಕೊಡುತ್ತಿದ್ದಾರೆ. ಆದರೆ ಆ ಜಮೀನುಗಳಿಗೆ ನೀರು ಬಿಡುವಾಗ ಮಾತ್ರ ಅವುಗಳು ಅನಧಿಕೃತ ಅಚ್ಚುಕಟ್ಟುಗಳೆಂದು ಹೇಳಿದರೆ ಹೇಗೆ ? ಈಗಾಗಲೇ ರೈತರು ಜಮೀನನ್ನು

ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ನಾನು ಮೊದಲೆ ಹೇಳಿದ ಹಾಗೆ, ಕೇವಲ ಇಪ್ಪತ್ತು ಕ್ಯೂಸಿಕ್ ನೀರಿಗೆ ತನ್ನ ಅಸಹಾಕತೆಯನ್ನು ಸೂಚಿಸಿದ ಸರ್ಕಾರ ಇಂದು ಹದಿನೆಂಟು ಕೋಟಿ ರೂಪಾಯಿ ವೆಚ್ಚದ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲು ಇದ್ದ ಬುದ್ಧಿವಂತಿಕೆಯಾದರೂ ಏನು ? ನ್ಯಾಯುವಾದರೂ ಏನು ಎನ್ನುವುದನ್ನು ನಾನು ಕೇಳಬಯಸುತ್ತೇನೆ. ಇಲ್ಲಿ ರಾಜಕೀಯ ಪ್ರವೇಶ ಮಾಡುವುದಿಲ್ಲ. ಇದು ಜೀವನದ ಪ್ರಶ್ನೆ: ಸಾವು ಬದುಕಿನ ಪ್ರಶ್ನೆ. ನೀರು ದೊರೆಯದಿದ್ದರೆ ಆ ಪ್ರದೇಶದ ಜನರು ರಾಗಿಯನ್ನೂ ಬೆಳೆಯುವುದಿಲ್ಲ, ರಾಗಿಗೆ ನೀರು ಹೆಚ್ಚಾಗುತ್ತದೆ ಭತ್ತಕ್ಕೆ ಕಡಮೆಯಾಗುತ್ತದೆ. ಮುಂದೆ ಅಲ್ಲಿನ ಜನತೆ ಬಡತನದ ಬೇಗೆಯಲ್ಲಿ ಬೇಯಬೇಕಾಗುತ್ತದೆ. ಇದು ಅಲ್ಲಿನ ರೈತರ ಹೊಟ್ಟೆಯ ಪ್ರಶ್ನೆ: ಜೀವನದ ಪ್ರಶ್ನೆ. ಇಲ್ಲಿ ಜಿಲ್ಲೆಗಳ ಪ್ರಶ್ನೆಯೂ ಬರುವುದಿಲ್ಲ. ಇದರಲ್ಲಿ ಜಿಲ್ಲೆಯ ಒಬ್ಬರಿಗೊಬ್ಬರು ವಿರೋಧಿಸುವುದಕ್ಕೆ ಕಾರಣವೂ ಇಲ್ಲ. ಆದರೆ, ಮಂಡ್ಯ ಜಿಲ್ಲೆಯ ಜನತೆ ಇಂದು ಕಂಗಾಲಾಗಿದ್ದಾರೆ. ಇದಕ್ಕೆಲಾ ಅವಕಾಶ ಕೊಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸುವುದು ಬಹಳ ಸಂತೋಷದ ವಿಷಯ. ಆದರೆ, ನನಗೊಂದು ಅನುಮಾನವಿದೆ, ಹಿಂದಿನ ಸಮಿತಿಯ ವರದಿಗಳು ಹೇಳಿ ಬರಸಿದ ವರದಿಗಳು, ಆಗಿನ ಸರ್ಕಾರ ತನಗೆ ಹೇಗೆ ಬೇಕೋ ಹಾಗೆ ಹೇಳಿ ಬರೆಸಿದೆ ಎಂದು ಹೇಳಿದ ಹಾಗೆ, ಇನ್ನು ಮುಂದೆ ಬರುವ ವರದಿಯೂ ಸಹ ಹೇಳಿ ಬರೆಸಿದ ವರದಿಯಾಗಬಾರದು ಎನ್ನುವುದೇ ನನ್ನ ಪ್ರಾರ್ಥನೆ. ತಾಂತ್ರಿಕತೆಯಿಂದ ಕೂಡಿದ, ನಿಷ್ಪಕ್ಷಪಾತವಾದ ಹಾಗೂ ನ್ಯಾಯುವಾದ ದೃಷ್ಟಿಯಿಂದ ಆ ವರದಿಯಿರಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ. ಈ ಮಧ್ಯೆ ಸರ್ಕಾರದವರು ಯಾವ ತೀರ್ಮಾನಗಳನ್ನು ತೆಗೆದುಕೊಳ್ಳಕೂಡದು. ಆದರೆ, ನಾನು ಅವರಿಗೆ ನೀರು ಕೊಡಬಾರದೆಂದೇನೂ ಹೇಳುವುದಿಲ್ಲ, ಬಡವರು ಎಲ್ಲಿದ್ದರೂ ಬಡವರೆ. ವರುಣಾ ನಾಲೆಯನ್ನು ಕೈಬಿಡಿ ಎಂದೂ ನಾನು ಹೇಳುವುದಿಲ್ಲ. ಆದರೆ, ಕೈಬಿಡಬೇಡಿ ಎಂದರೆ ನಮಗೆ ನೀರು ಕೊಡಬೇಡಿ ಎಂದಾಗುತ್ತದೆ. ಆದುದರಿಂದ, ಸರ್ಕಾರದವರು ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲೇ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ತರುವ ಸಾಧ್ಯತೆ ಇದ್ದಿದ್ದರೆ ವಿಶ್ವೇಶ್ವರಯ್ಯನವರ ಕಾಲದಲ್ಲೇ ಆಗುತ್ತಿತ್ತು, ಶ್ರೀ ನಿಜಲಿಂಗಪ್ಪನವರು ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲೇ ಆಗುತ್ತಿತ್ತು. ಆದುದರಿಂದ, ಇದು ನ್ಯಾಯುವಲ್ಲ, ಸಮ್ಮತವಲ್ಲ. ಇದನ್ನು ಸರ್ಕಾರ ಕೈಬಿಡಲೇ ಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

† ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ. ಮೆಸೂರಿನ ಕಾವೇರಿ ನದಿ ಹಳೆಯ ಮೈಸೂರು ಭಾಗದ ಜೀವನಾಡಿ ಎಂಬುದು ಎಲ್ಲರಿಗೂ ಗೊತ್ತಿದೆ. ಈ ಮರುಣಾ ನಾಲೆ ಬಹಳ ಹಳೆಯ ಕಾಲದ ಪ್ರಶ್ನೆಯಾಗಿದೆ. ಇದೇನೂ ಹೊಸದಾಗಿ ಬಂದಿರುವ ಪ್ರಶ್ನೆಯಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪದೇಪದೇ ಹೇಳಿದ್ದಾರೆ. ವಿಶ್ವೇಶ್ವರಯ್ಯ ನಾಲೆಯ ಎಡ ಭಾಗದಲ್ಲಿ ಈಗಾಗಲೇ ಅಭಿವೃದ್ಧಿಯಾಗಿರತಕ್ಕಂಥ ಭೂಮಿಗೆ ನ್ಯಾಯುವಾಗಿ ಸಲ್ಲಬೇಕಾದ ನೀರನ್ನು ಕೊಟ್ಟು ಉಳಿದ ನೀರನ್ನು ಬಲ ಭಾಗಕ್ಕೆ ಕೊಡುವ ಪ್ರಯತ್ನ ಇದೆ ಎಂದು ಅವರು ಹೇಳಿದ್ದಾರೆ. ಇದರಿಂದ ಈ ಭಾಗದಲ್ಲಿ ಜಮೀನನ್ನು ಹೊಂದಿರತಕ್ಕಂಥ ಜನರಿಗೆ ಸಮಾಧಾನ ತರಬಹುದು. ಆದರೆ ಒಂದು ಶೋಚನೀಯವಾದ ಪರಿಸ್ಥಿತಿ ಏನೆಂದರೆ, ಈ ವಿಚಾರದಲ್ಲಿ ಮೈಸೂರು ಜಿಲ್ಲೆಯ ರೈತರಿಗೂ ಮತ್ತು ಮಂಡ್ಯ ಜಿಲ್ಲೆಯ ರೈತರಿಗೂ ಅವರವರ ಹಿತದ ಬಗ್ಗೆ ತಿಕ್ಕಾಟ ಬಂದಿದೆ. ನಮ್ಮ ಮಂಡ್ಯ ಜಿಲ್ಲೆಯ ಸ್ನೇಹಿತರು ಹೇಳಿದಂತೆ ವಿಶ್ವೇಶ್ವರಯ್ಯ ನಾಲಾ ಹಂತದಲ್ಲಿ ಸುಮಾರು ಎರಡು ಲಕ್ಷ ಎಕರೆ ಜಮೀನು ತರಿಯಾಗಿರಬಹುದು ಆದರೆ ಆ ಭಾಗದಲ್ಲಿ ಇನ್ನೂ ತರಿಯಾಗಬೇಕಾಂಥ ಪ್ರದೇಶ ಇದೆ ವಿಶ್ವೇಶ್ವರಯ್ಯ ನಾಲೆಯ ನೀರು ಮಂಡ್ಯ ಜಿಲ್ಲೆಯ ಎಲ್ಲ ಜಮೀನಿಗೂ ವಿಸ್ತರಣೆಯಾಗಿಲ್ಲ. ಈಗ ಕೃಷ್ಣಸಾಗರದ ನೀರು ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ ಮತ್ತು ಶ್ರೀರಂಗಪಟ್ಟಣದ ಬಹುಭಾಗಕ್ಕೆ ಲಭ್ಯವಾಗುತ್ತಿಲ್ಲ. ಅದರಂತೆ ಮಳವಳ್ಳಿಯ ಬಹುಭಾಗಕ್ಕೂ ಲಭ್ಯವಾಗುತ್ತಿಲ್ಲ. ಮತ್ತು ಮಂಡ್ಯದ ಒಂದು ಹೋಬಳಿಗೂ ಸಹ ಆ ನೀರು ದೊರಕುತ್ತಿಲ್ಲ. ಈ ಬಗ್ಗೆ ನಾನೊಂದು ಸಣ್ಣ ವಿಚಾರ ಹೇಳುತ್ತಿದ್ದೇನೆಂದು ತಾವುಗಳು ಯಾರೂ ಭಾವಿಸಬಾರದು. ಈಗ ಈ ನಾಲೆಯ ವಿಚಾರದಲ್ಲಿ ಈಗ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಕೆಲವು ಭಾಗ ಕಾವೇರಿ ನದಿಯ ಎಡದಂಡೆಯಲ್ಲಿದೆ. ಇದರಿಂದ ಶ್ರೀರಂಗಪಟ್ಟಣ ತಾಲ್ಲೂಕಿನ ೭-೮-೯ ಸಾವಿರ ಎಕರೆಗಳಿಗೆ ನೀರುಲಭ್ಯವಾಗುತ್ತಿದೆ. ವಿಶ್ವೇಶ್ವರಯ್ಯ ನಾಲಾದಿಂದ ಟಿ. ನರಸೀಪುರದ ಕೆಲವು ಭಾಗಕ್ಕೆ ನೀರು ಯಾವ ರೀತಿ ಲಭ್ಯವಾಗುತ್ತಿದೆಯೋ ಅದೇ ರೀತಿ

ಈ ವರುಣಾ ನಾಲಾ ಆದರೆ ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ಬಲದಂಡೆ ಭಾಗದ ಭೂಮಿಗೆ ನೀರು ಸಿಗುತ್ತದೆ. ಅದಕಾರಣ ಒಂದು ಜಿಲ್ಲೆಯ ಜನರಿಗೂ ಮತ್ತೊಂದು ಜಿಲ್ಲೆಯ ಜನರಿಗೂ ತಿಕ್ಕಾಟ ಬರುವಂತೆ ಯಾರೂ ಮಾತನಾಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಎಡದಂಡೆಯಲ್ಲಿ ಅಭಿವೃದ್ಧಿಯಾಗಿರತಕ್ಕಂಥ ಭಾಗಕ್ಕೆಲ್ಲಾ ನೀರನ್ನು ಅಂದರೆ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ನೀರನ್ನು ಕೊಟ್ಟು ಉಳಿಕೆ ನೀರನ್ನು ಬಲದಂಡೆ ಭಾಗದ ರೈತರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಆದಕಾರಣ ಈ ಬಗ್ಗೆ ಸರ್ಕಾರದವರು ನೇಮಕ ಮಾಡಿರತಕ್ಕಂಥ ಒಂದು ಸಮಿತಿಯ ತೀರ್ಮಾನವನ್ನು ನಾವು ಕಾದು ನೋಡಬೇಕಾಗಿದೆ. ಅಲ್ಲಿಯವರೆಗೆ ಒಬ್ಬರಿಗೊಬ್ಬರಿಗೆ ವೈಮನಸ್ಸು ಬರುವಂತಹ ಮಾತುಗಳನ್ನು ಆಡುವುದು ಒಳ್ಳೆಯದಲ್ಲವೆಂದು ನಮ್ಮ ಸ್ನೇಹಿತರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಬಲದಂಡೆಯಲ್ಲಿ ೬೦ ಅಡಿ ಎತ್ತರದಲ್ಲಿ ಒಂದು ನಾಲೆ ಇದೆ. ಈ ನಾಲೆಯಿಂದ ಕೆಲವು ಭಾಗದ ಭೂಮಿಗೆ ನೀರು ಸಿಗುತ್ತಿದೆ. ಈ ನಾಲೆ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಹೋಗುವ ಟೋಲ್-ಗೇಟ್ ಹತ್ತಿರವೇ ಇದೆ. ಈಗ ಸರ್ಕಾರದವರು ಕೈಕೊಂಡಿರುವ ಯೋಜನೆ ಭತ್ತ ಅಥವಾ ಕಬ್ಬನ್ನು ಬೆಳೆಯಲು ನೀರು ಕೊಡಬೇಕೆಂದಲ್ಲ. ಆ ಭಾಗದಲ್ಲಿ ಈಗ ಕೇವಲ ೧೮-೨೦ ಅಂಗುಲ ಮಳೆ ಬೀಳುತ್ತಿದೆ. ಅಲ್ಲಿ ಖುಷ್ಕಿ ಬೆಳೆ ಸಹ ಸರಿಯಾಗಿ ಆಗುತ್ತಿಲ್ಲ. ಪದೇಪದೇ ಆ ಭಾಗ ಕ್ಷಾಮಡಾಮರಗಳಿಗೆ ಒಳಗಾಗುತ್ತಿದೆ. ಅದನ್ನು ತಪ್ಪಿಸುವ ದೃಷ್ಟಿಯಿಂದ ಮತ್ತು ಖುಷ್ಕಿ ಬೆಳೆಗಾದರೂ ನೀರನ್ನು ಕೊಡಬೇಕೆಂಬ ಉದ್ದೇಶದಿಂದ ಈ ಪ್ರಯತ್ನ ನಡೆದಿದೆ. ನಾನೂ ಸಹ ಪ್ರಥಮದಲ್ಲಿ ಮಂಡ್ಯ ಜಿಲ್ಲೆಗೇ ಸೇರಿದವನು. ಆದಕಾರಣ ಮಂಡ್ಯ ಜಿಲ್ಲೆಯ ಅಭಿವೃದ್ಧಿಯಲ್ಲಿ ನನಗೆ ಸಾಕಷ್ಟು ಆಸಕ್ತಿ ಇದೆ. ಈ ಬಗ್ಗೆ ಆ ಜಿಲ್ಲೆಯ ಸದಸ್ಯರಿಗೆ ಎಷ್ಟು ಆಸಕ್ತಿ ಇದೆಯೋ ಅದಕ್ಕಿಂತ ಕಡಿಮೆ ಆಸಕ್ತಿ ನನಗಿಲ್ಲ. ಇನ್ನೂ ಜಾಸ್ತಿ ಇದೆ. ಆದರೆ ಮೈಸೂರು ಭಾಗದಲ್ಲಿ ಅಂದರೆ ಬಲದಂಡೆ ಭಾಗದಲ್ಲಿರತಕ್ಕಂಥ ಜನರಿಗೆ, ಮಾನ್ಯ ಮುಖ್ಯಮಂತ್ರಿಗಳು ಹಿಂದೊಮ್ಮೆ ಹೇಳಿದಂತೆ ವಂಚಿತರಾದ ರೈತರಿಗೆ, ಇದಕ್ಕೆ ಕಾರಣ ಯಾವುದೇ ಇರಬಹುದು, ಸರಿಯಾದಂಥ ಕಾಲದಲ್ಲಿ ಈ ಬಗ್ಗೆ ಕ್ರಮ ಕೈಕೊಳ್ಳದೇ ಇರಬಹುದು, ಆ ಕಾಲದಲ್ಲಿ ಇದನ್ನು ಕೈಕೊಳ್ಳಲು ದುಡ್ಡು ಇಲ್ಲದಿರಬಹುದು, ಆ ಕಾಲದಲ್ಲಿ ನಾಲಾ ಹಂತದಲ್ಲಿರತಕ್ಕಂಥ ಭೂಮಿಯನ್ನು ರೈತರು ಅಭಿವೃದ್ಧಿ ಮಾಡುವುದಕ್ಕೆ ಹೆದರುತ್ತಿದ್ದರು ಆ ಸಮಯದಲ್ಲಿ ಬಲದಂಡೆ ನಾಲಾ ಬರತಕ್ಕಂಥ ಮೈಸೂರಿನ ಭಾಗದಲ್ಲಿ ಮಲೇರಿಯಾ ರೋಗದ ಹಾವಳಿ ಬಂದು ಜನರು ಹುಳಗಳುಸತ್ತಂತೆ ಸಾಯುತ್ತಿದ್ದರು. ಆ ಸಮಯದಲ್ಲಿ ಬಲದಂಡೆ ನಾಲೆಯನ್ನು ತೆಗೆಯುತ್ತೇವೆಂದು ಅವರಿಗೆ ಹೇಳಿದ್ದರೆ, ಮಲೇರಿಯಾ ಮಾರಿ ಜನರನ್ನೆಲ್ಲಾ ಕೊಲ್ಲುತ್ತಿದೆ, ನಮಗೇಕೇ ಆ ನಾಲೆಯನ್ನು ತಂದುಕೊಡುತ್ತೀರಿ ಎಂದು ಹೇಳುತ್ತಿದ್ದರೋ ಏನೋ ಗೊತ್ತಿಲ್ಲ. ಆದರೆ ಆ ಭಾವನೆ ಈಗ ಜನರಲ್ಲಿ ಇಲ್ಲ. ಎಲ್ಲವೂ ಬದಲಾವಣೆ ಯಾಗಿದೆ. ರೋಗಗಳನ್ನು ತಡೆಗಟ್ಟುವ ಶಕ್ತಿ ನಮಗಿದೆ. ರೈತರಿಗೆ ಒಳ್ಳೆಯ ಜ್ಞಾನ ಬಂದಿದೆ. ನೀರನ್ನು ಉತ್ತಮವಾಗಿ ಉಪಯೋಗಿಸುವ ಜ್ಞಾನ ಬಂದಿದೆ. ಎಡ ದಂಡೆ ಭಾಗದಲ್ಲಿ ಅಂದರೆ ಈಗ ಅಭಿವೃದ್ಧಿಯಾಗಿರತಕ್ಕಂಥ ಭೂಮಿಗೆ ನ್ಯಾಯವಾಗಿ ಬೇಕಾದ ನೀರನ್ನು ಪಡೆದುಕೊಳ್ಳಲಿ, ಈ ಮಾತನ್ನು ನಾವು ಪದೇ ಪದೇ ಹೇಳುತ್ತಿದ್ದೇವೆ. ಆದರೆ ನೀರನ್ನು ಯಾರೇ ಆಗಲೀ ಪೋಲು ಮಾಡುವುದು ಸರಿಯಲ್ಲ. ಮಾನ್ಯ ಹಲಗೇಗೌಡರು ಎಡದಂಡೆ ನಾಲಾದಿಂದ ಟೀನರಸಿಪುರದಲ್ಲಿ ೧೮ ಸಾವಿರ ಎಕರೆಗೆ ನೀರು ಸಿಗುತ್ತಿದೆ ಎಂದು ಹೇಳಿದರು. ಆದರೆ ಅದು ಸರಿಯಲ್ಲ. ೬-೮ ಸಾವಿರ ಎಕರೆಗೂ ಸಹ ನೀರು ದೊರಕುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಮೇಲ್ಭಾಗದಲ್ಲಿರತಕ್ಕಂಥ ರೈತರು ನೀರನ್ನು ಸರಿಯಾದಂಥ ರೀತಿಯಲ್ಲಿ ಉಪಯೋಗ ಮಾಡದಿರುವುದು. ಅವರು ವಿವೇಚನೆಯಿಂದ ಉಪಯೋಗಮಾಡಿದರೆ ಕೆಳಭಾಗದಲ್ಲಿರತಕ್ಕಂಥ ರೈತರಿಗೂ ನೀರು ಸಿಗುತ್ತದೆಂದು ನನ್ನ ವಾದ. ಆದರೆ ಈ ಬಗ್ಗೆ ಹೇಳಲು ನಾನೇನು ಅಷ್ಟು ಪರಿಣತನಲ್ಲ ಮತ್ತು ಆ ಭಾಗದಲ್ಲಿ ನಾನು ಭೂಮಿಯನ್ನು ಹೊಂದಿರುವವನೂ ಅಲ್ಲ. ಆದಕಾರಣ ಈಗ ಸರ್ಕಾರ ಈ ಬಗ್ಗೆ ಏನು ಒಂದು ಪರಿಣತರ ಸಮಿತಿಯನ್ನು ನೇಮಕ ಮಾಡಿದೆ, ಆ ಸಮಿತಿಯ ಮುಂದೆ, ನಮ್ಮ ಮುಂದಿರತಕ್ಕಂಥ ಎಲ್ಲ ವಾದವಿವಾದಗಳನ್ನು ಇಡೋಣ. ಆಗ ಅವರು ಅದೆಲ್ಲವನ್ನೂ ಪರಿಶೀಲನೆ ಮಾಡಿ ಅದರಲ್ಲಿ ಎಷ್ಟು ಸತ್ಯಾಂಶವಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವರಿಗೆ ಅವಕಾಶವಾಗುತ್ತದೆ.

ಶ್ರೀ ಜಿ. ಮಾದೇಗೌಡ.—ಮಂಡ್ಯ ಜಿಲ್ಲೆಯ ಜನರು ನೀರನ್ನು ಪೋಲು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಸರ್ಕಾರದ ಅಭಿಪ್ರಾಯವೂ ಸಹ ಇದೇ ಆಗಿದೆ. ಆದರೆ ಆ ಅಭಿಪ್ರಾಯ ತಪ್ಪು ಎಂದು ನಾವು ಆ ಕಮಿಟಿಯ ಮುಂದೆ ತಿಳಿಸುವುದಕ್ಕೆ ಮತ್ತು ವಾದ ಮಾಡುವುದಕ್ಕೆ ನಾವು ತಯಾರಿದ್ದೇವೆ. ಮತ್ತು ಈ ಬಗ್ಗೆ ಅವರನ್ನು ಒಪ್ಪಿಸುವುದಕ್ಕೂ ಸಹ ತಯಾರಿದ್ದೇವೆ. ಈಗ ಆ ಭಾಗದಲ್ಲಿ ಒಂದು ಹನಿ ನೀರೂ ಸಹ ಪೋಲ್‌ಗುತ್ತಿಲ್ಲವೆಂಬುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೇ ನೀರು ಸಾಲುತ್ತಿಲ್ಲವೆಂದು ಅವರು ಹೇಳುತ್ತಿದ್ದಾರೆ ಅದರೆ ಯಾವುದು ಉಚಿತ ಎಂಬ ಬಗ್ಗೆ ನಾನೇನೂ ಸಾಕ್ಷಿ ಆಧಾರದ ಮೇಲೆ ವಾದ ಮಾಡುತ್ತಿಲ್ಲ. ಅದನ್ನು ತೀರ್ಮಾನ ಮಾಡುವುದಕ್ಕಾಗಿಯೇ ಸರ್ಕಾರದವರು ಒಂದು ಪರಿಣತರ ಸಮಿತಿಯನ್ನು ನೇಮಕ ಮಾಡಿರುವುದು.

ಈವೊತ್ತು ಸರ್ಕಾರದವರು ತಮ್ಮ ವಿವೇಚನೆಯಿಂದ ಒಂದು ಪರಿಣತರಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಪರಿಣತರ ಸಮಿತಿಯಲ್ಲಿರತಕ್ಕಂತಾ ಸದಸ್ಯರು ಅವರ ವಿಚಾರವನ್ನೆಲ್ಲಾ ಪರಿಶೀಲನೆ ಮಾಡಿ ಎಲ್ಲರಿಗೂ ನಂಬಿಕೆ ಬರುವಂಥಾ ವರದಿಯನ್ನು ಕೊಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಏಕೆಂದರೆ ಆ ಸಮಿತಿಗೆ ದಕ್ಷರೂ ಸಮರ್ಥರೂ ಆಗಿರತಕ್ಕಂಥಾ ಸದಸ್ಯರನ್ನು ನೇಮಕ ಮಾಡಿದ್ದಾರೆ. ಆದುದರಿಂದ ಅವರ ಮುಂದೆ ಯಾವ ಯಾವ ವಾದ ಇದೆಯೋ ಅವೆಲ್ಲವನ್ನೂ ಇಡೋಣ. ಸರ್ಕಾರ ಎಡದಂಡೆಯಲ್ಲಿರತಕ್ಕಂಥಾ ರೈತರಿಗೆ ಏನು ಭರವಸೆ ಕೊಟ್ಟಿದ್ದಾರೆ ಅದು ನ್ಯಾಯವಾಗಿದ್ದರೆ ಈ ಸಮಿತಿ ಯಿಂದ ಆ ಭರವಸೆ ಭದ್ರವಾಗಿ ನಿಲ್ಲೆ ನಿಲ್ಲುತ್ತದೆ. ಆ ಭಾಗದಲ್ಲಿರತಕ್ಕಂಥಾ ರೈತರಿಗೆ ಅವರ ಭೂಮಿಗೆ ಸುಧಾರಿತವಾದಂಥಾ, ವ್ಯವಸಾಯ ಪದ್ಧತಿ ಮೂಲಕ ಅವರಿಗೆ ಎಷ್ಟು ನೀರು ಬೇಕೋ ಅಷ್ಟು ನೀರನ್ನು ಮೀಸಲಾಗಿಟ್ಟು ಆಮೇಲೆ ಬಲದಂಡೆ ರೈತರಿಗೆ ಕೊಡಲಿ.

ಶ್ರೀ ಜಿ. ಮಾದೇಗೌಡ.—ಪರಿಣತರ ವರದಿಯಂತೆ, ಒಂದು ಕ್ಯೂಸೆಕ್ಸ್ ವಾಟರ್‌ನಲ್ಲಿ ಒಂದು ಎಕರೆಗೆ ೪೦ ಪಲ್ಲ ಭತ್ತ ಬೆಳೆಯಬಹುದು ಎಂದು ಹೇಳುತ್ತಾರೆ. ಅಷ್ಟು ಬೆಳೆಯುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ರೈತನಾಗಿರಬಹುದು ಆದರೆ ಅವರು ಹೇಳಿದ ಅಂಕಿ ಅಂಶಗಳ ಪ್ರಕಾರ ತಿಳಿದುಕೊಳ್ಳುವಷ್ಟು ಶಕ್ತಿ ನನಗೆ ಇಲ್ಲ ಒಂದುವೇಳೆ ಮಾನ್ಯ ಸದಸ್ಯರು ಹೇಳಿದಂತೆ ಒಂದು ಕ್ಯೂಸೆಕ್ಸ್ ನೀರಿಗೆ ಒಂದು ಎಕರೆಗೆ ೪೦ ಪಲ್ಲ ಭತ್ತ ಬೆಳೆಯಬಹುದು ಅನ್ನುವ ಪ್ರಶ್ನೆ ಬಂದಾಗ ನಾನು ಏನು ಮಾಡುತ್ತೇನೆ ಎಂದರೆ ಅದನ್ನು ಬಲ್ಲವರಿಂದ ಕೇಳಿ ತಿಳಿದುಕೊಳ್ಳುತ್ತೇನೆ ಅದಕ್ಕೂ ಅನುಮಾನ ಬಂದರೆ ಇನ್ನೂ ನಾಲ್ಕು ಜನರನ್ನೂ ವಿಚಾರಿಸಿ ಆ ಬಗ್ಗೆ ತಿಳಿದುಕೊಳ್ಳುವ ಶಕ್ತಿ ಇದೆ ಅಂತ ಅಷ್ಟುಮಾತ್ರ ಹೇಳುತ್ತೇನೆ. ಆದುದರಿಂದ ಅವರು ಈ ಬಗ್ಗೆ ಏನಾದರೂ ವಾದ ಇದ್ದರೆ ಆ ಸಮಿತಿ ಮುಂದೆ ಇಡಬಹುದಲ್ಲಾ. ಎಡಭಾಗದ ರೈತರಿಗೆ ಇದರಿಂದ ಯಾವರೀತಿ ಧಕ್ಕೆ ಬರುತ್ತದೆ ಎಂದು ಹೇಳಬಹುದಲ್ಲಾ. ಒಂದುವೇಳೆ ಪರಿಣತರ ಸಮಿತಿ ವರದಿ ಬಂದು ಬಲಭಾಗದ ದಂಡೆಯವರಿಗೆ ಈ ನೀರನ್ನು ಕೊಟ್ಟರೆ ಏನು ಧಕ್ಕೆ ಯಾಗುವುದಿಲ್ಲ ಅಂತ ಇದ್ದರೆ ಇದನ್ನು ಏತಕ್ಕೆ ಮಾಡಬಾರದು ? ಹೀಗಿದ್ದರೂ ಕೂಡ ಏನಾದರೂ ಜಾರಿಕೊಳ್ಳಲು ಮತ್ತೇನಾದರೂ ಭರವಸೆ ಕೊಟ್ಟಿದ್ದಾರೆಯೇ ? ಈ ಬಗ್ಗೆ ವಾದಮಾಡುವುದಕ್ಕೆ ನಾನೇನು ಅಷ್ಟು ತಜ್ಞನಲ್ಲ. ನಾನು ಸ್ವಲ್ಪ ವಿಚಾರ ಮಾತ್ರ ಕೇಳಿ ತಿಳಿದುಕೊಂಡಿರುವೆನು. ಎಡಭಾಗದಲ್ಲಿರತಕ್ಕಂಥಾ ರೈತರಿಗೆ ನೀರು ಕೊಟ್ಟಾದ ಮೇಲೆ ಬಲಭಾಗದಲ್ಲಿರತಕ್ಕಂಥಾ ರೈತರಿಗೆ ಕೆಲವು ಭಾಗಕ್ಕಾದರೂ ನೀರನ್ನು ಒದಗಿಸುವುದಕ್ಕೆ ಯೋಚನೆ ಮಾಡಿದರೆ ಅದರಲ್ಲಿ ತಪ್ಪೇನು ? ಅದು ಸೆಮಿಡ್ರೈ ಏರಿಯಾ. ಆ ಏರಿಯಾದಲ್ಲಿರತಕ್ಕಂಥಾ ೮೫ ಸಾವಿರ ಎಕರೆಗೂ ನೀರು ಒದಗಿಸುವುದಾದರೆ ನಾನು ಅತ್ಯಂತ ಸಂತೋಷ ಪಡುತ್ತೇನೆ, ಅದು ಆಗಲಿಲ್ಲ ಎಂದರೆ ಕೆಲವು ಭಾಗಕ್ಕಾದರೂ ಎಂದರೆ ಒಂದು ೧೦ ಸಾವಿರ ಎಕರೆಗೋ, ೫೦ ಸಾವಿರ ಎಕರೆಗೋ ಕಟ್ಟಿದ್ದರಲ್ಲಿ ಮಧ್ಯಪ್ಪ ಎನ್ನುವ ಗಾದೆಯಂತೆ ಬಂದಷ್ಟು ಉಪಯೋಗ ಅಂದಂತೆ ಅಷ್ಟು ನೀರನ್ನಾದರೂ ಒದಗಿಸೋಣ ಅಂತ ಯೋಚನೆ ಮಾಡಿದರೇ ತಪ್ಪೇ ? ಯಾವಾಗಲೂ ಕೊಟ್ಟವನು ಕೋಡಂಗಿ, ಈಸುಕೊಂಡವನು ವೀರಭದ್ರ ಅಂತ ನಾನು ಅಂಥಾ ಕೆಲಸಕ್ಕೆ ಕೈಹಾಕಬಾರದು. ನಿಮಗೆ ಮತ್ತೊಂದು ಉದಾಹರಣೆ ಹೇಳುವುದಾದರೆ ಒಬ್ಬ ರೈಲಿನಲ್ಲಿ ಅರ್ಜೆಂಟಾಗಿ ಪ್ರಯಾಣ ಮಾಡಬೇಕಾಗಿರುತ್ತೆ. ಆತ ಮುಂದುವೆಗೆ ಹೋಗಬೇಕು, ಅದರಲ್ಲಿ ಬಹಳ ನೂಕು ನುಗ್ಗಲು ಜಾಗವೇ ಇಲ್ಲ. ಅಂಥಾ ಸಂದರ್ಭದಲ್ಲಿ ಅವನು ಹೇಳುತ್ತಾನೆ ನಾನು ಬಹಳ ಅರ್ಜೆಂಟಾಗಿ ಆಸ್ಪತ್ರೆಗೆ ಹೋಗಬೇಕು ಎಂದು ಒಳಗೆ ನುಗ್ಗಿಬಿಡುತ್ತಾನೆ, ಅವನ ಜೊತೆಯಲ್ಲೇ ಇನ್ನೊಬ್ಬ ಕೂಡ ಇರುತ್ತಾನೆ, ಅವನಿಗೆ ಅಲ್ಲಿ ಜಾಗ ಇಲ್ಲದೇ ಇದ್ದರೂ ಕೂಡ ಅವನೂ ಸಹ ನುಗ್ಗಿ ಬಿಡುತ್ತಾನೆ. ಆಗ ಒಳಗೆ ಇದ್ದವರು ಇಲ್ಲೆ ಜಾಗ ಇಲ್ಲ ಒಳಗೇಕೆ ನುಗ್ಗುತ್ತೀಯಾ ಎಂದು ಕೇಳುತ್ತಾನೆ. ಆ ಭಾವನೆ ಬೇಡ. ನಾವು ಇಲ್ಲಿರತಕ್ಕಂಥಾವರು ಜವಾಬ್ದಾರಿ ಸದಸ್ಯರು. ನಾವು ಎಲ್ಲಾ ಭಾಗದ ಜನರ ರಕ್ಷಣೆ ಮಾಡತಕ್ಕಂಥಾವರು ಅನ್ನುವ ಭಾವನೆಯನ್ನು ತಿಳಿದುಕೊಳ್ಳಬೇಕು. ನಾವು ಯಾವುದೇ ಒಂದು ಭಾಗದಿಂದ ಬಂದರೂ ಕೂಡ ಆ ಭಾಗದ ಜನರಿಗೇ ಎಲ್ಲಾ ಸೌಲಭ್ಯಗಳೂ ಇರಬೇಕು ಅನ್ನುವುದು ಬೇಡ, ಈಗ ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಚುನಾಯಿತನಾಗಿ ಬಂದಿದ್ದರೂ ಕೂಡ ಆ ಜನರಿಗೇನೇ ಎಲ್ಲಾ ಸೌಲಭ್ಯಗಳೂ ಬರಬೇಕು ಬೇರೆಯವರಿಗೆ ಇರಬಾರದು ಅನ್ನುವ ಭಾವನೆ ಬೇಡ.

ಶ್ರೀ ಜಿ. ಮಾದೇಗೌಡ.—ಹಾಗಾದರೆ ೧೦೦ ಜನರನ್ನು ಸಾಯಿಸಿ ಒಬ್ಬ ಬದುಕುವುದು ಸರಿಯೇ ?

ಶ್ರೀ ಕೆ. ಪುಟ್ಟಸ್ವಾಮಿ.—೧೦೦ ಜನರನ್ನು ಕೊಂದು ಒಬ್ಬ ಬದುಕಬೇಕು ಅಂತಲ್ಲಾ, ಮಾನ್ಯ ಸದಸ್ಯರು ನಾನು ಹೇಳುವುದನ್ನು ದಯವಿಟ್ಟು ಗಮನಿಸಿ. ಎಡಭಾಗದ ರೈತರಿಗೆ ಬೇಕಾಗಿರುವಷ್ಟು ನೀರನ್ನು ಮೀಸಲಾಗಿಟ್ಟು ಬಲಭಾಗವನ್ನು ಅಭಿವೃದ್ಧಿ ಮಾಡುತ್ತೇವೆ ಎಂದರೆ ಏತಕ್ಕೆ ತಮಗೆ ಕೋಪ ಬರಬೇಕು. ಅವರು ಇನ್ನೊಂದು ಮಾತನ್ನು ಹೇಳಿದರು ೧೦೦ ಜನರನ್ನೂ ಸಾಯಿಸಿ ಒಬ್ಬ ಬದುಕಬೇಕೇ ಅಂತ. ಹಾಗಲ್ಲ, ೧೦೦ ಜನರು ತಿಂದು ಅಜೀರ್ಣವಾಗುವುದರ ಬದಲು ತಿನ್ನುವುದರಲ್ಲಿ ಸ್ವಲ್ಪ ಉಳಿಸಿ ಹಸಿದು ಸಾಯುವುದನ್ನು ಬದುಕಿಸುವ ಮಾತು ನೀರನ್ನು ಉಳಿಸಿ ಸ್ವಲ್ಪವನ್ನಾದರು ಬಲಭಾಗದವರಿಗೆ ಕೊಟ್ಟು ಅಭಿವೃದ್ಧಿ ಮಾಡಿಕೊಡೋಣ ಎಂದರೆ ಅವರಿಗೆ ಏಕೆ ಇಷ್ಟು ಕೋಪ ?

I have submitted that I am also from Mandya and as such I have every interest in Mandya. My interest in Mandya is no less than that of any other member.

SRI G. MADE GOWDA.—The Hon' ble Member cannot claim that.

SRI K. PUTTASWAMY.—Why not ? I have got as much interest in Mandya as any other member. I have also equal interest in Mysore. I can claim the same interest in Bijapur or Bidar or any other area. Why should he quarrel with me for that ? If his interest is confined to just a small portion of Mandya viz Visveswarayya Canal area, I have no quarrel with that but let him not quarrel with me if I say I have got interest in another part of Karnataka State. Government has come foward to constitute a committee consisting of technical persons of proved ability and good reputation to advise the Government after considering all aspects of the case and we welcome it. Therefore I would humbly appeal to all persons not to say or do anything which would arouse the emotions of the people. I would therefore appeal to the Government to see that the committee expedites its work and give its report as early as possible.

ಬಹಳ ದಿನಗಳಿಂದ ನೆನಗುದಿ ಬಿದ್ದಿರತಕ್ಕಂಥಾವರನ್ನು ಮೇಲಕ್ಕೆ ಎತ್ತಬೇಕಾದ್ದು ಸಹಜ. ಅವರಿಗೂ ಇದರಿಂದ ಲಾಭ ಇದೆ. ಹೋಗಲಿ ನಿಮಗೆ ಎಷ್ಟು ಲಾಭವಾಗುತ್ತದೋ ಅದನ್ನಾದರೂ ಹೇಳಿ ಈಗಾಗಲೇ ಸರ್ಕಾರ ಅವರ ಬಗ್ಗೆ ಹೇಳಿದೆ. ಎಡಭಾಗದಲ್ಲಿರತಕ್ಕಂಥಾ ರೈತರಿಗೂ ಸಮಾಧಾನ ಮಾಡುವುದು ಸರ್ಕಾರದ ಕರ್ತವ್ಯ. ಅವರ ಮನಸ್ಸಿನಲ್ಲಿ ಸಂಶಯಕ್ಕೆ ಕಾರಣವಾದರೂ ಇಷ್ಟೆ. ಒಂದುವೇಳೆ ನೀರು ಹಂಚುವಾಗ ನಮಗೆಲ್ಲರಿಗೂ ಸಾಕಾದಷ್ಟು ನೀರು ಬರುತ್ತದೋ ಇಲ್ಲವೋ ಅನ್ನುವ ಸಂಶಯ ಬರುವುದು ಸಹಜ. ಹೀಗೆ ನೀರು ಹಂಚುವಾಗ ಕೆಲವು ಭಾಗಕ್ಕೆ ಹೆಚ್ಚು ದೊರಕುತ್ತದೆ, ಕೆಲವು ಭಾಗಕ್ಕೆ ಸಾಕಷ್ಟು ದೊರಕುವುದಿಲ್ಲ ಅನ್ನುವ ಸಂಶಯ ಅವರ ಮನಸ್ಸಿನಲ್ಲಿ ಬರುವುದು ಸಹಜ ಈ ಸಂಶಯವನ್ನು ನಿವಾರಣೆ ಮಾಡುವುದು ಸರ್ಕಾರದ ಕರ್ತವ್ಯ. ಯಾವುದಾದರೂ ಒಳ್ಳೆಯ ಕೆಲಸವನ್ನು ಮಾಡುವಾಗ ಸರ್ಕಾರ ಅದರಲ್ಲಿರತಕ್ಕಂಥಾ ಸಂಶಯವನ್ನೂ ಕೂಡ ನಿವಾರಣೆ ಮಾಡಬೇಕಾದ್ದು ಅವರ ಕರ್ತವ್ಯ, ಹಾಗೆಯೇ ಸರ್ಕಾರ ಅವರಿಗೆ ಇರತಕ್ಕಂಥಾ ಸಂಶಯದ ಬಗ್ಗೆ ನಿಜವಾದ ಅಂಕಿ ಅಂಶಗಳನ್ನು ಕೊಟ್ಟು ಹೇಳಬಹುದಾಗಿತ್ತು. ಆದರೆ ಈಗ ಮಾನ್ಯ ಸದಸ್ಯರಾದ ಶ್ರೀ ಹಲಗೇಗೌಡರು ನಿಮಗೆ ಬೇಕಾದಂಥಾ ವರದಿಯನ್ನು ತರಿಸಬೇಡಿ ನ್ಯಾಯವಾದ ವರದಿಯನ್ನು ತರಿಸಿ ಎಂದು ಹೇಳಿದ್ದಾರೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಹಲಗೇಗೌಡರು ಆರೀತಿ ಹೇಳಲಿಲ್ಲಾ.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಇಲ್ಲೇ ಇದ್ದಾರೆ ಕೇಳಿ.

ಶ್ರೀ ಡಿ. ಹಲಗೇಗೌಡ.—ವರದಿ ಕೊಡುವ ಕಾಲದಲ್ಲಿ ಏನು ಪ್ರಭಾವ ಬರುತ್ತದೋ ಅದು ನೀವು ಕೇಳುವ ರೀತಿಯಲ್ಲಿ ಬರಬಹುದು ಅನ್ನುವ ಭಾವನೆ ಬಂತೇ ವಿನಾ ನಿಮಗೆ ಬೇಕಾದ ರೀತಿಯಲ್ಲಿ ವರದಿ ಬರೆಸಿಕೊಳ್ಳುತ್ತಾರೆ ಅಂತ ನಾನು ಹೇಳಲಿಲ್ಲ.

ಶ್ರೀ ಜಿ. ಮಾದೇಗೌಡ.—ಮಾನ್ಯ ಪುಟ್ಟಸ್ವಾಮಿಯವರು ಆರೀತಿ ಮಾತನಾಡಬಾರದು,

ಶ್ರೀ ಕೆ. ಪುಟ್ಟಸ್ವಾಮಿ.—ಈ ರೀತಿ ಒಂದು ಕಮಿಟಿ ಮಾಡಿದಾಗ ನಮ್ಮ ಮೂಗಿನ ನೇರಕ್ಕೆ ಸರಿಯಾಗಿ ವರದಿ ತರಿಸಿಕೊಳ್ಳುತ್ತೇವೆ ಎನ್ನುವ ಭಾವನೆ ಇಟ್ಟುಕೊಳ್ಳುವುದರಿಂದ ನಾವು ಯಾವ ಕೆಲಸವನ್ನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಯಾವ ಮರದ ಮೇಲೆ ನಿಂತಿರುತ್ತೇವೋ ಅದೇ ಮರದ ಬುಡವನ್ನು ಕಡಿದ ಹಾಗೆ ಆಗುತ್ತದೆ. ಈಗ ಸಮಿತಿ ಸದಸ್ಯರಾಗಿರುವವರ ಹಿನ್ನೆಲೆಯನ್ನು ತೆಗೆದುಕೊಂಡರೆ ಅವರು ಬಹಳ ಕಾಲದಿಂದಲೂ ನಮ್ಮ ಸರ್ಕಾರದ ಸೇವೆಯಲ್ಲಿ ಕೆಲಸ ಮಾಡಿದ್ದಾರೆ, ಇದನ್ನು ಆಲೋಚನೆ ಮಾಡಿ ನೋಡಿದರೆ ಅವರಿಂದ ನ್ಯಾಯವಾದಂಥ ವರದಿ ಬರುತ್ತದೆ ಎಂದು ಗೊತ್ತಾಗುತ್ತದೆ. ವರದಿ ಬಂದ ನಂತರ ಅದನ್ನು ಜನರ ಗಮನಕ್ಕೆ ತರುವುದು ಅವಶ್ಯಕ. ಶ್ರೀ ಮಗ್ದುಂ ಅವರ ವರದಿ ಇದೆ ಎಂದು ಹೇಳಿದರು, ಅದನ್ನು ಇದುವರೆಗೆ ನೋಡಲಿಕ್ಕೆ ಆಗಿಲ್ಲ. ಈ ಸಮಿತಿ ವರದಿ ಬಂದ ಕೂಡಲೇ ಅದನ್ನು ಪ್ರಕಟಣೆಮಾಡಿ ಮತ್ತೆ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಅಲ್ಲಿನ ಎಡ ಭಾಗದ ರೈತರ ಹಿತವನ್ನು ಸಂಪೂರ್ಣವಾಗಿ ರಕ್ಷಣೆ ಮಾಡಿ, ಬಲಭಾಗದವರನ್ನು ಕಾಪಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ ಈ ವಿಷಯದ ಬಗ್ಗೆ ಮಾನ್ಯ ಸ್ನೇಹಿತರು ಹೇಳಿದಂಥ ಮಾತನ್ನು ನಾನು ಕೇಳಿದ್ದೇನೆ ಹಾಗೂ ಹಿರಿಯ ಸದಸ್ಯರಾದ ಶ್ರೀಮಾನ್ ಪುಟ್ಟಸ್ವಾಮಿಯವರ ಮಾತನ್ನು ಕೇಳಿ ಅವರ ವಾದವನ್ನೇ ನಾನು ಪುಷ್ಟೀಕರಿಸುತ್ತೇನೆ. ಈ ವರುಣಾನಾಲೆ ಪ್ರದೇಶದ ರೈತರ ಶಾಪ ಎಂದು ಕಾಣುತ್ತದೆ. ಆ ನಾಲೆ ಯಾವ ಕಾಲದಲ್ಲಿ ಆಗಬೇಕು ಎಂದರೂ ಕೂಡ ಅದಕ್ಕೆ ಒಂದು ರಾಜಕೀಯ ಬಣ್ಣವೋ ಅಥವಾ ಏನಾದರೂ ವಿಘ್ನಗಳು ಬಂದು ಸುಮಾರು ೫೦ ವರ್ಷಗಳಿಂದಲೂ ತಡವಾಗಿದೆ. ಈಗಾಲಾದರೂ ಕೂಡ ನಾನು ಹೇಳುವುದಿಷ್ಟೆ. ಎಡಭಾಗದ, ಬಲಭಾಗದ ರೈತರು ಎಂದು ಅಲ್ಲ, ನಾವೆಲ್ಲಾ ಒಂದೇ ಎನ್ನುವ ವೃತ್ತಿಯಿಂದ ಮಾಡಬೇಕು. ಮೊದಲು ಮೈಸೂರು, ಮಂಡ್ಯ ಜಿಲ್ಲೆ ಒಂದೇ ಆಗಿತ್ತು. ೧ ಲಕ್ಷ, ೨೦ ಸಾವಿರ ಎಕರೆಗೆ ಅಚ್ಚುಕಟ್ಟನ್ನು ನಿರ್ಮಿಸಿಕೊಂಡಾದ ಮೇಲೆ ಈಗ ಇನ್ನೂ ಒಂದು ಲಕ್ಷ ಎಕರೆ ಹೆಚ್ಚಾಗಿ ಮಾಡಿಕೊಂಡಿದ್ದಾರೆ. ಅದಕ್ಕೆ ನಮ್ಮದು ತಕರಾರು ಬರಲಿಲ್ಲ. ಮಾನ್ಯ ಸ್ನೇಹಿತರು ಹೇಳಿದಹಾಗೆ ೩-೪ ಸಕ್ಕರೆ ಕಾರ್ಖಾನೆಗಳನ್ನು ಮಾಡಿಕೊಂಡಿದ್ದಾರೆ, ಅದಕ್ಕೆ ನಮ್ಮ ಅಡ್ಡಿಯಿಲ್ಲ. ಈಗ ೫ ಖಂಡಸಾರಿ ಫ್ಯಾಕ್ಟರಿಗಳನ್ನು ಮಾಡಿಕೊಂಡಿದ್ದಾರೆ, ಏಕೆ ಮಾಡಿಕೊಂಡಿರಿ ಎಂದು ನಾವು ಕೇಳುತ್ತಾ ಇಲ್ಲ. ಮಾನ್ಯ ಪುಟ್ಟಸ್ವಾಮಿಯವರು ಹೇಳಿದಹಾಗೆ ಮೈಸೂರು ತಾಲ್ಲೂಕಿನಲ್ಲಿ ೭-೮ ಇಂಚು ಕೂಡ ಮಳೆಯಾಗುವುದಿಲ್ಲ. ವರುಣಾನಾಲೆಯೋಜನೆ ಅನೇಕ ವರ್ಷಗಳಿಂದಲೂ ಕೂಡ ಆಗಬೇಕು ಎಂದು ಕನಸುಕಾಣುತ್ತಿದ್ದೆವು. ಮಂಡ್ಯ ಜಿಲ್ಲೆಗೆ ನೀರನ್ನು ಹರಿಸಬಾರದು, ಭೂಮಿಯನ್ನು ಒಣಗಿಸಬೇಕು ಎನ್ನುವ ಇಚ್ಛೆ ನಮಗೆ ಇಲ್ಲ. ಆದರೆ ಈ ನೀರು ಉಳಿಯುತ್ತಾ ಇದ್ದರೆ, ಈ ನೀರನ್ನು ನಮಗೆ ಕೆಲವು ಪ್ರದೇಶಗಳಲ್ಲಿ ಬರಿಸಿದರೆ ಸೆಮಿ ಡ್ರೈ ಕ್ರಾಫ್ ಆದರೂ ಬೆಳೆಯುವುದಕ್ಕೆ ಈ ಯೋಜನೆಯನ್ನು ಮಾಡಿಸಿಕೊಡಿ ಎಂದರೆ, ಅದಕ್ಕೆ ಸತ್ಯಾಗ್ರಹಗಳನ್ನು ಮಾಡುವುದು, ಬಂದ್ ಮಾಡುವುದು ಸರಿಯಲ್ಲ. ಈ ಸಮಸ್ಯೆಯನ್ನು, ಈ ಮನೆಯ ಒಳಗೆ ಇರತಕ್ಕಂಥ ಸದಸ್ಯರು ಹೊರಗಡೆ ಇರತಕ್ಕಂಥ ಸದಸ್ಯರು ಸೌಜನ್ಯದಿಂದ ಸೌಹಾರ್ದದಿಂದ ನೋಡಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಈ ಪ್ರದೇಶದ ರೈತರು ಏನಿದ್ದಾರೆ, ಅವರು ಈ ರಾಜ್ಯದ ಜನ, ಅವರಿಗೂ ಸಹಕಾರ ನೀಡಬೇಕು ಎನ್ನುವ ಮನೋಭಾವವನ್ನಿಟ್ಟುಕೊಂಡು ಅವರಿಗೆ ಸಹಕಾರ ಕೊಡಬೇಕು ಎಂದು ಮಾನ್ಯ ಸ್ನೇಹಿತರನ್ನು ನಾನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಶ್ರೀಮಾನ್ ದೇವೇಗೌಡರು ಹೇಳಿದಹಾಗೆ ಈಗ ಅಂದರೆ ೧೯೭೭ರಲ್ಲಿ ಈ ಯೋಜನೆಯನ್ನು ತೆಗೆದುಕೊಂಡಿದ್ದೀರಿ. ಇಷ್ಟು ತಡವಾದರೂ ಈ ಯೋಜನೆಯನ್ನು ತೆಗೆದುಕೊಂಡು ಶೀಘ್ರಗತಿಯಿಂದ ಏನು ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದೀರಿ, ಅದರ ಬಗ್ಗೆ ನನಗೆ ಗೌರವ ಇದೆ. ಈ ತಜ್ಞರ ಸಮಿತಿ ರಿಪೋರ್ಟ್ ಕೊಟ್ಟರೆ ಅದು ಸರಿಯಾದ ರಿಪೋರ್ಟ್ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ತಮ್ಮ ತಾಂತ್ರಿಕಜ್ಞಾನವನ್ನು ಉಪಯೋಗಿಸಿ ಒಳ್ಳೆಯ ರಿಪೋರ್ಟನ್ನು ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಯಾವ ರಾಜಕೀಯದ, ಇನ್‌ಫ್ಲೂಯನ್ಸಿನ ರಿಪೋರ್ಟ್ ಅಲ್ಲ. ಅದು ಒಂದು ಒಳ್ಳೆಯ ರಿಪೋರ್ಟ್

ಆಗುವುದರಲ್ಲಿ ಸಂದೇಹವಿಲ್ಲ. ಆ ರಿಪೋರ್ಟ್‌ನ್ನು ಯಾರೇ ಆಗಲೀ, ಆ ಭಾಗದ ಜನರಾಗಲೀ ನಾವಾಗಲೀ ಒಪ್ಪಿಕೊಳ್ಳಬೇಕು. ಈ ತಜ್ಞರ ರಿಪೋರ್ಟ್ ಪ್ರಕಾರ ಈ ಭಾಗದ ಜನಗಳಿಗೆ ಸಾಮಾಜಿಕ ನ್ಯಾಯವನ್ನು ಶೀಘ್ರವಾಗಿ ದೊರಕಿಸಿಕೊಡಬೇಕು ಎಂದು ಸರ್ಕಾರವನ್ನು ಪ್ರಾರ್ಥಿಸಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಸದನದಲ್ಲಿ ಈ ವರುಣಾನಾಲೆ ಬಗ್ಗೆ ಶ್ರೀಮಾನ್ ದೇವೇಗೌಡರು ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ಅದರ ಬಗ್ಗೆ ೨ ರೀತಿಯ ವಾದಗಳನ್ನು ಮಾನ್ಯ ಸ್ನೇಹಿತರು ಈ ಸದನದಲ್ಲಿ ಮಾಡಿದ್ದಾರೆ. ಈ ವರುಣಾ ನಾಲೆ ಸಮಸ್ಯೆ ಸುಮಾರು ೫೦ ವರ್ಷಗಳಿಂದಲೂ ಇರತಕ್ಕ ಬಹಳ ಹಳೆಯದಾದಂಥ ಸಮಸ್ಯೆ ಎಂದು ಈ ಸದನದಲ್ಲಿ ನಾನಾದರೂ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕೃಷ್ಣರಾಜಸಾಗರವನ್ನು ಕಟ್ಟತಕ್ಕ ಕಾಲದಲ್ಲಿ ಅದನ್ನು ಕಟ್ಟಿದಂತಹವರು ಕೃಷ್ಣರಾಜಸಾಗರದಿಂದ ಎಡದಂಡೆ ನಾಲೆ ತೆಗೆಯಬೇಕು, ಬಲದಂಡೆ ನಾಲೆಯನ್ನು ಕೂಡ ತೆಗೆಯಬೇಕು, ಈ ಎರಡನ್ನೂ ಸೇರಿಸಿ ಒಟ್ಟು ಇಷ್ಟು ಎಕರೆಯಲ್ಲಿ ಬೆಳೆಯಬೇಕು ಎಂದು ಅಂದಾಜುಮಾಡಿ ಏನು ವ್ಯವಸ್ಥೆಯನ್ನು ಮಾಡಿದ್ದರೋ ಆಗಿನ ಕಾಲದಲ್ಲೇ ಈ ವರುಣಾನಾಲೆ ಆಗಬೇಕಾಗಿತ್ತು. ಆ ಅಂದಾಜಿನಲ್ಲೇ ಇದೂ ಕೂಡ ಸೇರಿರತಕ್ಕಂಥಾದ್ದು ಇಷ್ಟು ಎಕರೆ ಎಂದು ಅಂದಾಜುಮಾಡಿ, ಅದಕ್ಕೆ ಅನುಗುಣವಾಗಿ ಇಷ್ಟು ಕ್ಯೂಸೆಕ್ಸ್ ನೀರನ್ನು ಹರಿಸಬೇಕು ಎಂದು ನಾಲೆಗಳನ್ನು ತೆಗೆದು ಏನು ವ್ಯವಸ್ಥೆ ಮಾಡಿದ್ದರೋ ಅದಕ್ಕಿಂತ ಹೆಚ್ಚು ಅಚ್ಚುಕಟ್ಟಾಗಿದೆಯೆಂದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಇದರ ಬಗ್ಗೆ ಎಡ ಮತ್ತು ಬಲ ನಾಲೆಗಳ ಅಚ್ಚುಕಟ್ಟುದಾರರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡುವುದು ಸಾಧುವಾದುದಲ್ಲ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ಈ ೩ ರಾಜ್ಯಗಳ ನೀರಿನ ಹಂಚಿಕೆ ಸಮಸ್ಯೆಯನ್ನು ಬಿಡಿಸುವ ಹಂತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದನ್ನು ತಲೆಗೆ ಹಚ್ಚಿಕೊಂಡಿದ್ದಾರೆ. ಆದುದರಿಂದ ಈ ಸಮಸ್ಯೆ ಇಷ್ಟರಲ್ಲೇ ಪರಿಹಾರವಾಗುವುದಿದೆ ಎಂದು ಮನಗಂಡ ಮೇಲೆ, ಕರ್ನಾಟಕದಲ್ಲಿ ಎಷ್ಟು ನೀರು ಉಪಯೋಗ ಮಾಡಿದ್ದೇವೆ, ಮುಂದೆ ಉಪಯೋಗ ಮಾಡುವುದಕ್ಕೆ ಎಷ್ಟು ನೀರು ಸಿಗಬೇಕು ಎನ್ನುವುದನ್ನು ಗಣನೆಗೆ ತೆಗೆದುಕೊಂಡು ವಿಶ್ವೇಶ್ವರಯ್ಯ ನಾಲೆ ಅಚ್ಚುಕಟ್ಟಿನಲ್ಲಿ ಹಾಕಿರಲಿಕ್ಕಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಿಕೊಂಡಿದ್ದಾರೆ, ಬೆಲ್ಲ ತಯಾರು ಮಾಡುವ ಕಾರ್ಖಾನೆಗಳನ್ನು ಮಾಡಿಕೊಂಡಿದ್ದಾರೆ ಎನ್ನುವ ವಾದವನ್ನು ಏನು ಇಟ್ಟಿದ್ದಾರೆ ಇದೆಲ್ಲವನ್ನೂ ನಾವು ಲೆಕ್ಕಕ್ಕೆ ತೆಗೆದುಕೊಂಡರೂ ಪದೇ ಪದೇ ವಿಶ್ವೇಶ್ವರಯ್ಯ ನಾಲೆ ಅಚ್ಚುಕಟ್ಟಿನಲ್ಲಿ ಬರತಕ್ಕ ರೈತರನ್ನು ಯಾವ ರೀತಿಯಿಂದಲೂ ಕಡೆಗಾಣಿಸುವುದಿಲ್ಲ, ಅವರಿಗೆ ಬೇಕಾದಷ್ಟು ನೀರನ್ನು ಕೊಡುವುದಕ್ಕೆ ಸಾಧ್ಯವಿದೆ ಎನ್ನುವ ಭರವಸೆಯನ್ನು ಮತ್ತೆ ಮತ್ತೆ ಕೊಡುತ್ತಾ ಇದ್ದಾರೆ. ಇದನ್ನು ಅವರು ಲಕ್ಷ್ಯದಲ್ಲಿಟ್ಟು ಕೊಳ್ಳಬೇಕು. ನೀವು ೩ ಸಕ್ಕರೆ ಕಾರ್ಖಾನೆಗಳನ್ನು ಮಾಡಿಕೊಂಡಿದ್ದೀರಿ ಎಂದು ಹೇಳಬಹುದು. ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಮಾಡುವ ಹಂತದಲ್ಲಿ ಒಂದು ದಿನಕ್ಕೆ ಇಷ್ಟು ಟನ್ ಕಬ್ಬನ್ನು ಅರೆಯಬೇಕು ಎಂದು ಅಂದಾಜು ಮಾಡಿಕೊಂಡಿರಬಹುದು. ನಂತರ ಅದಕ್ಕೆ ೨ ಪಟ್ಟು, ೩ ಪಟ್ಟು ಟನ್ ಕಬ್ಬನ್ನು ಅರೆಯಬೇಕು, ಈಗ ೪ ಪಟ್ಟು ಕಬ್ಬನ್ನು ಅರೆಯಬೇಕು ಎಂದು ಅಂದಾಜು ಮಾಡುತ್ತೇವೆ ಎಂದು ಹೇಳಬಹುದು. ಅದಕ್ಕೇ ಬೇಕಾದಷ್ಟು ವಾದವನ್ನು ಮಾಡುವುದು ಸರಿಯಾದ ವಿಧಾನ ಅಲ್ಲ.

ಶ್ರೀ ಡಿ. ಹಲಗೇಗೌಡ.—ಇದನ್ನು ಸಕ್ಕರೆ ಕಾರ್ಖಾನೆಗಳಿಗೆ ವಿಸ್ತರಣೆ ಮಾಡತಕ್ಕಂಥ ಕೆಲಸದಲ್ಲಿ ಸರ್ಕಾರದವರು ಅಂಕಿ ಅಂಶಗಳನ್ನು ತೆಗೆದುಕೊಂಡು ದೇಶದ ಹಿತದೃಷ್ಟಿಯಿಂದ ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಅಲ್ಲಿಗೆ ಈ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬೆಳೆಗೆ ಪರವಾನಗಿ ಕೊಟ್ಟ ಹಾಗೆ ಆಗುತ್ತದೆ.

3-30 P.M.

ಶ್ರೀ ಎಸ್. ಪುಟ್ಟಸ್ವಾಮಿ.—ಸರ್ಕಾರದವರು ಅದಕ್ಕೆ ಮನ್ನಣೆ ಕೊಟ್ಟು ೩ ಸಕ್ಕರೆ ಕಾರ್ಖಾನೆಗಳನ್ನು ಅಲ್ಲಿ ಮಾಡಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಹಂತಹಂತವಾಗಿ ನಾವು ಅದನ್ನು ಹೆಚ್ಚು ಮಾಡಿಕೊಂಡ ಹಾಗೆಲ್ಲಾ, ಈ ಮೂರು ಸಕ್ಕರೆ ಕಾರ್ಖಾನೆಗಳನ್ನು ಮಂಡ್ಯದಲ್ಲಿ ತೆರೆದಿರತಕ್ಕಂಥಾದಕ್ಕೆ ೩೫ ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆದರೆ ಅದಕ್ಕೆ ಸಾಕಾಗುತ್ತದೆಎಂದು ನನಗನ್ನಿಸುತ್ತದೆ. ಈ ೩೫ ಸಾವಿರ ಎಕರೆಗೆ ನೀರನ್ನು ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿಲ್ಲ. ೨ ಲಕ್ಷಕ್ಕಿಂತ ಹೆಚ್ಚು ಎಕರೆಗೆ ನೀರನ್ನು ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಂಡ ಹಾಗೆ ಅಷ್ಟಕ್ಕೆ ನೀರನ್ನು ಕೊಡುತ್ತೇವೆಂದು ಸರ್ಕಾರದವರು ಭರವಸೆಯನ್ನು

ಕೊಟ್ಟಿದ್ದಾರೆ. ಈ ಕಾವೇರಿ ನೀರನ್ನು ಒಪ್ಪಂದ ಆಗಬೇಕಾದ್ದು ಇದೆ. ಅದು ಆದ ಮೇಲೆ ನೀರು ದೊರಕುತ್ತದೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಒಂದು ಅಂದಾಜು ಪ್ರಕಾರ ಹೇಳುವುದಾದರೆ ಹೇಮಾವತಿ, ಹಾರಂಗಿ, ಕೃಷ್ಣರಾಜಸಾಗರದ ಅಣೆಕಟ್ ಪಾಯಿಂಟ್‌ವರೆಗೆ ಲೆಕ್ಕವನ್ನು ತೆಗೆದುಕೊಂಡು ನೀರಿನ ಲೆಕ್ಕ ಹಾಕಿದರೆ ಸುಮಾರು ೪೦-೫೦ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಉಳಿಯುತ್ತದೆಂದು ನನಗನ್ನಿಸುತ್ತದೆ. ನಮ್ಮ ರಾಜ್ಯದ ನೀರಿನ ಹಂಚಿಕೆ ಒಪ್ಪಂದದ ಆಧಾರದ ಮೇಲೆ ನಮಗೆ ೫೦ ಟಿ.ಎಂ. ಸಿ.ಎಫ್.ಟಿ. ಯಷ್ಟು ವಾಟರ್ ಕೃಷ್ಣರಾಜಸಾಗರ ಅಣೆಕಟ್ ಪಾಯಿಂಟ್‌ನಿಂದ ಲೆಕ್ಕ ತೆಗೆದುಕೊಂಡರೂ ನೀರು ಸಿಕ್ಕುತ್ತದೆ. ಈಗ ೧೦ಟಿ.ಎಂ.ಸಿ ಎಫ್.ಟಿ. ಯಷ್ಟು ವಾಟರನ್ನು ಉಪಯೋಗ ಮಾಡತಕ್ಕಂಥಾದಕ್ಕೆ, ಈಗ ಹೊಸದಾಗಿ ಮಂಡ್ಯ ಜಿಲ್ಲೆಯಲ್ಲಿ ಕೃಷ್ಣರಾಜಪೇಟೆ, ನಾಗಮಂಗಲ, ಮಂಡ್ಯ ತಾಲ್ಲೂಕು, ಬಸರಾಳು ಹೋಬಳಿಗೆ ಹೇಮಾವತಿಯಿಂದ ನೀರನ್ನು ಕೊಡಬೇಕು ಎಂದು ಅಂದಾಜು ಮಾಡುತ್ತಿದ್ದಾರೆ. ಸರ್ಕಾರದವರು ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ ಅಂಕಿ ಅಂಶಗಳನ್ನು ಪಡೆದಿದ್ದಾರೆ. ಸರ್ಕಾರದವರು ಎಲ್ಲರೂ ಒಪ್ಪತಕ್ಕಂಥ ರೀತಿಯಲ್ಲಿ ಒಂದು ವರದಿಯನ್ನು ಈ ಬಗ್ಗೆ ತಯಾರು ಮಾಡಬೇಕೆಂದು ತಜ್ಞರ ಸಮಿತಿಯನ್ನು ಏನು ನೇಮಿಸಿದ್ದಾರೆ, ಅವರ ವರದಿ ಬಂದ ಮೇಲೆ ನನ್ನ ಅನೇಕ ಜನ ಸ್ನೇಹಿತರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಯವರು ಆ ಭಾಗದಲ್ಲಿ ಬರತಕ್ಕಂಥ ಸಂಬಂಧಪಟ್ಟ ಮಂತ್ರಿಗಳು, ಶಾಸಕರು ಮತ್ತು ಪ್ರಮುಖರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಒಂದು ಸಮಸ್ಯೆಯನ್ನು ಬಿಡಿಸಿ, ತೀರ್ಮಾನವನ್ನು ಕೈಕೊಳ್ಳುವುದು ಸೂಕ್ತವೆಂದು ಸಲಹೆ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಇಂದಿನ ಸಭೆಯಲ್ಲಿ ಮಾನ್ಯ ದೇವೇಗೌಡರು ಮತ್ತು ಅವರ ಸ್ನೇಹಿತರು ಈ ವಿಷಯವನ್ನು ಇಲ್ಲಿ ಚರ್ಚೆಗೆ ತಂದಿದ್ದಕ್ಕಾಗಿ ಪ್ರಥಮವಾಗಿ ನಾನು ಅವರಿಗೆ ವಂದನೆ ಮಾಡುತ್ತೇನೆ. ಈ ವಿಷಯವನ್ನು ಅವರು ಇಲ್ಲಿ ತರದೇ ಇದ್ದಿದ್ದರೆ ಈ ಬಗ್ಗೆ ಕೆಲವು ವಿಷಯಗಳನ್ನು ಈ ಸಭೆಯ ಮುಖೇನ ಈ ಸಭೆಗೂ ಮತ್ತು ದೇಶಕ್ಕೂ ತಿಳಿಸುವ ಅವಕಾಶ ಸರಿಯಾಗಿ ಸಿಕ್ಕುತ್ತಾ ಇರಲಿಲ್ಲ. ಅದಕ್ಕಾಗಿ ನನ್ನ ವಂದನೆಗಳು. ಅವರು ಪ್ರಥಮವಾಗಿ ಒಂದು ಮಾತನ್ನು ಹೇಳಿದ್ದಾರೆ. ಇದಕ್ಕೆ ರಾಜಕೀಯ ಬಣ್ಣವನ್ನು ಹಚ್ಚಿಕೊಂಡು ಹೋಗಬಾರದು ಎಂದು ಹೇಳಿದ್ದಾರೆ. ಅದು ನಾವೆಲ್ಲ ಒಪ್ಪತಕ್ಕಂಥ ಮಾತು. ಇದಕ್ಕೆ ರಾಜಕೀಯ ಬಣ್ಣ ಇಲ್ಲ ಎನ್ನುವುದಕ್ಕೆ ನಾನು ಬೇಕಾದಷ್ಟು ನಿದರ್ಶನಗಳನ್ನು ಕೊಡಬೇಕಾದ ಅಗತ್ಯವಿಲ್ಲ. ಈ ಬಗ್ಗೆ ಒಂದೇ ಒಂದು ಮಾತನ್ನು ಈ ಸಭೆಗೆ ತಿಳಿಸಿದರೆ ಈ ಸಭೆ ನನ್ನ ಮಾತಿಗೆ ಮಾನ್ಯ ಕೊಡುತ್ತದೆ ಎಂಬ ನಂಬಿಕೆ ನನಗಿದೆ. ಆಕಸ್ಮಾತಾಗಿ ೧೯೭೦ನೇ ಇಸವಿಯಲ್ಲಿ taking something out of one's hat ಇದನ್ನು ತೆಗೆದಿಲ್ಲ. ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡುವಾಗ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಸರ್ಕಾರ ಇದರಲ್ಲಿ ರಾಜಕೀಯ ಮಾಡಬೇಕು ಎಂದು ಇದನ್ನು ತೆಗೆದುಬಿಟ್ಟಿದ್ದಾರೆ ಎನ್ನುವ ರೀತಿಯಲ್ಲಿ ಯಾರಾದರೂ ತಿಳಿದಿದ್ದರೆ ಅದು ಸರಿಯಲ್ಲ ಎಂದು ಹೇಳುತ್ತೇನೆ. ಈ ಸಮಸ್ಯೆ ಮೊದಲಿನಿಂದಲೂ ಇದೆ. ಇದು ೧೯೬೪ನೇ ಇಸವಿಯಲ್ಲಿ ಪ್ರಾರಂಭವಾಯಿತು. ಇದಕ್ಕೆ ೧೯೬೦ನೇ ಇಸವಿ ಜನವರಿಯಲ್ಲಿ ಫೌಂಡೇಷನ್ ಹಾಕಿದ್ದಾರೆ. ಆಗ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದರು. ಆ ಕಾಲದಲ್ಲಿ ಇದಕ್ಕೆ ಫೌಂಡೇಷನ್ ಹಾಕಿದ್ದಾರೆ. ಈ ಬಗ್ಗೆ ಗೌರ್ನಮೆಂಟ್ ಆರ್ಡರ್ ಇದೆಯೋ ಅಥವಾ ಇಲ್ಲವೇ ಎಂದು ಯಾರೂ ಅನುಮಾನ ಪಡಬೇಕಾದ್ದು ಇಲ್ಲ; ಈ ನಾಲೆಗೆ ಫೌಂಡೇಷನ್ ಹಾಕುವಾಗ ಗೌರ್ನಮೆಂಟ್ ಆರ್ಡರ್ ಮಾಡಿ ಇದನ್ನು ಮಾಡಿದ್ದಾರೆ. ಯಾರಾದರೂ ಗೌರ್ನಮೆಂಟ್ ಆರ್ಡರ್ ಮಾಡದೆಯೇ ಫೌಂಡೇಷನ್ ಹಾಕುತ್ತಾರೆಯೇ?

SRI K. PUTTASWAMY.—There was also a P.W.D. Division created for that.

ಶ್ರೀ ಡಿ. ದೇವರಾಜ ಅರಸ್.—ಆ ಪಿ.ಡಬ್ಲ್ಯು.ಡಿ. ಡಿವಿಷನ್ ಕ್ರಿಯೇಟ್ ಆದಮೇಲೆ ಗೌರ್ನಮೆಂಟ್ ಆರ್ಡರ್ ಮಾಡಿದ್ದಾರೆ. ಇದಾದ ಮೇಲೆ ಏನಾಯಿತು ಎಂದರೆ ಕೆಲವರು ಮಂಡ್ಯ ಸ್ನೇಹಿತರು, ಜನರು, ಹಾಗೂ ಕೆಲವು ಮುಖಂಡರು ಇದರಿಂದ ನಮಗೆ ಅನ್ಯಾಯವಾಗುತ್ತದೆಂದು ಹೇಳಿ ಅವರು ಆದರ ಬಗ್ಗೆ ತೀವ್ರವಾದ ಮನೋಭಾವನೆಯನ್ನು ವ್ಯಕ್ತಪಡಿಸುವುದರ ಜೊತೆಗೆ ಇದನ್ನು ಸ್ವಲ್ಪ ಎಮೋಷನಲ್ ಇಷ್ಯೂ

ಎಂದು ತಾವು ಏನು ಹೇಳಿದಿರಿ ಆ ರೀತಿಯಲ್ಲಿ ಜನರ ಭಾವನಾತ್ಮಕ ವಿಚಾರವನ್ನು ತೆಗೆದುಕೊಂಡು ಬಿಟ್ಟರೇ ಹೊರತು ಇದರ ಬಗ್ಗೆ ರ್‍ಯಾಷನಲ್ಲಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡಲಿಲ್ಲ. ಒಂದು ಕಡೆ ರ್‍ಯಾಷನಾಲಿಸಂ, ಮತ್ತೊಂದು ಕಡೆ ಎಮೋಷನಾಲಿಸಂ ಆಯಿತು. It is easy for any one to play on emotions but it is difficult to argue or think rationally. ಇವತ್ತಿನ ಚರ್ಚೆಯಲ್ಲಿನ ಒಂದು ಸಂತೋಷದ ಸಂಗತಿ ಏನೆಂದರೆ ಯಾರು ಎಮೋಷನಲ್ ಅಪೀಲು ಮಾಡಿಕೊಂಡು ಹೋಗಲಿಲ್ಲ. ಎಲ್ಲರೂ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಹಲಗೇಗೌಡರು ಮತ್ತು ಶ್ರೀಮಾನ್ ಮಾದೇಗೌಡರು ಅವರ ಭಾಗಕ್ಕೆ ನೀರು ಬರುವುದಿಲ್ಲ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಹೇಳುತ್ತೇನೆ ಅದು ಹಾಗೆ ಆಗುವುದಿಲ್ಲ. ಅವರಿಗೂ ನೀರು ಬರುತ್ತದೆ. ಈ ವಿಷಯದ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಎಲ್ಲಾ ವಿಚಾರಗಳನ್ನು ಹೇಳಿಬಿಟ್ಟಿದ್ದಾರೆ. I am grateful to Sri K. Puttaswamy and I am very happy because he has brought out many of the points which I thought I could deal with and he knows very well the area and the problem such. ಈ ವರುಣಾ ನಾಲೆಯಿಂದ ಎಲ್ಲೆಲ್ಲಿಗೆ ನೀರು ಬರುತ್ತದೆ ಎಂಬುದನ್ನು ಅವರು ಕೇಳಿಬಿಟ್ಟರೆ ಆಗ ಸ್ವಲ್ಪ ಏನಾದರೂ ಎಲ್ಲೆಲ್ಲಿಗೆ ಶಂಕೆಗಳು ಇದ್ದರೆ ಅದು ಬದಲಾವಣೆಯಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀರಂಗಪಟ್ಟಣದಲ್ಲಿ ಇದರಿಂದ ೮೦೦೦ ಎಕರೆವರೆಗೆ ನೀರಾವರಿ ಯಾಗುತ್ತದೆ. ಮೈಸೂರಿನ ಕೆಲವು ತಾಲ್ಲೂಕುಗಳು ಬಹಳ ಎಕರೆಗಳು ಮಂಡ್ಯಕ್ಕೆ ಸೇರಿದಹಾಗೆ ಇವೆ. ಇದು ಅದರ ಅಡ್ಜಸೆಂಟ್‌ನಲ್ಲಿ ಬರುತ್ತದೆ. ಅಲ್ಲಿಯ ಜನರೂ ಕೂಡ ಒಬ್ಬರಿಗೊಬ್ಬರು ಸ್ನೇಹ, ಬಾಂಧವ್ಯ, ನೆಂಟಸ್ಥನ ಬೆಳೆಸಿಕೊಂಡಿದ್ದಾರೆ. ಅಲ್ಲಿ ೪೫ ಸಾವಿರ ಎಕರೆ ನೀರಾವರಿ ಆಗಬೇಕು ಎಂದು ಇದೆ. ಅದು ಸೆಮಿಡ್ರೈ ಪ್ಲೇಸ್ ಆಗಿದೆ. ೨-೩ ಸಾರಿ ಬೆಳೆ ಬರುವುದಿಲ್ಲ. ಸೆಮಿಡ್ರೈ ಎಂದರೆ ೧೮-೨೦ ಅಂಗುಲದವರೆಗೆ ಮಳೆ ಬರುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ಒಂದೊಂದು ಸಾರಿ ೮ ಅಂಗುಲ ಮಳೆಯೂ ಬರುವುದಿಲ್ಲ ಕುರಿಗಳು ಮೇಯುವುದಕ್ಕೆ ಹುಲ್ಲು ಸಿಕ್ಕುವುದಿಲ್ಲ. ಮೈಸೂರಿನ ಕೆಲವು ಭಾಗಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅವೆಲ್ಲಾ ಡ್ರೈ ಪ್ಲೇಸಸ್ ಆಗಿವೆ. ಚಾಮುಂಡೇಶ್ವರಿ ಬೆಟ್ಟದ ಮೇಲೆ ನಿಂತು ನೋಡಿದರೆ ಪೂರ್ವ ಭಾಗ ಹೇಗಿದೆ ಎಂಬುದು ಗೊತ್ತಾಗುತ್ತದೆ. ಆ ಮೇಲೆ ಟಿ. ನರಸೀಪುರದ ಒಂದು ಭಾಗ ಬರುತ್ತದೆ. ಅದು ವರುಣಾ ಹೋಬಳಿ ಎಂದು ಕಾಣುತ್ತದೆ. ಟಿ. ನರಸೀಪುರದ ತಾಲ್ಲೂಕಿನಲ್ಲಿ ಸುಮಾರು ೮ ಸಾವಿರ ಎಕರೆ, ನಂಜನಗೂಡು ತಾಲ್ಲೂಕಿನಲ್ಲಿ ಸುಮಾರು ೧೫ ಸಾವಿರ ಎಕರೆ, ಹಾಗೂ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಸುಮಾರು ೪೫ ಸಾವಿರ ಎಕರೆ ನೀರಾವರಿಗೆ ಬರುತ್ತದೆ. ಅಂದಮೇಲೆ ಒಟ್ಟು ಸುಮಾರು ೭೦-೮೦ ಸಾವಿರ ಎಕರೆಗಳಷ್ಟು ನೀರಾವರಿಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಗುಂಡ್ಲುಪೇಟೆ ತಾಲ್ಲೂಕಿಗೆ ?

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಶ್ರೀ ಕೋಣಂದೂರು ಲಿಂಗಪ್ಪನವರು ಬಹಳ ಚುರುಕು ಬುದ್ಧಿಯವರು, ಅವರು ಮೊದಲೇ ಸಾಹಿತಿಗಳು, ಕೆಲವು ಸಾರಿ ಅವರಿಗೆ ಬುದ್ಧಿ ಎಲ್ಲೋ ಹೊರಟು ಹೋಗುತ್ತದೆ, ಕೆಲವೊಮ್ಮೆ ಆ ಬುದ್ಧಿ ಈ ಭೂಮಿ ಬಿಟ್ಟು ಹೋಗಿ ಹೋಗಿಬಿಡುತ್ತದೆ ಗುಂಡ್ಲುಪೇಟೆ ಬಹಳ ಎತ್ತರದಲ್ಲಿರುವ ಪ್ರದೇಶ. ಆದ್ದರಿಂದ ಗುಂಡ್ಲುಪೇಟೆ ಪ್ರದೇಶಕ್ಕೆ ಈ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಡಾ ವಿಶ್ವೇಶ್ವರಯ್ಯನವರ ಕಾಲದಲ್ಲಿ ಕನ್ನಂಬಾಡಿ ಡ್ಯಾಂನ್ನು ಕಟ್ಟುವಾಗ ಅವರು ಒಂದು ಮಾತನ್ನು ಏನು ಹೇಳಿದ್ದಾರೆಂದರೆ, ಬಹುಶಃ ತಾವೆಲ್ಲ ಏನು ಹೆಚ್ಚಿಗೆ ಇದರ ಬಗ್ಗೆ ಅನುಮಾನ ಇಟ್ಟುಕೊಂಡಿದ್ದೀರೋ ಅದು ಬಿಟ್ಟು ಹೋಗುತ್ತದೆಂದು ನನ್ನ ಭಾವನೆ. ೧೯೧೧ರಿನೇ ಇಸವಿಯಲ್ಲಿ ಅವರ ರಿಪೋರ್ಟ್ ಆಗಿದೆ. ಅದು ತಮಗೆ ಗೊತ್ತಿರಬಹುದು. ಡಾ. ವಿಶ್ವೇಶ್ವರಯ್ಯನವರು ಬಹುಶಃ ಅವರ ಅರ್ಧ ಆಯಸ್ಸನ್ನು ಈ ಡ್ಯಾಂನ್ನು ಕಟ್ಟುವುದಕ್ಕೆ ಕಳೆದಿದ್ದಾರೆಂದು ನಾನು ಹೇಳಬಹುದು. ಆಗ ಬ್ರಿಟಿಷ್ ಸರ್ಕಾರ ಮದ್ರಾಸಿನಲ್ಲೂ ಇತ್ತು. ಆಗ ಈ ಡ್ಯಾಂನ್ನು ಕಟ್ಟಬೇಕಾದರೆ ಬಹುಶಃ ಇವರು ಪಟ್ಟಂಥ ಶ್ರಮವನ್ನೂ ಹಾಗೂ ಅಂತಹ ಕಷ್ಟವನ್ನು ಯಾರೂ, ಯಾವಾಗಲೂ, ಯಾವ ಸಂದರ್ಭದಲ್ಲಿಯೂ ಪಟ್ಟಿದ್ದಿಲ್ಲವೆಂದು ಹೇಳಬಹುದು. ಅಂದ ಮೇಲೆ ಅವರು ಇದಕ್ಕಾಗಿ ಭಗೀರಥ ಪ್ರಯತ್ನ ಮಾಡಿದ್ದಾರೆ. ನಾನು ಅವರ ಮಾತಿನಲ್ಲೇ ಹೇಳುತ್ತೇನೆ. ಅದು ಈ ರೀತಿ ಇದೆ.—

Sri M. Visveswaraiah's Report of 1911 :

"If sufficient water is available it is proposed also to construct a Canal on the right bank commencing at the reservoir dam, pass the important City of Mysore and ending near Kallahalli Anecut on the Kabini River."

ಇವತ್ತು ನಮ್ಮ ಪ್ರಯತ್ನ ಅದನ್ನು ಮಾಡಬೇಕೆಂದು ಹೊರಟಿದ್ದೇವೆ. ಕನ್ನಂಬಾಡಿ ಕಟ್ಟೆಯನ್ನು ಕನ್‌ಸೀವ್ ಮಾಡಿ ಕಟ್ಟಿದಂತಹ ಮಹಾನುಭಾವರು, ಅದರೊಳಗೆ ಅವರ ಆಶೆ ಹಾಗೂ ಸ್ವಪ್ನ ಏನಿತ್ತೊ ಅದು ಇವತ್ತು ಅಲ್ಲಿ ನೀರು ಯಥೇಚ್ಛವಾಗಿ ಸಿಕ್ಕಿದಾಗ ನೆರವೇರಿದಂತಾಗಿದೆ. ಕಲ್ಲಹಳ್ಳಿ ಆಣೆಕಟ್ಟಿನವರೆಗೂ ಇದರ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದರು. ಇವತ್ತು ವರುಣಾ ನಾಲೆಯನ್ನು ನಿರ್ಮಾಣ ಮಾಡುತ್ತಿರುವುದರಿಂದ ಅವರ ಆತ್ಮಕ್ಕೆ ತೃಪ್ತಿಪಡಿಸಿದಂತಾಗುತ್ತದೆ. ಅದನ್ನು ಮಾಡಿದರೆ ಸಾಕು ಆ ಮೇಲೆ ಯಾರೋ ಏನೋ ಒಂದು ರಿಪೋರ್ಟ್ ಕೊಟ್ಟಿದ್ದರು, ಅದೇನಾಯಿತೆಂದು ಈಗ ಯಾವುದೋ ಕಾಲದಲ್ಲಿದ್ದುದನ್ನು ಹೇಳಿದರೆ ಹೇಗೆ ?

SRI K. PUTTASWAMY.—There was one report in 1972 according to which left-side area has to be developed.

SRI D. DEVARAJ URS.—There was another agreement existing before 1924 agreement came in. We should not forget that point. The agreement between the Tamil Nadu the then Madras Government and the then Mysore Government came into existence revising the previous agreement of 1892. Again in the year 1924 there was another agreement governing the regulation of water between these two Governments under KRS. ಇದು ತಮಗೆಲ್ಲಾ ಗೊತ್ತಿದೆ. ೧೯೨೪ನೇ ಇಸವಿ ರಿಪೋರ್ಟಿಗೂ ಈಗ ೧೯೭೭ನೇ ಇಸವಿಯ ರಿಪೋರ್ಟಿಗೂ ಏನು ಹೊಂದಿಕೆ ? ಯಾವುದೇ ಕಾಲದಲ್ಲಿದ್ದಂತಹ ವಿಷಯವನ್ನು ಇಟ್ಟುಕೊಂಡು ಈಗ ಮಾತನಾಡಿದರೆ ನಾನು ಏನು ಹೇಳಲಿ ? ಈಗ ಈ ವಿಚಾರದಲ್ಲಿ ಅನೇಕ ಬದಲಾವಣೆಗಳಾಗಿವೆ.

ಶ್ರೀ ಡಿ. ಹಲಗೇಗೌಡ.—೧೯೨೪ ರಿಂದ ೧೯೭೭ರ ವರೆಗೆ ಒಂದಕ್ಕೆ ಮೂರರಷ್ಟು ಅಲ್ಲಿ ಆಣೆಕಟ್ಟು ಡೆವಲಪ್ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ತಲೆಯೊಳಗೆ ಇದರ ಬಗ್ಗೆ ಏನಾದರೂ ಚಳುವಳಿ ಮಾಡಬೇಕೆಂದು ಯೋಚನೆ ಬಂದು ಯಾರಾದರೂ ಅದರ ಬಗ್ಗೆ ಏನಾದರೂ ಹೇಳಿದರೆ ಆ ರೀತಿ ಮಾಡಲು ದಯಮಾಡಿ ಹೋಗಬೇಡಿ. ನಿಮಗೆ ಅದರ ಬಗ್ಗೆ ಸರಿಯಾದ ವಿಚಾರಗಳು ಪೂರ್ಣವಾಗಿ ಜೀರ್ಣವಾಗಿಲ್ಲ. ಅಥವಾ ಅವೆಲ್ಲವೂ ಇನ್ನೂ ನಿಮಗೆ ಫೀಡ್ ಮಾಡದೇ ಇರಬಹುದು. ಎಲ್ಲಾ ನೀರನ್ನು ನೀವೇ ಉಪಯೋಗಿಸಿಕೊಳ್ಳಬೇಕೆಂದರೆ ಈ ದೇಶದ ಜನರು ಬೇರೆ ಯಾರೂ ಜೀವನ ಮಾಡಬೇಡವೆ ? ಹೇಮಾವತಿ ನೀರನ್ನೆಲ್ಲಾ ನಿಮಗೇ ಕೊಟ್ಟುಬಿಡಿ ಎಂದು ಹೇಳಿದರೆ ಹೇಗಾಗುತ್ತದೆ ? ನೀವು ಪ್ರತಿಯೊಬ್ಬರೂ ಮನೆ ಮನೆಗೆ ಒಂದೊಂದು ಕಬ್ಬಿನ ಗಾಣ ಹಾಕಿಕೊಳ್ಳಬೇಕೆಂದು ಹೇಳಿದರೆ ಹೇಗೆ ? ಬಾಕಿಯುವರು ನಿಮ್ಮನ್ನು ನೋಡಿಕೊಂಡು ಸುಮ್ಮನೆ ಕೂಡಬೇಕೇ ?

ಶ್ರೀ ಜಿ. ಮಾದೇಗೌಡ.—ನೀವು ಎಮೋಷನ್ ಆಗಬೇಡಿ. ನಮಗೇ ಎಲ್ಲಾ ನೀರನ್ನು ಕೊಡಬೇಕೆಂದು ನಾವು ಹೇಳುವುದಿಲ್ಲ. ಅವರು ಆ ರೀತಿ ಹೇಳಿದ್ದಕ್ಕೆ ನೀವೇಕೆ ಎಮೋಷನ್ ಆಗುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ನಾನು ಎಮೋಷನ್ ಆಗುವುದಿಲ್ಲ. ಪ್ರತಿಯೊಂದನ್ನೂ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರ ನೀರಿನ ಹಂಚಿಕೆಯಾಗುವುದರಲ್ಲಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನಿಮ್ಮ ಪ್ರತಿಯೊಂದು ವಾದಕ್ಕೂ ನಾನು ಸಮಜಾಯಿಷಿ ಮಾಡಬಲ್ಲೆ, ಸಮಾಧಾನ ಮಾಡಬಲ್ಲೆ, ನೀರನ್ನೂ ಕೊಡಬಲ್ಲೆ. ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಇದರ ಬಲದಂಡೆ ನಾಲೆಗೆ ಡ್ಯಾಂ ಕಟ್ಟುವಾಗಲೇ ಸ್ಲೂಯಿಸ್‌ಗೇಟ್ ಕೂಡ ಇದಕ್ಕೆ ಹಾಕಿಟ್ಟಿದ್ದಾರೆ. ೫೦ ವರ್ಷಗಳಿಂದಲೂ ಅಲ್ಲಿಸವರಿಗೆ ಯಾವ ವಿಧವಾದ ಸಹಾಯವೂ ಇಲ್ಲದೆ ಕೇವಲ ಮೂಕ ಪ್ರಾಣಿಗಳ ಹಾಗೆ ಇದ್ದು ಇವತ್ತೂ ಸಹ ಅವರು ಅಲ್ಲಿ ಕಬ್ಬು, ಬತ್ತ

ಬೆಳೆಯುವುದು ಬೇಡವೆಂದರೂ ಕೊನೆಯಪಕ್ಷ ಜೋಳ, ರಾಗಿಯನ್ನಾದರೂ ಅಲ್ಲಿ ಬೆಳೆಯುವುದಕ್ಕೆ ಸಾಕಷ್ಟು ನೀರನ್ನು ಕೊಡೋಣವೆಂದು ಹೇಳಿದರೆ, ಅದಕ್ಕೆ ಬೇಡ ಎಂದು ಹೇಳುವುದಕ್ಕಾಗುತ್ತದೆಯೇ ? ನಮಗೆ ಕೇವಲ ನೀರು ಬಿಡುವ ಪ್ರಶ್ನೆಯಲ್ಲ ಮಂಡ್ಯದ ಕೆಲವು ಪ್ರದೇಶಗಳ ಅಚ್ಚುಕಟ್ಟುದಾರರಿಗೆ ವರುಣಾ ನಾಲೆಯಿಂದ ನೀರು ಕೊಡುವುದನ್ನು ಬಿಟ್ಟು ಬೇರೆ ಇನ್ನೂ ಎಲ್ಲಿಂದಲೋ ಕೊಡಬೇಕೆಂದು ಹೇಳಿದರೆ ಅಂತಹ ನೀರಿನಿಂದ ಇವರಿಗೆ ಏನೂ ಉಪಯೋಗವಾಗುವುದಿಲ್ಲ. ಎಷ್ಟೇ ನೀರನ್ನು ಬಿಡಲಿ, ನೀರು ನಿಮಗೆ ಬಂದೇ ಬರುತ್ತದೆ. ಇದು ಒಂದು ಟೆಕ್ನಿಕಲ್ ವಿಷಯ. ಇದಕ್ಕೆ ರೀಜನರೇಟೆಡ್ ವಾಟರ್ ಎಂದು ಹೇಳುತ್ತಾರೆ. ಅದನ್ನು ೧೯೪೫ನೇ ಇಸವಿಯಲ್ಲಿಯೇ ಕಟ್ಟಿದ್ದಾರೆ. ಅದನ್ನು ಈಚೆಗೆ ಸುರುವು ಮಾಡಿದ್ದಾರೆ. ಕಬಿನಿ ಪ್ರಾಜೆಕ್ಟನ್ನು ಕಟ್ಟುವ ವಿಷಯವನ್ನು ಯಾರೂ ಮೊದಲು ಯೋಚನೆ ಮಾಡಿರಲಿಲ್ಲ. ೧೯೨೪ರಲ್ಲಿ ಮದ್ರಾಸ್ ಸರ್ಕಾರಕ್ಕೂ ನಮಗೂ ಆದ ಅಗ್ರಿಮೆಂಟ್ ಪ್ರಕಾರ ಅಲ್ಲಿ ರಿಜರ್ವಾಯರ್ ಕಟ್ಟಬೇಕೆಂದು ಮಾಡಿತ್ತು. ಆದು ಎಷ್ಟೋ ವರ್ಷಗಳಿಂದ ಹಾಗೆಯೇ ಉಳಿದಿದೆ. ಇತ್ತೀಚೆಗೆ ಸ್ವಾತಂತ್ರ್ಯ ಬಂದ ಮೇಲೆ ೩೦ ವರ್ಷಗಳಾದರೂ ಅದನ್ನೂ ಪೂರೈಸಲಾಗಲಿಲ್ಲ. ಕಬಿನಿ ಪ್ರಾಜೆಕ್ಟ್ ರಿಪೋರ್ಟ್‌ನ್ನು ಓದಿ ನೋಡಿ. ೫ ಟಿ ಎಂ. ಸಿ.ಎಫ್.ಟಿ ನೀರನ್ನು ಬೇಸಿಗೆ ಕಾಲದಲ್ಲಿ ಕನ್ನಂಬಾಡಿಯಿಂದ ಅಥವಾ ಕೆ.ಆರ್.ಎಸ್. ನಿಂದ ಅಗ್ರಿಮೆಂಟ್ ಪ್ರಕಾರ ಕೊಡುತ್ತಿದ್ದೆವು. He was actually forced to sign that agreement He had no option then. ೫ ಟಿ ಎಂ. ಸಿ. ನೀರನ್ನು ಕಬಿನಿ ಪ್ರಾಜೆಕ್ಟಿನಿಂದ ಬಿಟ್ಟುಕೊಟ್ಟು ಅದನ್ನು ವರುಣಾ ನಾಲೆಗೆ ಕೊಡೋಣವೆಂದು ಪ್ರಾಜೆಕ್ಟ್ ಮಾಡಿದರು. ಅದರಿಂದ ಅಲ್ಲಿ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ. ಅಲ್ಲಿ ಸುಮಾರು ೧೨ ಲಕ್ಷ ಜನರಿದ್ದಾರೆ.

ಶ್ರೀ ಡಿ. ಹಲಗೇಗೌಡ.—ಕಬಿನಿ ಪ್ರಾಜೆಕ್ಟಿನಿಂದ ನೀರನ್ನು ಆ ರೀತಿ ಬಿಟ್ಟು ಕೊಟ್ಟರೆ ಪರವಾಯಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ನಿಲ್ಲಿಸಿ ಇಲ್ಲಿ ನಿಮಗೆ ಬಿಡಬೇಕೆಂದು ನೀವು ಹೇಳುವುದು ಸರಿಯಲ್ಲ. ನಂಜನಗೂಡು, ಟಿ. ನರಸೀಪುರ, ಯಳಂದೂರು ಮುಂತಾದ ಪ್ರದೇಶಗಳಿಗೆ ಇದರಿಂದ ಅನುಕೂಲವಾಗುತ್ತದೆ

ಶ್ರೀ ಜಿ. ಮಾದೇಗೌಡ.—ಅದು ಸರಿಯಲ್ಲ. ಹಾಗಾದರೆ ಇದುವರೆಗೂ ಏಕೆ ಸುಮ್ಮನಿದ್ದೀರಿ ? ೫೦ ವರ್ಷಗಳಿಂದ ಇಲ್ಲದಿರತಕ್ಕಂಥಾದ್ದು ಈಗ ಏಕೆ ಬಂತು ?

ಶ್ರೀ ಡಿ. ದೇವರಾಜ ಅರಸ್.—೫೦ ವರ್ಷಗಳ ಹಿಂದೆ ಕಬಿನಿ ಜಲಾಶಯ ಕಟ್ಟಿರಲಿಲ್ಲ. ಈಗ ಅದು ಬಂದಿದೆ. Please do not get prejudiced. I would make an appeal to you.

ಶ್ರೀ ಕೆ. ಪುಟ್ಟಸ್ವಾಮಿ.—ಕಬಿನಿ ಜಲಾಶಯಕ್ಕೆ ಹೋಗುವ ದಾರಿಯಲ್ಲಿ ಒಂದು ದೊಡ್ಡ ಬೋರ್ಡ್ ಇದೆ. ಅಲ್ಲಿ ೨೪ ಸಾವಿರ ಎಕರೆ ಕೃಷ್ಣರಾಜಸಾಗರದಿಂದ ನೀರಾವರಿ ಯಾಗುತ್ತದೆ ಎಂದು ಇದೆ. ಆದು ಕಬಿನಿ ಲೆಕ್ಕಕ್ಕೆ ಇಟ್ಟಿದ್ದಾರೆ ಎಂದು ಒಂದು ದೊಡ್ಡ ಬೋರ್ಡ್ ಹಾಕಿದ್ದಾರೆ. ಈಗ ಅಲ್ಲಿ ಜಮೀನನ್ನು ಅಬಾದು ಮಾಡಿದ ಮೇಲೆ, ಅಲ್ಲಿನ ೮೦ ಸಾವಿರ ಎಕರೆಯನ್ನು ಡ್ರೈ ಲ್ಯಾಂಡ್ ಆಗಿ ಉಪಯೋಗಿಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಇದು ನಿಮಗೆ ನೀರಿನ ಹಕ್ಕಿಲ್ಲ, ಎಷ್ಟು ನೀರು ಇದೆಯೋ ಅದನ್ನು ಉಪಯೋಗ ಮಾಡಬೇಕು ಎನ್ನುವ ಪ್ರಶ್ನೆಯಿಲ್ಲ. ಈಗ ಇರತಕ್ಕ ನೀರನ್ನು ಸೇವ್ ಮಾಡಿ ಹೆಚ್ಚು ಹೆಚ್ಚು ನೀರನ್ನು ಬೇರೆಯವರಿಗೂ ಕೊಟ್ಟಿದ್ದಾರೆ. ಕೆ.ಆರ್.ಎಸ್. ಕೆಳಗಡೆ ಕಬಿನಿ ನೀರನ್ನು ಉಪಯೋಗಮಾಡುವುದಕ್ಕೆ ಆಗುತ್ತಾ ಇಲ್ಲದೆ ಇರುವುದರಿಂದ ಸೇವ್ ಮಾಡಿದ್ದನ್ನು ನಿಮಗೆ ಕೊಡುತ್ತಿದ್ದಾರೆ. ಅದು ಒಂದು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಇದು ಸಾಧ್ಯವಿರಲಿ ಇಲ್ಲದಿರಲಿ ಕೊಡುತ್ತಾ ಬಂದಿದ್ದಾರೆ ಕಬಿನಿ ಜಲಾಶಯ, ಹಾರಂಗಿ ಜಲಾಶಯ, ಹೇಮಾವತಿ ಜಲಾಶಯ ಇಲ್ಲಿಯವರೆಗೆ ಸಾಧ್ಯವಾಗಿರಲಿಲ್ಲ ಆದುದರಿಂದ ಇದು ಸ್ವಲ್ಪ ದಿವಸ ಅನುಕೂಲವಾಗಿತ್ತು. ಈಗ ಇರತಕ್ಕಂಥ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ ಹೇಮಾವತಿ, ಹಾರಂಗಿ ಯೋಜನೆಯ ಕೆಳಗಡೆ ನಾಲ್ಕಾರು ಲಕ್ಷ ಎಕರೆ ಜಮೀನುಗಳಿಗೆ ನೀರು ಕೊಡುವುದಕ್ಕೆ ಆಗದೆ ಇದ್ದಾಗ ಸಾಲಾ ಗ್ರೈವ್‌ನಿಂದ ಕೊಡಲು ಮತ್ತೊಂದು ವ್ಯವಸ್ಥೆ ಏನು ಆಗ ಬೇಕು ಎಂದರೆ ಟನಲ್ ವ್ಯವಸ್ಥೆ ಆಗ ಬೇಕು. ಅದನ್ನು ಪೂರೈಸಿದನಂತರ ಟೆಕ್ನಿಕಲ್ ಅಡ್ವೈಸ್ ಪ್ರಕಾರ ರೀಜನರೇಟೆಡ್ ವಾಟರ್ ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇದು ಬೇರೆಯವರಿಗೆ ಅರ್ಥವಾಗುವುದಿಲ್ಲ. ಸಾವಧಾನವಾಗಿ ಇದು ಟೆಕ್ನಿಕಲ್ ಇಂಜಿನಿಯರ್ಸ್‌ಗೆ ಮಾತ್ರ ಗೊತ್ತಾಗುತ್ತದೆ. ನಮ್ಮ ಕೃಷ್ಣರಾಜಸಾಗರದಲ್ಲಿ ೫ ಲಕ್ಷ ಎಕರೆ ಕಟ್ಟು

ಮತ್ತು ಬತ್ತ ಬೆಳೆಯುವುದಕ್ಕೆ ನೀರನ್ನು ಬಿಟ್ಟಿದ್ದಾರೆ. ಪೈರು ಹಾಕಿಸಿಕೊಳ್ಳುವುದಕ್ಕೆ ನೀರನ್ನು ಬಿಟ್ಟರೆ ಅದು ಭೂಮಿಗೆ ಇಳಿಯುತ್ತದೆ ಅದನ್ನೇ ರೀ ಜನರೇಟೆಡ್ ವಾಟರ್ ಎಂದು ಹೇಳುವುದು. ಅದು ಭೂಮಿ ಯಲ್ಲಿ ಪರ್‌ಕ್ಯೂಲೇಟ್ ಆಗಿ ಹೋಗುವುದು ಉಂಟು. ರೀ ಜನರೇಟೆಡ್ ವಾಟರ್ ಕನ್ನಾಂಬಾಡಿಯಲ್ಲಿ ಎಷ್ಟು ಬರುತ್ತದೆ ಎಂದರೆ ೧೦ ಟಿಎಂಸಿ ವಾಟರ್ ಬರಬಹುದು ಎಂದು ಇಟ್ಟುಕೊಳ್ಳೋಣ. ಯಾವುದೇ ನೀರಾವರಿ ಬಗ್ಗೆ ಅನುಭವ ಇರುವ ಇಂಜಿನೀಯರ್ ಇದರ ಬಗ್ಗೆ ಹೇಳುತ್ತಾರೆ. ಇದು ಟೆಕ್ನಿಕಲ್ ಅಡ್ವೈಸ್ ಮೇಲೆ ಹೋಗುತ್ತದೆ. ಅದನ್ನು ಬಿಟ್ಟು ಅವರು ಹೀಗೆ ಹೇಳುತ್ತಾರೆ. ಇವರು ಹಾಗೆ ಹೇಳುತ್ತಾರೆ ಎಂದರೆ ಅದು ಪ್ರಯೋಜನವಾಗುವುದಿಲ್ಲ. ಹಾಗೆ ಹೇಳುತ್ತಾ ಹೋದರೆ ಅದನ್ನು ವಿತಂಡ ವಾದಕ್ಕೆ ಹೇಳಬೇಕಾಗುತ್ತದೆ. ಶ್ರೀಮಾನ್ ನಂಜೇಗೌಡರು ಸ್ವಲ್ಪ ಸ್ಟಡಿ ಮಾಡಿದ್ದಾರೆ. ೨೦೦ ಟಿಎಂಸಿ ವಾಟರ್ ಬರತಕ್ಕಂಥಾದ್ದು ಏನು ಇದೆ ಅದರಲ್ಲಿ ೫೦ ಪರ್ಸೆಂಟ್ ಡಿಪೆಂಡಬಲ್ ವಾಟರ್ ಬರತಕ್ಕಂಥಾದ್ದು ಇದೆ. ಇದನ್ನು ಇಲ್ಲ ಎಂದು ಏನು ವಾದಮಾಡುತ್ತಾರೆ ಅದನ್ನು ನಾವು ಒಪ್ಪುವುದಿಲ್ಲ. ಸ್ಪಷ್ಟವಾಗಿ ಇದನ್ನು ಅರ್ಥಮಾಡಿಕೊಳ್ಳೋಣ. ಬರೀ ವಾದದಲ್ಲಿ ಏನು ತೀರ್ಮಾನವಾಗುವುದಿಲ್ಲ. ಟೇಲ್ ಎಂಡರ್ಸ್‌ಗೆ ನೀರು ಇಲ್ಲವೆಂದು ಹೇಳುವುದನ್ನು ಮತ್ತು ಅವರಿಗೆ ತೊಂದರೆಯಾಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರಣವೇನೆಂಬುದನ್ನು ನಾನಾಗಲಿ ಅವರಾಗಲಿ ಹೇಳುವುದಕ್ಕೆ ಬರುವುದಿಲ್ಲ. ಇಂಜಿನೀಯರ್ಸ್ ಹೇಳಬೇಕು. ಏನೇ ಆಗಲಿ ತೊಂದರೆಯಾಗಿದೆ ಎನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನೀರು ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳೋಣ ? ಮೇಲುಗಡೆ ನೀರು ಇದೆಯೋ ಎಂಬುದನ್ನು ಕೂಡ ಇಂಜಿನೀಯರ್ಸ್ ಹೇಳಬೇಕು ಕೆಳಗಡೆ ನೀರು ಬರುತ್ತಾ ಇಲ್ಲವೆಂದು ಇಟ್ಟುಕೊಳ್ಳೋಣ. ಈ ಪಾಯಿಂಟ್‌ನ್ನು ನಾವು ಕೂಡ ಇಂಜಿನೀಯರ್ಸ್‌ನ್ನು ಕೇಳಿ ತಿಳಿದುಕೊಳ್ಳಬೇಕು. ತಾವುಗಳು ಕೂಡ ಅವರನ್ನೇ ಕೇಳಿ ತಿಳಿದುಕೊಳ್ಳಬೇಕಾಗುತ್ತದೆ. ಕೆಲವರು ಹೇಳುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ನಾಲಾ ಕೆಗೆ ಲೈನಿಂಗ್ ಮಾಡುವುದಕ್ಕೆ ಹೊರಟಿದ್ದಾರೆಂದು ಹೇಳುತ್ತಿದ್ದಾರೆ. ನಾನು ತಮ್ಮಲ್ಲಿ ಕೇಳಿಕೊಳ್ಳು ವುದೇನೆಂದರೆ ದಯಮಾಡಿ ಚಾನಲ್ ಏನು ಲೈನ್ ಇದೆ ಅದನ್ನು ಲೈನಿಂಗ್ ಮಾಡಿದರೆ ಎಷ್ಟೋ ನೀರನ್ನು ನಾವು ಸೇವ್ ಮಾಡಬಹುದು. ಇವನ್ನು ಸಾಮಾನ್ಯ ಜನರು ಅರ್ಥಮಾಡಿಕೊಳ್ಳಬೇಕಾದರೆ ಕಷ್ಟವಾಗು ತ್ತದೆ ಕೆಲವು ರಾಜಕಾರಿಣಿಗಳು ಇದನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ಇದನ್ನು ತಾವು ಪ್ರತ್ಯಕ್ಷವಾಗಿ ನೋಡಬೇಕೆಂದರೆ ತುಂಗಭದ್ರಾ ಕ್ಯಾನಲ್‌ಗೆ ಕರೆದುಕೊಂಡು ಹೋಗುತ್ತೇನೆ. ದಯಮಾಡಿ ಬನ್ನಿ ಲೈನಿಂಗ್ ಏತಕ್ಕೆ ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ. ನಮ್ಮ ದಕ್ಷಿಣ ಭಾಗದ ಭೂಮಿ ಕಲ್ಲು ಮತ್ತು ಜಾಯಿಂಟ್ಸ್ ಜಾಸ್ತಿ ಇರುವುದರಿಂದ ೨೦-೩೦ ಅಡಿ ಕೆಳಗೆ ಕ್ಯಾನಲ್ ಹೋಗಿದೆ. ಮಿನಿಮಮ್ ೨೫ ಪರ್ಸೆಂಟ್ ಆಫ್ ದಿ ಫ್ಲೋ ಪರ್‌ಕೋಲೇಷನ್ ಆಗಿ ಕೆಳಗಡೆ ಹೋಗುತ್ತದೆ. ಇದರಿಂದ ಕನ್ನಾಂಬಾಡಿಗೆ ಬೀಗ ಹಾಕಿಕೊಂಡು ಕೂತರು ನಿಮ್ಮ ಟೇಲ್ ಎಂಡರ್ಸ್‌ಗೆ ನೀರು ಸಿಕ್ಕುವುದಿಲ್ಲ. ಈವಾಗ ಕನ್ನಂಬಾಡಿ ಯಲ್ಲಿ ಹೆಚ್ಚಿಗೆ ನೀರು ಇದ್ದರೂ ಕೂಡ ಹಾಗೂ ಹೇಮಾವತಿಯಿಂದ ಹೆಚ್ಚಿಗೆ ನೀರನ್ನು ಬಿಟ್ಟರೆ ಟೇಲ್ ಎಂಡ್‌ನಲ್ಲಿರತಕ್ಕಂಥವರು ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ. I want the Hon. Member kindly to understand and convey this to people.

4-00 P.M.

ಶ್ರೀ ಜಿ. ಮಾದೇಗೌಡ.—ಹಾಗಾದರೆ ೫೦ ವರ್ಷದಿಂದಲೂ ಸರ್‌ಪ್ಲಸ್ ವಾಟರ್ ಇದೆ ಎಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ದಯವಿಟ್ಟು ನಾನು ಹೇಳುವುದು ಮಾನ್ಯ ಸದಸ್ಯರು ಕೇಳಬೇಕು, ನಾವು ಇಲ್ಲಿಯವರೆಗೆ ೫೦ ಟಿ.ಎಂ.ಸಿ.ಎಫ್.ಟಿ.ಗಿಂತ ಹೆಚ್ಚಿನ ನೀರನ್ನು ತೆಗೆದೇ ಇಲ್ಲಾ. ಅದಕ್ಕಿಂತ ಹೆಚ್ಚಿಗೆ ಯಾವ ವರ್ಷದಲ್ಲೂ ಮಾಡಿಲ್ಲ. ನಾವು ಎರಡು ಬೆಳೆಯಲ್ಲಿ ಮೂರು ಬೆಳೆಗೆ ನೀರನ್ನು ಕೊಟ್ಟಿದ್ದರೂ ೫೦ ಟಿ.ಎಂ.ಸಿ.ಎಫ್‌ಟಿ. ಕ್ಕಿಂತ ಜಾಸ್ತಿ ಖರ್ಚು ಮಾಡಿಲ್ಲ. ಇಷ್ಟಾದರೂ ಟೇಲ್ ಎಂಡ್‌ನಲ್ಲಿರತಕ್ಕಂಥವರಿಗೆ ನೀರನ್ನು ಕೊಟ್ಟಿಲ್ಲ. ಆದುದರಿಂದ ತಾವು ಕೋಪ ಮಾಡಿಕೊಳ್ಳದೇ ನಾವು ಹೇಳುವುದನ್ನು ಸ್ವಲ್ಪ ದಯವಿಟ್ಟು ಕೇಳಬೇಕು. ವಿಷಯ ಏನೆಂಬುದನ್ನು ಅರ್ಥ ಮಾಡಿಕೊಳ್ಳದೇ ಮಾತನಾಡಬಾರದು. ೫೦ ಅಲ್ಲ ೬೦ ಟಿ.ಎಂ.ಸಿ.ಎಫ್.ಟಿ. ವಾಟರ್‌ನ್ನು ಬಿಟ್ಟರೂ ಕೂಡ, who is that Engineer who is going to give water to the tail-enders ? The real bottleneck is your tunnel as well as the canal. ಜಮೀನು ಹತ್ತಿರವಿದ್ದವರಿಗೆ ನೀರು ಸರಿಯಾಗಿ

ಸಿಗಂತ್ತದೆ ಕೊನೆಯಲ್ಲಿ ಇದ್ದವರಿಗೆ ಅದು ಸರಿಯಾಗಿ ಸಿಗುತ್ತಿಲ್ಲ. ಅದಕ್ಕೆ ಇದರ ಬಗ್ಗೆ ಹೇಗೆ ಮಾಡಬೇಕು ಎಷ್ಟು ವ ಬಗ್ಗೆ ಯೋಚನೆ ಮಾಡಲು ಟೆಕ್ನೀಶಿಯನ್ಸ್ ಇದ್ದಾರೆ ಅವರನ್ನು ಕೇಳಿ ಮಾಡೋಣ. ಹಾಗಿಲ್ಲದೆ ಯಾರು ಯಾರೋ ಏನೇನೋ ಮಾತನಾಡುತ್ತಾರೆ. ಎಂದು ನಾವು ಅದು ಸರಿಯಲ್ಲ, ಇದು ಸರಿಯಿಲ್ಲವೆಂದು ಹೇಳುವುದು ಸೂಕ್ತವಲ್ಲ. ಆದುದರಿಂದ ನಮ್ಮ ಕಷ್ಟವೇನಿದೆ ಎಂಬುದನ್ನು ತಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ೧೯೬೭ನೇ ಇಸವಿ ಜನವರಿಯಲ್ಲಿ ಒಂದು ಫೌಂಡೇಷನ್ ಹಾಕಿದರು ಆಮೇಲೆ ೧೯೭೦ನೇ ಇಸವಿಯಲ್ಲಿ ಪುನ: ಕೆಲಸ ಷುರುಮಾಡಿದರು. ಮಧ್ಯೆ ಮಧ್ಯೆ ಶುರುವಾಗಿ ಅದು ಹಾಗೇನೆ ನಿಲ್ಲಿಸಿ ಬಿಟ್ಟಿದ್ದಾರೆ. ಏತಕ್ಕೆ ನಿಲ್ಲಿಸಿದರು, ಏನು ಮಾಡಿದರು ಎಂದು ಕೇಳಿದರೆ ಅದರ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ಅವರು ಯಾವುದೇ ಕಾರಣದಿಂದ ನಿಲ್ಲಿಸಿರಲಿ ಒಟ್ಟಿನಲ್ಲಿ ಅಲ್ಲಿ ಕೆಲಸ ನಿಲ್ಲಿಸಿರುವುದು ನಿಜ. ಅಲ್ಲಿ ಕೆಲಸವನ್ನು ನಿಲ್ಲಿಸಿದ್ದು ತಪ್ಪು ಎಂದು ಇಷ್ಟು ಮಾತ್ರ ಹೇಳಬಲ್ಲೆ ಬಾಕಿ ವಿಚಾರಗಳು ನನಗೆ ಬೇಡ.

ಶ್ರೀ ಡಿ. ಹಲಗೇಗೌಡ.—ಈ ಕೆಲಸವನ್ನು ಮುಂಚೇ ಮಾಡಿದ್ದರೆ ಟೇಲ್ ಎಂಡ್‌ನಲ್ಲಿರತಕ್ಕಂಥವರಿಗೆ ನೀರನ್ನು ಒದಗಿಸಲು ಆಗುತ್ತಿತ್ತು ಅಲ್ಲವೇ ?

SRI D. DEVARAJ URS.—This is a matter over which I go by my Engineer's advice and not by yours and I think others will agree with me. ಆಮೇಲೆ ಇನ್ನೊಂದು ವಿಚಾರವನ್ನು ಶ್ರೀಮಾನ್ ನಂಜೇಗೌಡರವರು ಹೇಳಿದರು. ಇಷ್ಟು ವರ್ಷಗಳಾದರೂ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಏನು ತೀರ್ಮಾನವಾಯಿತು. ಈಚೆಗೆ ಆದ ತೀರ್ಮಾನವೇನು ಎಂಬುದು ಗೊತ್ತಾಗಲಿಲ್ಲ, ಚೀಫ್ ಸೆಕ್ರಟರಿಯವರು ಹೀಗೆ ಹೇಳಿದ್ದಾರೆ. ಹಾಗೆ ಸಲಹೆ ಮಾಡಿದಾರೆ ಎನ್ನುವ ಮಾತು ಕೇಳಿ ಬರುತ್ತಿದೆ ಎಂದು ಹೇಳಿದರು. ಆದರೆ ನಾನು ಅವರಿಗೆ ನೆಮ್ಮದಿಯ ಮಾತನ್ನು ಹೇಳುವುದೇನೆಂದರೆ ಯಾರು ಏನೇ ಹೇಳಲಿ ನಾನು ಹೇಳುವ ಮಾತನ್ನು ತಾವು ಕಿವಿಗೊಟ್ಟು ಕೇಳಿ, ಹಿಂದೆ ನಮ್ಮದು ಒರಿಜನಲ್ ಪ್ಲಾನ್ ಎಸ್ಟಿಮೇಟ್ ಯಾವ ರೀತಿ ಇತ್ತೋ ಅದೇ ರೀತಿ ಹಂಚಿಕೆಯಾಗಿದೆ. Modification does not mean curtailing the width of the canal or the acqueduct or the channel or the length. ಅವೆಲ್ಲಾ ಹಾಗೇಯೇ ಇಟ್ಟುಕೊಂಡಿದ್ದೇವೆ. ಮತ್ತೆ ಇನ್ನೊಂದು ಏನೆಂದರೆ ನೀರಿನ ಪ್ರಾಮುಖ್ಯತೆ ಎಷ್ಟು ಎಂಬುದನ್ನು ಅರಿತು ಹಾಗೆ ಮಾಡುತ್ತೇನೆ. ಆದುದರಿಂದ ಈ ವಿಚಾರದಲ್ಲಿ ಮಾತ್ರ ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಅದನ್ನು ತಾವು ಪಾಲಿಸಬೇಕು. ಇದನ್ನು ಯಾವುದೇ ರಾಜಕೀಯದಿಂದ ಅಥವಾ ಸುಮ್ಮನೇ ಅನುಮಾನ ಬಂದಾಗ ಹೇಳಿದರೆ ಬಹಳ ಕಷ್ಟ. ಈ ತರಹದ ಅನುಮಾನಪಟ್ಟುಕೊಂಡು ಮಾತನಾಡಿ ಮಾತನಾಡಿಯೇ ನಮ್ಮ ರಾಜ್ಯದಲ್ಲಿ ಇರಿಗೇಷನ್‌ನಲ್ಲಿ ಹಿಂದೆ ಬಿದ್ದು ಹೋಗಿರುವುದು. ಆದುದರಿಂದ ನಾವು ಇರಿಗೇಷನ್‌ಗೆ ಎಲ್ಲೆಲ್ಲಿ ಸಾಧ್ಯತೆ ಇದೆಯೋ ಅಲ್ಲೆಲ್ಲಾ ಸರಿಯಾಗಿ ಉಪಯೋಗಿಸಿಕೊಂಡು ಬಂದಿದ್ದರೆ ನಾವು ಇನ್ನೂ ಹೆಚ್ಚಿನ ಲಾಭವನ್ನು ಪಡೆಯಬಹುದಾಗಿತ್ತು. ಇವತ್ತು ಕೃಷ್ಣಾ ಟ್ರಿಬ್ಯೂನಲ್‌ನಲ್ಲಿ ಒಂದು ಅವಾರ್ಡ್‌ನ್ನು ಕೊಟ್ಟಿದ್ದಾರೆ. ಅದು ಗೆಜೆಟ್‌ನಲ್ಲಿ ಬಂತು. ಅದು ಈಗ ಕಾನೂನು ಆಗಿದೆ. ಮತ್ತೆ ಈಗ ನಾಗಾರ್ಜುನಸಾಗರ ಕಟ್ಟೆ ಆಯಿತು, ಆದುದರಿಂದ ಲಕ್ಷಾಂತರ ಎಕರೆಗೆ ನೀರಾವರಿಗೆ ಅನುಕೂಲವಾಯಿತು. How do you say you want only this much water ? You have to fulfil their obligations. You cannot make them dry. It is a question between two States where all of us every one of us should remember that you must go on with the expansion of the irrigation scheme because you have still develop a lot.

SRI H. D. DEVE GOWDA.—I do not want to elaborate further. If there is final decision so far as allocation of Cauvery water is concerned, then we will have to express our views. If there is no finality then I will have to keep quiet.

SRI D. DEVARAJ URS.—There is no final decision, I repeat. I stand by that statement. Somebody might have expressed some doubts or something. That is why I am trying to make it categorical.

I remember I said the same thing on the floor of this House immediately after we came to an arrangement or understanding. Even now the position is the same.

SRI H D. DEVE GOWDA.—When the Hon. Chief Minister says there is no final decision, let us not elaborate on it further. We do n t want to commit them.

ಶ್ರೀ ಜಿ. ಮಾದೇಗೌಡ.—ಕೇರಳ ಮತ್ತು ತಮಿಳು ನಾಡಿನವರು ಕಾವೇರಿ ಬೇಸಿನ್‌ನಿಂದ ಕರ್ನಾಟಕದವರು ಹೆಚ್ಚಿಗೆ ನೀರನ್ನು ಪಡದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾರೆಯೇ? You have utilised the entire water in the Cauvery basin...............

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮಾದೇಗೌಡರವರಿಗೆ ನಾನು ಹೇಳಿದ್ದು ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಬೇಕಾದರೆ ನೀವು ಆಮೇಲೆ ಬನ್ನಿ ನಾನು ಹೇಳುತ್ತೇನೆ. We have not utilised the entire water, ಕಾವೇರಿ ವಾಟರ್‌ನ್ನು ಸಂಪೂರ್ಣವಾಗಿ ನಾವು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತದೆಯೇ ಎಂದರೆ ಆಗುವುದಿಲ್ಲ. Have we utilised the entire water of Cauvery? I would like to know from Mr. Deve Gowda. about 117 TMCFT of water we have utilised so far.

ಶ್ರೀ ಜಿ. ಮಾದೇಗೌಡ.—ಸ್ವಾಮಿ ಕಾವೇರಿ ನದಿ ನೀರಿನ ಪಾತ್ರವೇನಿದೆ ಅದರಲ್ಲಿರತಕ್ಕಂಥ ಸಂಪೂರ್ಣ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ಆಸೆ ನಮಗಿದೆಯೆಂದು ತಾವು ಒಪ್ಪಿಕೊಳ್ಳುತ್ತೀರಾ? ಹಾಗಿದ್ದರೆ ಕರ್ನಾಟಕ ರಾಜ್ಯ ಒಂದಕ್ಕೆ ಕಾವೇರಿ ಬೇಸಿನ್ ಮೇಲೆ ಸಂಪೂರ್ಣ ಹಕ್ಕು ಇದೆಯಲ್ಲವೇ ಎನ್ನತಕ್ಕಂಥದ್ದೇ ನಮ್ಮ ಪ್ರಶ್ನೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಈಗ ನಾನು ತಯಾರಿಲ್ಲ. ಹಾಗೇ ನಿಮ್ಮ ಪ್ರಶ್ನೆಯನ್ನು ಉಳಿಸಿಕೊಳ್ಳಿ. ಇನ್ನು ಮಾನ್ಯ ನಂಜೇಗೌಡರು ಒಂದು ಅನುಮಾನವನ್ನು ವ್ಯಕ್ತಪಡಿಸಿದರು. ಆ ಅನುಮಾನ ಅವರಿಗಿರುವುದು ಬೇಡ. ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ನೀರನ್ನು ಒದಗಿಸಬೇಕೆನ್ನುವ ಬಗ್ಗೆ ಅಂತಿಮ ತೀರ್ಮಾನದ ಬಗ್ಗೆ ಮಾತನಾಡಿದರು ಅದನ್ನೆಲ್ಲಾ ಈಗ ವಾದ ಮಾಡುತ್ತಾ ಹೋದರೆ, ಇನ್ನು ಮಾತಿಗೆ ಮಾತು ಬೆಳೆಯುತ್ತದೆ. ಮಾನ್ಯ ದೇವೇಗೌಡರು ಮಾತನಾಡುತ್ತಾ, ತಾತ್ವಿಕವಾಗಿ ಒಂದು ಮಾತನ್ನು ಹೇಳಿದರು. ನದಿಯ ಎರಡು ಕಡೆಯ ಜನರಿಗೆ ಅವರವರ ಹಕ್ಕಿನಂತೆ ನೀರು ಹಂಚಿಕೆ ಮಾಡುವುದು ಒಳ್ಳೆಯದೆಂದು ಅವರು ಹೇಳಿದರು. This is the fundamental principle of distribution or utilisation of water on any river in the world. It is an accepted form and principle. ನಮ್ಮ ನಿಮ್ಮ ನಡುವೆ ಒಂದು ನದಿ ಇದ್ದರೆ, ನಿಮಗೂ ನೀರು ಬಿಡಬೇಕಾಗುತ್ತದೆ. ನಮಗೂ ನೀರು ಬಿಡಬೇಕಾಗುತ್ತದೆ. ನಾವು ಒಂದು ಸಾವಿರ ಎಕರೆಗೆ ನೀರು ಉಪಯೋಗಿಸಿಕೊಂಡರೆ, ನಿಮಗೂ ಒಂದು ಸಾವಿರ ಎಕರೆಗಾಗುವಷ್ಟು ನೀರನ್ನು ಬಿಡಬೇಕಾಗುತ್ತದೆ. Based on that, what is the position now? You want to know that. ಈಗ ಕಾವೇರಿ ನದಿಗೆ ಸಂಬಂಧಪಟ್ಟ ಹಾಗೆ ಎಡ ಮತ್ತು ಬಲ ಎಂಬ ಎರಡು ದಂಡೆಗಳಿವೆ. ಬಲ ದಂಡೆ ಅಂದರೆ...............

ಶ್ರೀ ಎಚ್. ಡಿ. ದೇವೇಗೌಡ.—ಅಕೆಡಮಿಕ್ ಇಂಟರೆಸ್ಟಿನಿಂದ ಬಲ ಭಾಗದಲ್ಲಿ ಸ್ವಲ್ಪ ಮತ್ತು ಎಡಭಾಗದಲ್ಲಿ ಸ್ವಲ್ಪ ಮಾಡಬೇಕೆಂದು ಯಾವ ಇಂಜಿನಿಯರ್ ಹೇಳಿದರು? ಅವಶ್ಯವಿರುವ ಕಡೆ ನೀರನ್ನು ಕೊಡುವ ವ್ಯವಸ್ಥೆ ಮಾಡುವುದೆಂದು ಹೇಳಿರಿ.

SRI D. DEVARAJ URS.—I am prepared to quote the International Law. ಅವಶ್ಯಕತೆ ನಿಮಗಿದ್ದರೆ ನಮಗೂ ಇಲ್ಲವೆ? ಎಲ್ಲರಿಗೂ ಅವಶ್ಯಕತೆ ಇದ್ದೇ ಇರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅಂತರರಾಷ್ಟ್ರೀಯ ನ್ಯಾಯ ಯಾವುದೆಂಬುದನ್ನು ದಯವಿಟ್ಟು ನಾಳೆ ಪ್ರಶ್ನೋತ್ತರ ವೇಳೆ ಯಾದ ಮೇಲೆ ತಿಳಿಸುವಿರಾ?

ಶ್ರೀ ಡಿ. ದೇವರಾಜ ಅರಸ್.—ನಾಳೆ ತಿಳಿಸುತ್ತೇನೆ. ಆಗಲೇ ಒಪ್ಪಿಕೊಳ್ಳಿ.

SRI K. PUTTASWAMY.—There is an over-riding Clauses. Unless the terrain is permitted..................

ಶ್ರೀ ಡಿ. ದೇವರಾಜ ಅರಸ್.—ಈಗಿರುವ ಲೆಕ್ಕದ ಪ್ರಕಾರ ಕಾವೇರಿ ಬಲದಂಡೆಯಲ್ಲಿ ೯೭ ಸಾವಿರ ಎಕರೆಯಿದ್ದರೆ, ಎಡ ದಂಡೆಯಲ್ಲಿ ಒಟ್ಟು ಎರಡು ಲಕ್ಷದ ನಲವತ್ತು ಸಾವಿರ ಎಕರೆಯಿದೆ.

SRI H. D. DEVE GOWDA.—In that case, left bank side can be straight-away stopped.

ಶ್ರೀ ಡಿ. ದೇವರಾಜ ಅರಸ್.—ಈ ಅಂಕಿ ಅಂಶಗಳನ್ನೇನೂ ನಾನು ಬರೆದುಕೊಂಡು ಬಂದಿಲ್ಲ. ಎಕರೆವಾರು ಲೆಕ್ಕ ಇಟ್ಟಿರುವುದು.

SRI H. N. NANJE GOWA.—May I know whether tributaries are also included in these figures ? These figures dono't tally with the available figures. The total achacut we have developed in the basis is not that at all. It is something more,

SRI D. DEVARAJ URS.—I am taking down upto this point.

SRI K. PUTTASWAMY.—That right side terrian does not permit......

SRI D. DEVARAJ URS —That is all right. Why not you accept the principles ? ಹಿಂದೆ ಅವಕಾಶವಿರುವಾಗ ನಾವು ಇದನ್ನು ಏತಕ್ಕೆ ಮಾಡಬಾರದು ?

ಶ್ರೀ ಹೆಚ್. ಡಿ. ದೇವೇಗೌಡ.—ನೀರು ಎಷ್ಟು ಇದೆಯೋ ಅಷ್ಟನ್ನೂ ಉಪಯೋಗಿಸಿಕೊಳ್ಳುವುದು ಸರ್ಕಾರದ ಕರ್ತವ್ಯ. ಇದನ್ನು ಇಂಜಿನಿಯರ್ ಹೇಳುವ ಆಧಾರದ ಮೇಲೆಯೇ ಮಾಡಬೇಕು. ಎಲ್ಲೆಲ್ಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಉಪಯೋಗಿಸಿಕೊಳ್ಳುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ಹೊರಗಡೆ ಅನೇಕ ಅಭಿಪ್ರಾಯಗಳು ಪ್ರಕಟವಾಗಿವೆ. ಅನೇಕರು ಸರ್ಕಾರದ ಗಮನವನ್ನೂ ಸೆಳೆದಿದ್ದಾರೆ.

SRI H. D. DEVE GOWDA.—If water is available, give more. Who is going to prevent ?

SRI D. DEVARAJ URS.—I am not only answering your points. There are others who have asked so many questions I have to answer those questions also. In addition to this, outside also, so much is talked of. That is why in the beginning itself I made a remark that I am thankful to you for the opportunity you gave to express the views of the Government.

ಶ್ರೀ ಎಚ್. ಡಿ. ದೇವೇಗೌಡ —ನಾನು ಇದರ ಬಗ್ಗೆ ಎಲ್ಲೂ ಯಾವ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿಲ್ಲ. ಸಾಧ್ಯವಿದ್ದಷ್ಟು ನೀರನ್ನು ನಮ್ಮ ಹಕ್ಕಿಗನುಸಾರವಾಗಿ ಉಪಯೋಗಿಸಿಕೊಳ ಬೇಕೆನ್ನುವುದು ನನ್ನ ಅಭಿಪ್ರಾಯ. I have never issued any statement sofar as this aspect or controversy is concerned. I was keeping quiet. This is the proper forum for me.

SRI D. DEVARAJ URS.—Therefore I am extremely happy I never said that Mr. Deve Gowda's point of view is in my mind. I am glad he never made any statement. He has never committed either this way or that way He is silently watching

the whole development and now the has brought this subject matter. That is why I said I am thankful for the opportunity given to me through this motion Because of his Motion, I got this opportunity to express the views of the Government.

SRI KAGODU THIMMAPPA.—You also stand in the same position ..

SRI D. DEVARAJ URS.—What is that position.......

SRI KAGODU THIMMAPPA.—Neutral position ......

SRI D. DEVARAJ URS.--There is no such thing as neutral. He is not neutral He has said use the water wherever it is possible. Then, you raised a doubt whether the Government Order has been cancelled.

SRI H. D. DEVE GOWDA.—The Cabinet decision was taken on the 6th June. When once the previous order is there, then there is no need to take cabinet decision......

SRI D. DEVARAJ URS.—I must clarify that point. There was no Cabinet decision as such by the previous Government. It was only a Government Order by the Minister concerned or the Chief Minister.—Whatever it is. ಆಗ ಈ ವಿಚಾರವನ್ನು ಬರೀ ಮಂತ್ರಿ ಮಂತ್ರಿಗಳ ಮಟ್ಟದಲ್ಲಿಯೇ ಮಾಡಿದ್ದರು ನಾನು ಈ ಬಗ್ಗೆ ಸುಮಾರು ೧೯೭೪–೭೫ ನೇ ಸಾಲಿನಲ್ಲೇನೋ ಇರಬಹುದು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟೆ ಆಗ ಯಾರೋ ಒಬ್ಬ ಸದಸ್ಯರು ಈ ನಾಲೆಯ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಹೇಳಿದರು. ಅದನ್ನು ನಾನು ನೋಟ್ ಮಾಡಿಕೊಂಡು ಈ ಸ್ಥಿತಿಗೆ ತರಲಾಗಿದೆ. ಅಲ್ಲಿಂದ ಇಲ್ಲಿಗೆ ಹೆಚ್ಚು ಕಡಿಮೆ ಒಂದು ವರ್ಷವಾಗುತ್ತಾ ಬಂತು ಎಂದು ಕಾಣುತ್ತದೆ. ಈ ಮಧ್ಯದಲ್ಲಿ There were so many developments which we could not avoid. ಅನಂತರ ಇದು ೧೯೭೬ನೇ ಇಸವಿ ಡಿಸೆಂಬರ್‌ನಲ್ಲಿ ಮಂತ್ರಿಮಂಡಲದ ಸಭೆಗೆ ಬಂದಿತು.

ಶ್ರೀ ಕಾಗೋಡು ತಿಮ್ಮಪ್ಪ.—ತೀರ್ಮಾನವಾಗಿದ್ದು ಎಸ್. ಎಂ. ಕೃಷ್ಣ ಅವರು ಹೋದ ಮೇಲೆ.

ಶ್ರೀ ಡಿ. ದೇವರಾಜ ಅರಸ್.—ತಮಗೆ ಅದರಿಂದ ಫಾಯಿದೆ ಇದ್ದರೆ ಇಟ್ಟುಕೊಳ್ಳಿ. ಅದರಿಂದ ನಿಮಗೆ ಫಾಯಿದೆಯೂ ಇಲ್ಲವೆನ್ನುವುದು ನಮಗೆ ಗೊತ್ತಿದೆ. ಅದು ಮಂತ್ರಿಮಂಡಲದ ಸಭೆಗೆ ಬಂದಾಗ ಮಂಡ್ಯ ಜಿಲ್ಲೆಯ ಮಂತ್ರಿಗಳಾಗಿದ್ದವರು ಈ ಫೈಲನ್ನು ಸ್ವಲ್ಪ ನೋಡಬೇಕೆಂದರು. ನಾನು ಫೈಲನ್ನು ಕಳುಹಿಸಿದೆ ಅವರು ಅದನ್ನು ಸುಮಾರು ಮೂರು ತಿಂಗಳ ಕಾಲ ಆ ಫೈಲನ್ನು ಇಟ್ಟುಕೊಂಡಿದ್ದರು. ಅನಂತರ ಒಂದೆರಡು ಸಲ ಈ ವಿಚಾರವನ್ನು ಮುಂದೂಡಿದ್ದೂ ಆಯಿತು. ಕೊನೆಗೆ ತೀರ್ಮಾನವು ಆಯಿತು. ಅದಕ್ಕೆ ನಾನು ಏನು ಹೇಳಲಿ ಇದು ತೀರ್ಮಾನವಾದಾಗ ಅವರು ಇರಲಿಲ್ಲ. ಆದಿನ ಬೆಳಿಗ್ಗೆಯೇ ಅವರು ರಾಜೀನಾಮೆ ಕೊಟ್ಟಿದ್ದರು.

ಶ್ರೀ ಡಿ. ಹಲಗೇಗೌಡ.—ವರುಣಾ ನಾಲೆಯ ಬಗ್ಗೆ ಅವರು ಒಪ್ಪಿಗೆ ಕೊಟ್ಟಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನನಗೆ ಗೊತ್ತಿಲ್ಲ. ಈ ಬಗ್ಗೆ ಅವರು ನೀವು ಏನು ಮಾತನಾಡಿಕೊಂಡಿದ್ದೀರೋ ನನಗೆ ಗೊತ್ತಿಲ್ಲ.

ಶ್ರೀ ಡಿ. ಹಲಗೇಗೌಡ.—ಅವರು ರಾಜೀನಾಮೆ ಕೊಟ್ಟ ದಿವಸವೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ನಾವು ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮೊದಲು ಅವರು ರಾಜೀನಾಮೆ ಕೊಟ್ಟಿದರು.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಕಾಕತಾಲೀಯ ನ್ಯಾಯವಿರಬಹುದು.

ಶ್ರೀ ಜಿ ಮಾದೇಗೌಡ.—ಅವರು ಅದನ್ನು ವಿರೋಧ ಮಾಡಲಿಲ್ಲವೆಂದರೆ ಅವರು ಒಪ್ಪಿಗೆ ಕೊಟ್ಟಿದ್ದಾರೆಂದು ಅರ್ಥವೇ ?

ಶ್ರೀ ಡಿ. ದೇವರಾಜ ಅರಸ್.—ಅವರು ಸುಮ್ಮನಿದ್ದರು ಎಂದರೆ, ಅದಕ್ಕೆ ಒಪ್ಪಿಗೆ ಎಂದು ಅರ್ಥ ಇದಕ್ಕೆ ನಾನೊಬ್ಬನೇ ಅಲ್ಲ. ಇದಕ್ಕೆ ಕ್ಯಾಬಿನೆಟ್ ಮಂತ್ರಿಗಳೂ ಸಾಕ್ಷಿ ಇದ್ದಾರೆ.

ಇನ್ನು ಮಾನ್ಯ ದೇವೇಗೌಡರು ಈ ಬಗ್ಗೆ ಏನು ಸಲಹೆ ಕೊಟ್ಟಿದ್ದಾರೆ, ಆ ಬಗ್ಗೆ ಎರಡು ಮಾತುಗಳನ್ನು ಹೇಳ ಬೇಕಾಗಿದೆ ಈ ವಿಚಾರದಲ್ಲಿ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಆ ಕಮಿಟಿಯ ವರದಿಯನ್ನು ನಮಗೂ ತಿಳಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆಂದು ಅವರು ಹೇಳಿದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಇದರಲ್ಲಿ ಮುಚ್ಚುಮರೆ ಮಾಡಬೇಕಾದ ಅಗತ್ಯವಿಲ್ಲ. ಕಮಿಟಿ ಏಕೆ ರಚನೆ ಮಾಡಬೇಕಾಯಿತೆಂಬುದನ್ನು ಮಾನ್ಯ ಪುಟ್ಟಸ್ವಾಮಿಯವರೇ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಸರ್ಕಾರದ ಹತ್ತಿರ ಈ ಬಗ್ಗೆ ಅಂಕಿಅಂಶಗಳಿದ್ದರೂ ಸಹ ಯಾರಿಗೂ ಅನುಮಾನಕ್ಕೆ ಆಸ್ಪದವಿರಬಾರದೆಂಬ ದೃಷ್ಟಿಯಿಂದ ಬೆಸ್ಟ್ ಆಫ್ ದಿ ಪೀಪಲ್ ಇರತಕ್ಕಂಥ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವೆ. ಕೆಲವರು ಅನುಮಾನ ಬರುವಂತಹ ರೀತಿಯಲ್ಲಿ ಮಾತುಗಳನ್ನು ಎಸೆಯುತ್ತಾರೆ, ಹಿಂದೆ ಆ ರೀತಿ ಹೇಳುತ್ತಿದ್ದರು ಮುಂದೆಯೂ ಆ ರೀತಿ ಆಗಬಹುದೇನೋ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಆ ರೀತಿ ಹೇಳಿದರೆ ಇನ್ನು ನಾವು ಯಾರ ಮೇಲೆ ನಂಬಿಕೆ ಇಡಬೇಕು, ಎಂತಹವರನ್ನು ನಾವು ಹುಡುಕಿಕೊಂಡು ಹೋಗಬೇಕಾಗಿದೆ, ಈಗಿನ ಕಮಿಟಿಯಲ್ಲಿರುವವರು ಬೇರೆಯವರು ಹೇಳಿದಂತೆ ಬರೆಯುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಮತ್ತು ಅವರಿಗೆ ನಾನೇ ಹೇಳಿ ಬರೆಸುವಂತಹ ಕೆಲಸವನ್ನು ಇನ್ನೂ ಕಲಿಸಿಲ್ಲ,

ಶ್ರೀ ಡಿ. ಹಲಗೆಗೌಡ.—೧೯೭೬ನೇ ಇಸವಿಯಲ್ಲಿ ಈ ವಿಚಾರ ಬಂದಾಗ ತಾವೇ ಈ ರೀತಿ ಹೇಳಿದ್ದರಿಂದ ನಾನು ಹೇಳಬೇಕಾಯಿತು. ಬೇಕಾದರೆ ಪ್ರೊಸೀಡಿಂಗ್ಸನ್ನು ತೆಗೆದು ನೋಡಿದರೆ ತಮಗೆ ಗೊತ್ತಾಗುತ್ತದೆ. ಆಗ ಮಾನ್ಯ ಅಸ್ಸೂರೆಯವರು ಉತ್ತರ ಕೊಡುವಾಗ ಈ ವಿಚಾರ ಸಹ ಪ್ರಸ್ತಾಪಕ್ಕೆ ಬಂತು ಈ ನಾಲೆಯ ಬಗ್ಗೆ ಕೆಲವು ವರದಿಗಳಿವೆ, ಅದು ತಮ್ಮ ಗಮನಕ್ಕೆ ಬಂದಿದೆಯೋ ಎಂದು ಕೇಳಿದ್ದಕ್ಕೆ ತಾವು ವರದಿಗಳು ಬಂದಿರಬಹುದು, ಆಗಿನ ಕಾಲಕ್ಕೆ ಯಾವ ಒಂದು ಪರಿಸ್ಥಿತಿಯ ಒತ್ತಡದಿಂದಲೋ ಏನೋ ಅಂತಹ ವರದಿಗಳನ್ನು ಬರೆದಿರಬಹುದು, ನಾವು ಬೇಕಾದರೆ ಅಂತಹ ವರದಿಗಳನ್ನು ಬರೆಸಿಕೊಡುತ್ತೇವೆಂದು ತಾವು ಹೇಳಿದಿರಿ,

ಶ್ರೀ ಡಿ. ದೇವರಾಜ ಅರಸ್.—ಪರಿಸ್ಥಿತಿಯ ಒತ್ತಡ ಎಂದರೆ ಏನು, ತಾವು ಇಲ್ಲದ್ದನ್ನು ಮಾತನಾಡಬೇಡಿ. ಈಗ ಮತ್ತೆ ಹೊಸ ಒಂದು ಪಾಯಿಂಟ್ ಹೇಳುತ್ತಿದ್ದಾರೆ. ಪರಿಸ್ಥಿತಿಯ ಒತ್ತಡವೆಂದರೆ ನಾನು ಹೇಳಿಬರೆಸಿದೆ ಎಂದು ಅರ್ಥವೇ, ತಾವು ಆ ರೀತಿ ವ್ಯಾಖ್ಯಾನ ಮಾಡಿದರೆ ಹೇಗೆ ? ಆ ಸಮಯದಲ್ಲಿ ಹುಲಿಕೆರೆ ಟನೆಲ್ ತೆಗೆದಾಗ, ಅದು ಚಿಕ್ಕದು ಇನ್ನೊಂದು ತೆಗೆಯಬೇಕೆಂಬ ಯೋಚನೆಯನ್ನು ಮಾಡಿರಲಿಲ್ಲ. ಅಂದರೆ ೧೯೬೪ನೇ ಇಸವಿಯಲ್ಲಿ ಇಷ್ಟೆಲ್ಲಾ ಯೋಚನೆ ಮಾಡಿರಲಿಲ್ಲ. ಆಗ ೧೯೨೪ನೇ ಅಗ್ರಿಮೆಂಟ್ ಸಹ ಇತ್ತು, Every body has to take into account the existing 24th agreement. At the time of writing that report there was so many constraints. ಅದಕ್ಕೆ ತಾವು ಏನು ಏನೋ ತಿರುಗಿಸಿ ಹೇಳಬೇಡಿ ಮಾನ್ಯ ದೇವೇಗೌಡರು ಹೇಳಿರುವ ಸಲಹೆಯನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿಯೇ ನಾವು ಟೆಕ್ನಿಕಲ್ ಕಮಿಟಿ ಮಾಡಿರುವುದು.

Sri H. D. Devegowda,—After the report of the technical committee is out, summon us and hear us.

SRI D. DEVARAJ URS.—I will call some of you who are interested friends from Mandya District. Mysore Iam prepared to place it open to the public and get it printed. in thousands and thousands of copies and distribute it to the public. I have no objection. ಇಷ್ಟು ಹೇಳಿ ಕೊನೆಯದಾಗಿ ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಸಮಾಧಾನಕರವಾಗಿ ಕೇಳಿದ್ದಾರೆ. ನಾನೂ ಕೂಡ ಸಂಬಂಧಪಟ್ಟ ಸ್ನೇಹಿತರಲ್ಲಿ ಕೇಳಿಕೊಳ್ಳುವುದೇನೆಂದರೆ. ಆ ಒಂದು ವರದಿ ಬರುವವರೆಗೆ ಯಾವುದನ್ನೂ ಯೋಚನೆ ಮಾಡಬಾರದು ಅದರ ಬಗ್ಗೆ ಸ್ಟಡಿ ಮಾಡಬಾರದೆಂದು ನಾನು ಹೇಳುವುದಿಲ್ಲ. ನಮ್ಮ ಇಂಜಿನಿಯರ್ಸ್ ಇದ್ದಾರೆ ಅವರನ್ನು ತಾವುಗಳು ಯಾವಾಗ ಬೇಕಾದರೂ ಬಂದು ನೋಡಬಹುದು. ಆದಕಾರಣ ಇದರಲ್ಲಿ ಮುಚ್ಚುಮರೆ.

ಮಾಡಿಮಾಡಬೇಕಾದ್ದು ಏನೂ ಇಲ್ಲ. ಆ ಉದ್ದೇಶ ಸರ್ಕಾರಕ್ಕೆ ಇದೆ. ಈ ವಿಚಾರ ಪದೇಪದೇ ಬಂದು ಆಗಿನ ಕಾಲದಲ್ಲಿ ಅಂದರೆ ೧೯೭೦ನೇ ಇಸವಿಯಲ್ಲಿ ಅಳತೆ ಕೂಡ ಮಾಡಿಸಿದರು. ಮತ್ತು ನಾಲೆಯ ಕೆಲಸವನ್ನು ಸಹ ಪ್ರಾರಂಭ ಮಾಡಿಸಿದರು ಆದರೆ ಸ್ವಲ್ಪದರಲ್ಲಿಯೇ ಅದನ್ನು ಕೈಬಿಟ್ಟರು ಅದಕ್ಕೆ ರಾಜಕೀಯ ಪರಿಸ್ಥಿತಿ ಏನು ಇತ್ತೋ ಮತ್ತೊಂದು ಏನು ಇತ್ತೋ ನನಗೆ ಗೊತ್ತಿಲ್ಲ. At least I must compliment the then Government which did think of it and wanted to stop this work. Atleast people belonging to that party must feel happy that I have taken it up now,

ಶ್ರೀ ಜಿ. ಮಾದೇಗೌಡ.—ಆ ಕಮಿಟಿಗೆ ಒಂದು ತಿಂಗಳ ವಾಯಿದೆಯನ್ನು ಮಾತ್ರ ಕೊಟ್ಟಿದ್ದೀರಿ. ಈಗಾಗಲೇ ೮-೧೦ ದಿವಸಗಳಾಯಿತು, ಅದು ತನ್ನ ಕೆಲಸವನ್ನು ಇನ್ನೂ ಪ್ರಾರಂಭ ಮಾಡಿಲ್ಲ. ನಾವು ಸಹ ಅದರ ಮುಂದೆ ಹೋಗಿ ಅಂಕಿಅಂಶಗಳನ್ನು ಕೊಡಬೇಕಾಗಿರುವುದರಿಂದ ಮತ್ತು ಆ ಕಮಿಟಿಯವರು ಆ ಸ್ಥಳದ ಕೆಲವು ಭಾಗಗಳನ್ನು ನೋಡಬೇಕಾಗಿರುವುದರಿಂದ ಅದಕ್ಕೆ ಇನ್ನೂ ೧೫ ದಿವಸ ಒಂದು ತಿಂಗಳ ಕಾಲಾವಕಾಶವನ್ನು ಹೆಚ್ಚಿಗೆ ಕೊಡಬೇಕಾಗಿ ಬಂದರೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಸಮಯ ಬೇಕು ಎಂದರೆ ನಾವು ಕೊಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಆತುರ ಬೇಡ ಎಂದು ನಾನು ಹೇಳಿದ್ದು ?

Sri D. Devaraj urs.—If the Committee wants another 15 days, we will allow them, but this cannot be dragged on for months and months.

MADAM SPEAKER.—Now discussion is concluded.

ಶ್ರೀ ಎಚ್. ಡಿ ದೇವೇಗೌಡ —ಮಂಡ್ಯ ಅಸಿಟೇಟ್ ಕಾರ್ಖಾನೆಯನ್ನು ಮಾರಾಟ ಮಾಡುವ ಏರ್ಪಾಡಿದೆ ಎಂದು ನನಗೆ ತಿಳಿದುಬಂದಿದೆ ಆ ವಿಚಾರ ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ನಾನು ಆ ಬಗ್ಗೆ ಇಲ್ಲಿ ಮಾತನಾಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಈಗಲೇ ಆ ಬಗ್ಗೆ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ,—ಇಷ್ಟೊತ್ತು ಅಥವಾ ನಾಳೆ ಈ ಬಗೆ ತೀರ್ಮಾನವಾಗುತ್ತದೆ ಎಂದು ಕೇಳಿದೆ. ಅದಕ್ಕೆ ನಾನು ತಮ್ಮನ್ನು ಈಗಲೇ ಕೇಳಿದ್ದು.

ಅಧ್ಯಕ್ಷರು.—ಈ ಬಗ್ಗೆ ತಾವು ಬರೆದು ಕಳುಹಿಸಿರುವುದನ್ನು ಸರ್ಕಾರಕ್ಕೆ ಇನ್ನೂ ಕಳುಹಿಸಿಲ್ಲ.

Budget Estimates for 1977-78 Demands for Grant

Demand No. 56, 33, 35 *and* 36

SRI N. HUTCHAMASTHY GOWDA.—(Minister for Revenue) Madam Speaker, on the recommendation of the Governor, I beg to move.

> "That a sum not exceeding Rs 20 41, 90,000 inclusive of the sum granted on account be granted to the Government to defray the charges which will come in course of payment during the financial year ending 31st day of March 1978 in respect of Demand No 5 "Land Revenue etc".

> "That a sum not exceeding Rs. 1,19,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 6 "Stamps and Registration."